Swabhimani Sahakari

Pages : 30 / 20₹

Volume - 20
Issue - 04
April - 2023

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ



## ಪ್ರಜಾಪ್ರಭುತ್ವದ ಹಬ್ಬ
## ಕರ್ನಾಟಕ ವಿಧಾನಸಭೆ ಚುನಾವಣೆ: 2023

**224 ಕ್ಷೇತ್ರಗಳಿಗೆ ಒಂದೇ ಹಂತದ ಚುನಾವಣೆ**

ಮೇ 10, 2023ರಂದು ಮತದಾನ,
ಮೇ 13ರಂದು ಫಲಿತಾಂಶ



ಏಪ್ರಿಲ್ 4,
ಮಹಾವೀರ ಜಯಂತಿ



ಏಪ್ರಿಲ್ 07,
ಗುಡ್ ಫ್ರೈ ಡೇ



ಏಪ್ರಿಲ್ 14,
ಅಂಬೇಡ್ಕರ್ ಜಯಂತಿ



ಏಪ್ರಿಲ್ 23,
ಬಸವ ಜಯಂತಿ



ಏಪ್ರಿಲ್ 25,
ಶಂಕರ ಜಯಂತಿ

ಸೌಹಾರ್ದ ಸಹಕಾರಿಗಳ
ಸಂಖ್ಯೆ : 5838

ಇ–ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1622

ಸ್ವಾಭಿಮಾನಿ ಸಹಕಾರಿ





ಜಿ. ನಂಜನಗೌಡ

“ರಾಜ್ಯದ ಎಲ್ಲ ಸಹಕಾರಿಗಳಿಗೆ ಗುಡ್ ಫ್ರೈಡೇ, ಅಂಬೇಡ್ಕರ್ ಜಯಂತಿ, ಬಸವ ಜಯಂತಿ, ಶಂಕರಾಚಾರ್ಯರ ಜಯಂತಿ, ರಾಮಾನುಜಾಚಾರ್ಯರ ಜಯಂತಿ ಹಾಗೂ ರಂಜಾನ್ ಹಬ್ಬದ ಶುಭಾಶಯಗಳು. ಹೊಸ ವರ್ಷ ಶೋಭಾಕೃತ/ಶೋಭನ ಸಂವತ್ಸರ ಪ್ರಾರಂಭವು ಭಾರತೀಯ ಸಂಸ್ಕೃತಿಯ ಪುನರ್ಮನನ, ಸಂಭ್ರಮದ ಸಡಗರದ ಹಬ್ಬಗಳು, ಸಮಾಜಕ್ಕೆ ಮಾರ್ಗದರ್ಶನ ಮಾಡಿದ ಪುಣ್ಯಪುರುಷರ ಹಾಗೂ ಹಿರಿಯರ ಸ್ಮರಣೆಯಿಂದ ನಮ್ಮ ಭವಿಷ್ಯಕ್ಕೆ ಉತ್ತಮ ದಾರಿಯ ಅನ್ವೇಷಣೆಯ ಪರ್ವದ ಪ್ರಾರಂಭ ಎಂದು ಭಾವಿಸಿದ್ದೇನೆ. ಎಲ್ಲ ಸಹಕಾರಿ ಬಂಧುಗಳಿಗೂ ಹಾಗೂ ಅವರ ಕುಟುಂಬ ವರ್ಗದವರಿಗೂ ದೇವರು ಸುಖ ಶಾಂತಿ ಹಾಗೂ ನೆಮ್ಮದಿಯನ್ನು ನೀಡಲಿ ಅವರ ಜೀವನದಲ್ಲಿ ಉತ್ತರೋತ್ತರ ಅಭಿವೃದ್ಧಿಯನ್ನು ನೀಡಲಿ ಎಂದು ಹಾರೈಸುತ್ತೇನೆ.”

# ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯಾದಾದ್ಯಂತ ಅರ್ಥಪೂರ್ಣ ಮಹಿಳಾ ದಿನಾಚರಣೆ ಮಹಿಳೆಯರು ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ಅಗತ್ಯತೆಯ ಕುರಿತು ವಿಸ್ತೃತ ಮಾಹಿತಿ ನೀಡಿಕೆ.

ರಾಜ್ಯದ ಎಲ್ಲ ಸಹಕಾರಿಗಳಿಗೆ ಗುಡ್ ಫ್ರೈಡೇ, ಅಂಬೇಡ್ಕರ್ ಜಯಂತಿ, ಬಸವ ಜಯಂತಿ, ಶಂಕರಾಚಾರ್ಯರ ಜಯಂತಿ, ರಾಮಾನುಜಾಚಾರ್ಯರ ಜಯಂತಿ ಹಾಗೂ ರಂಜಾನ್ ಹಬ್ಬದ ಶುಭಾಶಯಗಳು. ಹೊಸ ವರ್ಷ ಶೋಭಾಕೃತ/ಶೋಭನ ಸಂವತ್ಸರ ಪ್ರಾರಂಭವು ಭಾರತೀಯ ಸಂಸ್ಕೃತಿಯ ಪುನರ್ಮನನ, ಸಂಭ್ರಮದ ಸಡಗರದ ಹಬ್ಬಗಳು, ಸಮಾಜಕ್ಕೆ ಮಾರ್ಗದರ್ಶನ ಮಾಡಿದ ಪುಣ್ಯಪುರುಷರ ಹಾಗೂ ಹಿರಿಯರ ಸ್ಮರಣೆಯಿಂದ ನಮ್ಮ ಭವಿಷ್ಯಕ್ಕೆ ಉತ್ತಮ ದಾರಿಯ ಅನ್ವೇಷಣೆಯ ಪರ್ವದ ಪ್ರಾರಂಭ ಎಂದು ಭಾವಿಸಿದ್ದೇನೆ. ಎಲ್ಲ ಸಹಕಾರಿ ಬಂಧುಗಳಿಗೂ ಹಾಗೂ ಅವರ ಕುಟುಂಬ ವರ್ಗದವರಿಗೂ ದೇವರು ಸುಖ ಶಾಂತಿ ಹಾಗೂ ನೆಮ್ಮದಿಯನ್ನು ನೀಡಲಿ ಅವರ ಜೀವನದಲ್ಲಿ ಉತ್ತರೋತ್ತರ ಅಭಿವೃದ್ಧಿಯನ್ನು ನೀಡಲಿ ಎಂದು ಹಾರೈಸುತ್ತೇನೆ.

ಬಂಧುಗಳೇ, ಮಾರ್ಚ್ 8 ಪ್ರತಿವರ್ಷದಂತೆ ಈ ಬಾರಿಯೂ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ವಿಶ್ವದಾದ್ಯಂತ ಅತ್ಯಂತ ಉತ್ಸಾಹದಿಂದ ಆಚರಿಸಿರುವ ವರದಿಗಳನ್ನು ಗಮನಿಸಿದ್ದೇನೆ. ಸಹಕಾರಿ ಕ್ಷೇತ್ರದಲ್ಲಿ ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರು ಹೆಚ್ಚು ಶೈಕ್ಷಣಿಕ, ಆರೋಗ್ಯ, ಸಾಮಾಜಿಕ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿ ಹಾಗೂ ಪ್ರಸ್ತುತ ತಂತ್ರಜ್ಞಾನಗಳಲ್ಲಿಯೂ ಹೆಚ್ಚು ಮಾಹಿತಿಯನ್ನು ಹೊಂದಿರುವುದು ಅಗತ್ಯ ಎಂಬುದರ ಬಗ್ಗೆ ಚರ್ಚೆ, ವಿಚಾರಗೋಷ್ಠಿಗಳು ಸಭೆ ಸಮ್ಮೇಳನಗಳು ನಡೆದಿರುವುದು ಮಹಿಳೆಯರ ಅಭಿವೃದ್ಧಿ ಬಗ್ಗೆ ಸಮಾಜ, ಸರಕಾರ ಹಾಗೂ ಸಹಕಾರ ಕ್ಷೇತ್ರದ ಆಸಕ್ತಿ ಹಾಗು ಕಾಳಜಿಯನ್ನು ಬಿಂಬಿಸುತ್ತದೆ.

ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ದಿನಾಂಕ 11.03.2023, ಬೆಂಗಳೂರಿನಲ್ಲಿ ಹಾಗೂ ಬೆಳಗಾವಿಯಲ್ಲಿ, ದಿನಾಂಕ 13.3.2023 ರಂದು ಕಲಬುರಗಿಯಲ್ಲಿ, ದಿನಾಂಕ 14.03.2023 ರಂದು ಮೈಸೂರು ವಿಭಾಗದಿಂದ ಮಂಗಳೂರಿನಲ್ಲಿ ಆಚರಿಸಿದ ಮಹಿಳಾ ದಿನಾಚರಣೆ ಸಭೆಗಳಲ್ಲಿ ಭಾಗವಹಿಸಿದ ಅತಿಥಿಗಳು ಸಂಪನ್ಮೂಲ ವ್ಯಕ್ತಿಗಳು ನೀಡಿದ ಉಪನ್ಯಾಸಗಳು ಮಹಿಳೆಯರಿಗೆ ಈ ಸಮಾಜದಲ್ಲಿ ಕಾರ್ಯನಿರ್ವಹಿಸುವುದಕ್ಕೆ ಏನೆಲ್ಲ ಅವಕಾಶಗಳಿವೆ ಎಂಬುವ ಬಗ್ಗೆ ವಿಸ್ತಾರವಾಗಿ ಅರ್ಥವತ್ತಾಗಿ ತಿಳಿಸಿರುವುದು ಸಭೆಗಳಲ್ಲಿ ಭಾಗವಹಿಸಿದ ಮಹಿಳೆಯರನ್ನು ಹೆಚ್ಚು ಆಕರ್ಷಿಸಿದೆ. ಭಾಗವಹಿಸಿದ ಮಹಿಳೆಯರ ಹೇಳಿಕೆ ಪ್ರಕಾರ ನಮಗೆ ತುಂಬ ಉಪಯುಕ್ತ ಜ್ಞಾನ ಹಾಗೂ ಮಾಹಿತಿ ನೀಡಲಾಗಿದೆ ನಾವು ಎಲ್ಲವನ್ನು ಅಳವಡಿಸಿಕೊಳ್ಳುತ್ತೇವೆ ಎಂದು ತಿಳಿಸಿರುವುದು ಮತ್ತು ಈ ಸಭೆಗಳಲ್ಲಿ ಅನೇಕ ಮಹಿಳಾ ಸಾಧಕೀಯರನ್ನು ಗುರುತಿಸಿ ಗೌರವಿಸಿರುವುದು ನಮಗೆಲ್ಲ ಪ್ರೇರೇಪಣೆಯಾಗಿದೆ ಎಂದು ತಿಳಿಸಿರುವುದು ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಮಹಿಳಾ ದಿನಾಚರಣೆ ಅರ್ಥಪೂರ್ಣವಾಗಿದೆ ಎಂದು ಅಭಿಪ್ರಾಯವಾಗಿದೆ.

ಮಹಿಳೆಯರು ವೇದಕಾಲದಿಂದಲೂ ಸಮಾಜದಲ್ಲಿ ಅತ್ಯಂತ ಗೌರವಾನ್ವಿತಳು. ತಾಯಿಯಾಗಿ ಸಹೋದರಿಯಾಗಿ, ಮಗಳಾಗಿ, ಮಡದಿಯಾಗಿ ಅತ್ಯಂತ ಜವಾಬ್ದಾರಿಯುತ ಕಾರ್ಯಗಳನ್ನು ನಿರ್ವಹಿಸುತ್ತಿರುವುದು ಸತ್ಯ. ಆದರೆ ಇತ್ತೀಚಿನ ಸಾಮಾಜಿಕ ಬದಲಾವಣೆಯಿಂದಾಗಿ ಆಗುತ್ತಿರುವ ಅನೇಕ ಕೆಲಸಕಾರ್ಯಗಳಲ್ಲಿ ಮಹಿಳೆಯರು ಅವಕಾಶ ವಂಚಿತರಾಗದಂತೆ ಕಾರ್ಯನಿರ್ವಹಿಸುವುದು ಸಹಕಾರಿಗಳ ಸಮಾಜದ ಹಾಗೂ ಸರಕಾರಗಳ ಕಾರ್ಯವೆನಿಸಿದೆ. ಈ ಬಗ್ಗೆ ನಾವು ನೀವು ಎಲ್ಲರೂ ಸೇರಿ ಕಾರ್ಯನಿರ್ವಹಿಸೋಣ.

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು
ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು
ಶ್ರೀ ಶರಣಗೌಡ ಜಿ. ಪಾಟೀಲ
ಸಂಪಾದಕರು
ಶ್ರೀ ವಿ.ಜೆ. ಕಾರಕೂನ
ಸಂಚಾಲಕರು
ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ :
080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ........................................ 2
ಸಂಪಾದಕೀಯ........................................ 3
ಜ್ಞಾನ ಜ್ಯೋತಿ........................................ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ........................................ 05–11
ಸೌಹಾರ್ದ ಸಹಕಾರಿಗಳ ಸಮಾಚಾರಗಳು .... ........................................ 12–20
ಲೇಖನಗಳು :
97ನೇ ತಿದ್ದುಪಡಿ ನಂತರ ಸೌಹಾರ್ದ ಕಾಯಿದೆ 1997 ಮತ್ತು ಸಹಕಾರ ಕಾಯಿದೆ 1959 ಆದ ಪರಿಣಾಮಗಳು – ಬದಲಾವಣೆ – ಒಂದು ವಿಮರ್ಷೆ ........................................ 21–22
ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ವಿವಿಧ ಸಮಿತಿಗಳು, ಆಯೋಗಗಳು ಹಾಗೂ ಮುಂದಿನ ದಾರಿ ........................................ 28–30

# ಸಂಪಾದಕೀಯ

## ವೃತ್ತಿಪರತೆ ಮತ್ತು ಪಾರದರ್ಶಕತೆ ಸಹಕಾರಿ ಕ್ಷೇತ್ರದ ಅಭಿವೃದ್ಧಿಯ ಅಡಿಪಾಯ.

ಕೇಂದ್ರ ಸರಕಾರ ಕಳೆದ ವರ್ಷ ಕೇಂದ್ರದಲ್ಲಿ ಸಹಕಾರಿ ಕ್ಷೇತ್ರದ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಸಹಕಾರ ಕ್ಷೇತ್ರಕ್ಕಾಗಿ ಪ್ರತ್ಯೇಕ ಸಹಕಾರ ಸಚಿವಾಲಯ ಸ್ಥಾಪನೆ ಮಾಡಿದಾಗ "ಸಹಕಾರದಿಂದ ಸಮೃದ್ಧಿ"ಎಂದು ರಾಷ್ಟ್ರೀಯ ಸಹಕಾರಿ ಘೋಷಣೆಯನ್ನು ಜನತೆಗೆ ನೀಡಿದೆ. ಈ ಘೊಷಣೆಯನ್ನು ಸಕಾರಗೊಳಿಸುವಲ್ಲಿ ಕಾರ್ಯನಿರತವಾಗಿದೆ. ರಾಷ್ಟ್ರೀಯ ಸಹಕಾರಿ ನೀತಿ ನಿರೂಪಣೆಗಾಗಿ ಸಮಿತಿ ರಚಿಸಲಾಗಿದೆ. ಸಮಿತಿ ತನ್ನ ಅಂತಿಮ ವರದಿಯನ್ನು ಸಿದ್ಧಪಡಿಸುತ್ತಿದೆ. ರಾಷ್ಟ್ರೀಯ ಸಹಕಾರ ವಿಶ್ವವಿದ್ಯಾಲಯ ಸ್ಥಾಪನೆಯ ಕಾರ್ಯ ವೇಗವಾಗಿ ನಡೆದಿದೆ. ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಕಾಮನ್ ಸಾಫ್ಟ್ ವೇರ ಹಾಗೂ ಏಕರೂಪ ಲೆಕ್ಕಪತ್ರಗಳ ನಿರ್ವಹಣೆ, ಕೃಷಿ ಪತ್ತಿನ ಸಹಕಾರ ಸಂಘಗಳ ಸಂಖ್ಯೆಯನ್ನು ಹೆಚ್ಚಿಸಿ ಪ್ರತಿಯೊಂದು ಗ್ರಾಮದಲ್ಲಿ ಒಂದು ಕೃಷಿ ಪತ್ತಿನ ಸಹಕಾರ ಸ್ಥಾಪನೆ ಕಾರ್ಯಗಳು ಪರಿಣಾಮಕಾರಿಯಾಗಿ ನಡೆಯುತ್ತಿವೆ. ಕೇಂದ್ರ ಸಹಕಾರ ಸಚಿವಾಲಯದ ಜವಾಬ್ದಾರಿಯನ್ನು ನಿರ್ವಹಿಸುತ್ತಿರುವ ಹಿರಿಯ ಸಹಕಾರಿ ಶ್ರೀ ಅಮಿತ ಶಾರವರು ಸಹಕಾರ ಕ್ಷೇತ್ರದ ಅಭಿವೃದ್ಧಿಗಾಗಿ ನಿರಂತರ ಪರಿಶ್ರಮವಹಿಸಿ ಸಹಕಾರ ಕ್ಷೇತ್ರದಿಂದಲೇ ಈ ರಾಷ್ಟ್ರದ ಅಭಿವೃದ್ಧಿ ಸಾಧ್ಯ ಎನ್ನುವುದನ್ನು ಧೃಡಪಡಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿರುವುದು ಈ ದೇಶದ ಸಹಕಾರಿಗಳಿಗೆಲ್ಲ ಮಾದರಿ.

ಸಹಕಾರ ಸಚಿವರ ವೇಗದ ಕಾರ್ಯಚಟುವಟಿಕೆಗಳಲ್ಲಿ ಅವರ ಸರಿಸಮನಾಗಿ ಕಾರ್ಯನಿರ್ವಹಿಸುವ ಶಕ್ತಿ ಸಾಮರ್ಥ್ಯಗಳನ್ನು ನಾವು ಸಹಕಾರಿಗಳು ಬೆಳಸಿಕೊಳ್ಳಬೇಕಾಗಿದೆ ಅದಕ್ಕಾಗಿ ಸಹಕಾರಿಗಳಲ್ಲಿ ವೃತ್ತಿಪರತೆ ಹಾಗೂ ಆಡಳಿತದಲ್ಲಿ ಪಾರದರ್ಶಕತೆಯ ಅವಶ್ಯಕತೆ ಇದೆ. ಕೇಂದ್ರ ಸಹಕಾರ ಸಚಿವಾಲಯ ಈ ನಿಟ್ಟಿನಲ್ಲಿ ದೇಶದ ಎಲ್ಲ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಗಣಕೀಕರಣ ಮಾಡುವ ದಿಟ್ಟ ಹೆಜ್ಜೆ ಸ್ವಾಗತಾರ್ಹವಾಗಿದೆ. ಸಹಕಾರ ಸಂಸ್ಥೆಗಳು ಕೇವಲ ಸೇವಾ ಸಂಸ್ಥೆಗಳಲ್ಲ. ಲಾಭ ಗಳಿಸುವ ಉತ್ತಮ ಆರ್ಥಿಕ ಸಂಘಟನೆಗಳು ಆಗಿವೆ. ಆರ್ಥಿಕ ಸಂಘಟನೆಗಳನ್ನು ಅಚ್ಚುಕಟ್ಟಾಗಿ ಆರ್ಥಿಕ ಶಿಸ್ತು ಅಳವಡಿಸಿ ಅಭಿವೃದ್ಧಿ ಪಥದತ್ತ ಸಾಗುವಂತಾಗಬೇಕಾದರೆ ಸಹಕಾರಿ ಸಂಸ್ಥೆಗಳಲ್ಲಿ ವೃತ್ತಿಪರತೆ ಹಾಗೂ ಪಾರದರ್ಶಕತೆಗೆ ಆದ್ಯತೆ ನೀಡುವುದು ಅತ್ಯವಶ್ಯಕ.

ವೃತ್ತಿಪರತೆಯೆಂದಾಗ ಸಹಕಾರ ಸಂಘಗಳು, ಅಧ್ಯಕ್ಷರು ಆಡಳಿತ ಮಂಡಳಿ ಸದಸ್ಯರು ವ್ಯವಸ್ಥಾಪಕ ನಿರ್ದೇಶಕರು ಸದಸ್ಯರು ಹಾಗೂ ಎಲ್ಲ ಅಧಿಕಾರಿಗಳು ತಾವು ನಿರ್ವಹಿಸುವ ದೈನಂದಿನ ಪ್ರತಿಯೊಂದು ಕಾರ್ಯಗಳು ಸುವ್ಯವಸ್ಥಿತ ರೀತಿಯಲ್ಲಿ ಯಾವುದೇ ಲೋಪದೋಷವಾಗದಂತೆ ಅತ್ಯಂತ ಕಾಳಜಿಯಿಂದ ನಿರ್ವಹಿಸುವುದು. ಇದಕ್ಕಾಗಿ ಪ್ರತಿಯೊಂದು ಕಾರ್ಯದ ಅಧ್ಯಯನ ತಿಳುವಳಿಕೆ, ಕಾರ್ಯಾಚರಣೆಯಲ್ಲಿ ಉಪಯೋಗಿಸಬಹುದಾದ ಸಾಧನಗಳು ಸ್ವಾಭಾವಿಕ ಸಂಪನ್ಮೂಲಗಳು ಮಾನವ ಸಂಪನ್ಮೂಲಗಳು ಕಾನೂನು ನಿಯಮಗಳು, ಸರಕಾರದ ಆದೇಶಗಳು ಹಾಗೂ ಸುತ್ತೋಲೆ ಇತ್ಯಾದಿಗಳ ಸಂಪೂರ್ಣ ಮಾಹಿತಿ ಹೊಂದಿರಬೇಕು ಮತ್ತು ಎಲ್ಲವೂ ಅತ್ಯಂತ ಪಾರದರ್ಶಕವಾಗಿರಬೇಕು.

ಸಹಕಾರ ಸಂಸ್ಥೆಗಳಲ್ಲಿ ಆಡಳಿತದ ಜವಾಬ್ದಾರಿ ಆಡಳಿತ ಮಂಡಳಿಗೆ ಇರುವುದರಿಂದ ಆಡಳಿತ ಮಂಡಳಿಯವರು ವಾರ್ಷಿಕ ಸಾಮಾನ್ಯ ಸಭೆಯ ಅನುಮೋದನೆ ಪಡೆದು ಕಾರ್ಯನಿರ್ವಹಿಸುವುದು ಅಗತ್ಯ, ಆಡಳಿತ ಮಂಡಳಿಯವರು ಸಿದ್ಧಿಪಡಿಸುವ ಕಾರ್ಯಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಸಂಸ್ಥೆಯ ಕಾರ್ಯದರ್ಶಿ ಹಾಗೂ ಅಧಿಕಾರಿಗಳು ಸಂಪೂರ್ಣವಾಗಿ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ಮಾಹಿತಿ ಹಾಗೂ ಜ್ಞಾನವನ್ನು ಹೊಂದಿ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸಲು ಸಹಕಾರ ನೀಡಬೇಕು ಮತ್ತು ಎಲ್ಲ ಹಂತಗಳಲ್ಲೂ ಪಾರದರ್ಶಕತೆಯನ್ನು ಹೊಂದಿದಾಗ "ಸಹಕಾರ ದಿಂದ ಸಮೃದ್ಧಿ' ಸಾಧಿಸಲು ಹೊರಟಿರುವ ಕೇಂದ್ರ ಸರಕಾರದ ಕಾರ್ಯನಿರ್ವಹಣೆಗೆ ಸ್ಪಂಧಿಸಿದಂತಾಗುತ್ತದೆ. ನೆನಪಿರಲಿ. ವೃತ್ತಿಪರತೆ ಮತ್ತು ಆಡಳಿತದಲ್ಲಿ ಪಾರದರ್ಶಕತೆ ಸಹಕಾರಿಗಳ ಜವಾಬ್ದಾರಿ.



## ಜ್ಞಾನ ಜ್ಯೋತಿ

– ಶ್ರೀ ಸಿದ್ದೇಶ್ವರ ಸ್ವಾಮೀಜಿ, ವಿಜಯಪುರ
ಪ್ರವಚನ ಸಂಗ್ರಹ : ಶ್ರೀಮತಿ ಸವಿತಾ ಎನ್.ಇ

## "ಭರವಸೆಯೇ ಬದುಕಿನ ಬೆಳಕು"

ಬದುಕಲು ಗಾಳಿ ನೀರು ಆಹಾರ ಎಷ್ಟು ಮುಖ್ಯವೋ, ನಾಳೆಯ ಬಗ್ಗೆ ಭರವಸೆ ಇರುವುದುಕೂಡ ಅಷ್ಟೇ ಮುಖ್ಯ. ಬದುಕೆಂಬ ದಾರಿಯಲ್ಲಿ ಅನಿ–ರೀಕ್ಷಿತ ತಿರುವುಗಳು ಸಾಮಾನ್ಯ. ಜೀವನದಲ್ಲಿ ಸೋಲು–ಗೆಲುವುಗಳು ಇದ್ದದ್ದೇ . ಗೆದ್ದಾಗ ಹಿಗ್ಗದೆ , ಸೋತಾಗ ಕುಗ್ಗದೆ ಎಲ್ಲವನ್ನೂ ಸಮನಾಗಿ ಸ್ವೀಕರಿಸಬೇಕು. ನಮ್ಮ ಮೇಲೆ ನಮಗೆ ಭರವಸೆ ಇದ್ದಾಗ ಅದೆಷ್ಟೇ ಕಷ್ಟ ಬಂದರೂ ಧೈರ್ಯದಿಂದ ಎದುರಿಸಿ, ಬದುಕಿನಲ್ಲಿ ಯಶಸ್ಸನ್ನು ಪಡೆಯಬಹುದು. ಭರವಸೆಯು ಒಬ್ಬರ ಜೀವನದಲ್ಲಿನ ಅಥವಾ ಸಾಮಾನ್ಯವಾಗಿ ವಿಶ್ವದಲ್ಲಿನ ಘಟನೆಗಳು ಮತ್ತು ಸಂದರ್ಭಗಳಿಗೆ ಸಂಬಂಧಿಸಿದಂತೆ ಸಕಾರಾತ್ಮಕ ಫಲಿತಾಂಶಗಳ ನಿರೀಕ್ಷೆಯನ್ನು ಆಧರಿಸಿದ ಒಂದು ಆಶಾವಾದಿ ಮಾನಸಿಕ ಸ್ಥಿತಿ.

**ಬದುಕಿಗೇಕೆ ಬೇಕು ಭರವಸೆ ?**

ಬದುಕಿನಲ್ಲಿ ಭರವಸೆ ಎಂಬುವುದು ಅತಿಮುಖ್ಯವಾದದ್ದು ಜೀವನದಲ್ಲಿ ಕಷ್ಟದ ಕ್ಷಣಗಳನ್ನು ಎದುರಿಸಲು ಮುಂದೆ ಒಳ್ಳೆಯ ದಿನಗಳು ಬರುವುದೆಂಬ ಭರವಸೆ ಬೇಕೆಬೇಕು ಇಲ್ಲದಿದ್ದರೆ ಬದುಕು ಇನ್ನಷ್ಟು ಬರ್ಬರವಾಗುವುದು. ಬದುಕಿನಲ್ಲಿ ಪ್ರತಿಯೊಬ್ಬರಿಗೂ ಒಂದಲ್ಲ ಒಂದು ರೀತಿಯ ಆಸೆ ನಿರೀಕ್ಷೆಗಳು ಇದ್ದೇ ಇರುತ್ತದೆ. ಸಾಂಸಾರಿಕ ಜೀವನದಲ್ಲಿ, ವ್ಯವಹಾರ ಕ್ಷೇತ್ರದಲ್ಲಿ, ಉದ್ಯೋಗದಲ್ಲಿ, ಹಣಕಾಸಿನ ವಿಷಯದಲ್ಲಿ ಹೀಗೆ ...ಆದರೆ ಎಲ್ಲವೂ ಎಲ್ಲಾ ಸಮಯದಲ್ಲೂ ನಾವಂದುಕೊಂಡಂತೆ ನಡೆಯುವುದಿಲ್ಲ.

ಇದಕ್ಕೆ ಸಂಬಂಧಿಸಿದ ಒಂದು ಪುಟ್ಟ ಕಥೆಯನ್ನು ವ್ಯಕ್ತಪಡಿಸುತ್ತೇನೆ. ಅಂದು ಕೊರೆಯುವ ಛಳಿ. ಆ ಊರಿನ ಶ್ರೀಮಂತ ಭರವಸೆರಾಯರು ತಮ್ಮ ಮನೆ ಮುಂದೆ ಓರ್ವ ಮುದುಕ ಛಳಿಗೆ ನಡುಗುತ್ತಾ ನಿಂತಿರುವುದು ಕಂಡು ಅವನ ಬಳಿ ಹೋಗಿ ಕೇಳಿದರು ಈ ಛಳಿಯಲ್ಲಿ ಅದು ಹೇಗೆ ನಡುಗುತ್ತಾ ನಿಂತಿದ್ದೀರಿ ನಿಮಗೆ ಛಳಿ ಆಗುವುದಿಲ್ಲವೆ..? ಮುದುಕ ಉತ್ತರಿಸಿದ ನನ್ನ ಬಳಿ ಹೊದೆಯಲು ಕಂಬಳಿ, ಶಾಲು, ಕೋಟು ಏನೂ ಇಲ್ಲ. ನನಗೆ ಇದು ಬಹಳ ದಿನದಿಂದ ಅಭ್ಯಾಸ ಆಗಿಹೋಗಿದೆ. ಅವುಗಳಿಲ್ಲದೆ ನಾನು ಇರಬಲ್ಲೆ.... ಭರವಸೆರಾಯ ಹೇಳಿದ ಯೋಚಿಸ ಬೇಡ ನಾನು ನಿನಗೆ ಅವೆಲ್ಲವನ್ನೂ ನನ್ನ ಮನೆಯಿಂದ ತಂದುಕೊಡುತ್ತೇನೆ ನೀನು ಇಲ್ಲೇ ಇರು ಎಂದು ಹೇಳಿ ಮನೆಯೊಳಗೆ ಹೋದ. ಭರವಸೆರಾಯ ಮನೆ ಒಳಗೆ ಹೋಗುತ್ತಿದ್ದಂತೆಯೇ ಅವನ ವ್ಯವಹಾರದ ಗಡಿಬಿಡಿಯಲ್ಲಿ ಈ ಮುದುಕನನ್ನು ಮರೆತೇಬಿಟ್ಟ. ಮಾರನೇ ದಿನ ಬೆಳಗ್ಗೆ ಎದ್ದು ಕಿಟಕಿಯಿಂದ ಕೆಳಗೆ ನೋಡಿದಾಗ ಮುದುಕ ಮಲಗಿರುವುದು ಕಂಡು ನೆನಪಾಗಿ ಓಡೋಡಿ ಬಂದ ಆದರೆ ಕಾಲ ಮಿಂಚಿಹೋಗಿತ್ತು ಮುದುಕ ಛಳಿಗೆ ಮರಗಟ್ಟಿ ಮರಣವನ್ನಪ್ಪಿದ್ದ. ಭರವಸೆರಾಯ ಕುಸಿದು ಕೆಳಗೆ ಕುಳಿತು ನೋಡಿದರೆ ಮುದುಕನ ಬಳಿ ಒಂದು ಪತ್ರ ಬಿದ್ದಿತ್ತು. ಅಯ್ಯ....ಇಷ್ಟು ದಿನ ಇದಕ್ಕಿಂತ ಹೆಚ್ಚು ಛಳಿ ತಡೆಯುವ ಶಕ್ತಿ ನನ್ನಲ್ಲಿತ್ತು. ಆದರೆ ನಿನ್ನ ಭರವಸೆಯ ಆ ಕಂಬಳಿ, ಶಾಲು, ಕೋಟು ಕೊಡುತ್ತೇನೆಂಬ ಹೇಳಿಕೆಯ ಆಸೆಯಿಂದ ನಾನು ನನ್ನ ಸ್ಥೈರಣಾ ಶಕ್ತಿ ಕಳೆದುಕೊಂಡು ಛಳಿ ತಡೆಯಲಾರದೆ ಇಂದು ಪ್ರಾಣಬಿಡುತ್ತಿದ್ದೇನೆ....

ನನ್ನದೊಂದು ಬಿನ್ನಹ ಪೂರೈಸಲಾಗದ ಭರವಸೆ ಯಾರಿಗೂ ನೀಡಬೇಡ. ಅದು ನಿನಗೆ ಏನೂ ಅಲ್ಲ. ಆದರೆ ನಿನ್ನ ಭರವಸೆ ಪಡೆದವ–ರಿಗೆ ಅದೇ ಎಲ್ಲಾ.....ಭರವಸೆ ಬೆಳಕಾಗಬೇಕೇ ಹೊರತು ಭರವಸೆಯಾಗಿಯೇ ಉಳಿಯಬಾರದು.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳ ಒಟ್ಟು 27,121 ಆಗಿರುತ್ತದೆ. ಇವುಗಳ ಪೈಕಿ 15,089 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 12,032.

**ಮಾರ್ಚ್ ತಿಂಗಳ ಪ್ರಕರಣಗಳು :** ದಾವಾಪ್ರಕರಣ 460 ಇತ್ಯರ್ಥಗೊಂಡ ಪ್ರಕರಣಗಳು 360

**ಅಮಲ್ಜಾರಿ ಪ್ರಕರಣಗಳು :** ಒಟ್ಟು 5743 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 1041 ಪ್ರಕರಣಗಳು ಇತ್ಯರ್ಥಗೊಂಡಿದ್ದು, 4,702 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 1029 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 581 ಪ್ರಕರಣಗಳು ಇತ್ಯರ್ಥಗೊಂಡಿದ್ದು 448 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಮಾರ್ಚ್ ತಿಂಗಳಿನಲ್ಲಿ 108 ಅಮಲ್ಜಾರಿ ಪ್ರಕರಣ ದಾಖಲಾಗಿರುತ್ತವೆ.

# ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ ಹಾಗೂ ಪ್ರಾಂತೀಯ ಕಛೇರಿಯಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಣೆ



**ಬೆಂಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಇವರು ಬೆಂಗಳೂರಿನಲ್ಲಿ 11-03-2023 ರಂದು ಕೇಂದ್ರ ಕಛೇರಿಯಲ್ಲಿ ಮಹಿಳಾ ದಿನಾಚರಣೆಯನ್ನು ಹಮ್ಮಿಕೊಂಡಿದ್ದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ ಆರ್ ಪ್ರಸನ್ನರವರು ವಹಿಸಿದ್ದರು, ಮಹಿಳೆಯರ ಕಾರ್ಯ ಬದ್ಧತೆ ಮತ್ತು ಪ್ರಾಮಾಣಿಕತೆಯನ್ನು ಹೇಳುತ್ತಾ ಹೇಗೆ ಸಹಕಾರಿ ಕ್ಷೇತ್ರದಲ್ಲಿ ಯಶಸ್ವಿಯಾಗಿ ಪ್ರತಿನಿಧಿತ್ವ ಮಾಡುತ್ತಾ ನಡೆದಂತೆ ರಾಜಕೀಯದಲ್ಲಿಯೂ ಮಹಿಳೆಯರು ಬಂದರೆ 56% ಜನಸಂಖ್ಯೆ ಇರುವ ಕಾರಣ ಜನಪ್ರತಿನಿಧಿಗಳಾಗಿ ಪ್ರಾಮಾಣಿಕವಾಗಿ ಸೇವೆ ಸಲ್ಲಿಸುವ ಕಾರಣ ದೇಶದ ಭ್ರಷ್ಟಾಚಾರದ ನಿರ್ಮೂಲನೆ ಜೊತೆಗೆ ಯೋಗ್ಯ ಆಡಳಿತ ದೊರೆಯುತ್ತದೆ ಎಂದು ಹೇಳಿದರು. ಕಾರ್ಯಕ್ರಮವನ್ನು ಮಾನ್ಯ ಸಹಕಾರ ಸಂಘಗಳ ಜಂಟಿ ನಿರ್ದೇಶಕರು ಲೆಕ್ಕ ಪರಿಶೋಧನಾ ಇಲಾಖೆ, ಬೆಂಗಳೂರು ಆದ ಶ್ರೀಮತಿ ಸಾಧನಾ ಗಾವಂಕರ ಇವರು ನೇರವೇರಿಸಿ ಮಹಿಳೆ ಎಂದಿಗೂ ಅಬಲೆಯಲ್ಲ ಅವಳು ಶಕ್ತಿ ಸಾಮರ್ಥ್ಯದ ದೇವಿಯಾಗಿ ಪೂಜೆಗೊಂಡವಳು ಇಂದಿಗೂ ಕೂಡ ಅವಳಿಗೆ ಅವಕಾಶ ಸಿಕ್ಕಲ್ಲಿ ಎಲ್ಲವನ್ನು ನಿಭಾಯಿಸಿಕೊಂಡು ಹೋಗುತ್ತಾಳೆ. ಮನೆಯನ್ನು ಮತ್ತು ಕೆಲಸವನ್ನು ಸಮರ್ಥವಾಗಿ ನಿಭಾಯಿಸುತ್ತಾಳೆ ಎಂದು ಹೇಳಿದರು.

ಮುಖ್ಯ ಅತಿಥಿಗಳಾದ ಮಾನ್ಯ ಸಹಾಯಕ ಪೋಲಿಸ್ ಆಯುಕ್ತರು ಬೆಂಗಳೂರು ಶ್ರೀಮತಿ ರೀನಾ ಸುವರ್ಣರವರು ಮಾತನಾಡಿ ಮಹಿಳೆ ಮನೆ ಮತ್ತು ಕಾರ್ಯಾಲಯ ಅಥವಾ ಅವಳ ವೃತ್ತಿಯನ್ನು ಸಮರ್ಥವಾಗಿ ನಿಭಾಯಿಸಬಲ್ಲಳು ಅದಕ್ಕೆ ಅವಳ ಮನೆಯವರ ಸಹಕಾರ ಅತ್ಯಗತ್ಯ ಎಂದು ಹೇಳಿ, ಜೊತೆಗೆ ಸಾಧ್ಯವಿರುವಾಗ ಆದಷ್ಟು ಜನರಿಗೆ ನಮ್ಮ ಕೈಲಾದ ಸಹಾಯವನ್ನು ಮಾಡಬೇಕು ಅದು ನಮಗೆ ಮುಂದೆ ಸಹಾಯವಾಗಿ ಹಿಂತಿರುಗುತ್ತದೆಎಂದು ಹೇಳಿ, ನಮ್ಮ ಭಾರತೀಯ ಸಂಸ್ಕೃತಿಯಾದ ಮನೆಯನ್ನು ಮೊದಲು ಎಂಬ ಪ್ರಾಮುಖ್ಯತೆಯನ್ನು ಕೊಟ್ಟು ಬಂದ ಯಶಸ್ಸನ್ನು ತಲೆಗೆ ಏರಿಸಿಕೊಳ್ಳದೇ ವಿನಮ್ರರಾಗಿ ಇರಬೇಕೆಂದು ಹೇಳಿದರು. ಮಹಿಳೆಗೆ ಮನೆಯ ಜನರ ಸಹಕಾರ ಎಷ್ಟು ಮಹತ್ವ ಪಡೆಯುತ್ತದೆ ಎಂದು ಹೇಳಿ ತಮ್ಮ ಸಾಧನೆಯ ಹಾದಿ ಮದುವೆಯ ನಂತರ ಮಗಳ ಜನನದ 9 ತಿಂಗಳಿನಿಂದ ಹೇಗೆ ಮುಂದುವರೆದು ಯಶಸ್ಸು ಕಂಡಿದೆ ಎಂದು ಹೇಳಿದರು. ಅತಿಥಿಗಳಾದ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶೈಲಜಾ ತಪಲಿಯವರು ಸ್ತ್ರೀ ಕುರಿತಾದ ತಮ್ಮ ಸುಂದರ ಕವನ ವಾಚನದೊಂದಿಗೆ ಎಲ್ಲ ಮಹಿಳೆಯರಿಗೂ ಮಹಿಳಾದ ದಿನದ ಶುಭಾಶಯಗಳನ್ನು ಅಭಿನಂದಿಸಿದರು ಮತ್ತು ಶ್ರೀಮತಿ ಭಾರತಿ ಜಿ ಭಟ್ ಇವರು ನಮ್ಮ ದೇಶದಲ್ಲಿ ಪೂಜೆಗಳ್ಳುವ ದೇವತೆಗಳಲ್ಲಿ ಸ್ತ್ರೀ ದೇವತೆಗಳೇ ಶಕ್ತಿಯ ಪ್ರತೀಕ ಪುರುಷ ದೇವತೆಗಿಂತ ಮೊದಲು ಸ್ತ್ರೀ ದೇವತೆಯನ್ನು ನೆನೆಯಬೇಕು ಎಂದು ಹೇಳುತ್ತಾ ಸಹಕಾರಿ ಕ್ಷೇತ್ರದಲ್ಲಿ ಸಂಕಲ್ಪ ಮಾಡಿ ಅವಶ್ಯಕತೆ ಇರುವವರಿಗೆ ಸಹಾಯ ಮಾಡಿ ಆರ್ಥಿಕವಾಗಿ ಕಷ್ಟದಲ್ಲಿರುವ ಅಥವಾ ಸಹಾಯವಿರದೇ ಇರುವ ಜನರಿಗೆ ಸಹಾಯ ಮಾಡಲು ಕರೆ ನೀಡಿದರು, ತಿಂಗಳಿಗೆ ಒಬ್ಬರು ಇಂತಹ ಜನರಿಗೆ ಸಹಾಯ ಮಾಡುವ ಸಂಕಲ್ಪ ಮಾಡಲು ಕರೆ ನೀಡಿದರು.

ನಿಕಟ ಪೂರ್ವ ನಿರ್ದೇಶಕರಾದ ಶ್ರೀ ಮಂಜುಳಾ ಪಾಟೀಲ್‌ರವರು ಮಾತನಾಡಿ ಸಿಗುವ ಅವಕಾಶ ಉಪಯೋಗ ಸರಿಯಾಗಿ ಮಾಡಿಕೊಳ್ಳಲು ಕರೆ ನೀಡಿ ಯಾವುದೇ ವಯಸ್ಸಿಗೆ ವಿದ್ಯಾಭ್ಯಾಸ ಮಾಡಬಹುದು ಎಂದು ಹೇಳಿದರು. ಅತಿಥಿ ಶ್ರೀಮತಿ ಉಷಾ ಜಗದೀಶ್ ಇವರು ನಿವೇದಿತಾ ಪ್ರತಿಷ್ಠಾನದ ಸಕ್ರಿಯ ಸದಸ್ಯರು ಮತ್ತು ಸಮಾಜ ಸೇವಕರು ತಮ್ಮ ಒಂದು ತಾಸಿನ ಉಪನ್ಯಾಸದಲ್ಲಿ ಲಿಂಗ ಸಮಾನತೆಗಾಗಿ ನಾನೀನ್ಯತೆ ಮತ್ತು ತಂತ್ರಜ್ಞಾನದ ವಿಷಯದ ಮಂಡನೆ. ಅವರ ಒಂದು ತಾಸಿನ ಸಮಯದಲ್ಲಿ ವಿಶ್ವದ ಬೇರೆ ಬೇರೆ ದೇಶಗಳ ಪರಿಸ್ಥಿತಿ ಮತ್ತು ಈ ವರ್ಷದ ಮಹಿಳಾ ದಿನಾಚರಣೆಯ ಥೀಮ್ ನ ಔಚಿತ್ಯ, ತಂತ್ರಜ್ಞಾನ ಬಳಕೆ ಇರುವಲ್ಲಿ ಯಾವ ರೀತಿಯಲ್ಲಿ ಕಾರ್ಯಕ್ರಮ ಮಾಡಬೇಕು ತಂತ್ರಜ್ಞಾನ ಇರದ ಕಡೆಗೆ ಯಾವ ರೀತಿಯಲ್ಲಿ ಬಳಕೆಯಾಗಬೇಕು ಮತ್ತು ಹೇಗೆಲ್ಲ ತಂತ್ರಜ್ಞಾನದ ಬಳಸಿ ಯಶಸ್ಸು ಕಾಣಬಹುದೆಂದು ಹೇಳಿದರು. ಅತಿಥಿ ಶ್ರೀಮತಿ ಮಾಧುರಿ ದೇಶಪಾಂಡೆಯವರು ಮಹಿಳೆಯರು ತಮ್ಮ ಕಂಫರ್ಟ್ ಜೋನ್ ನಿಂದ ಹೊರಬಂದು ಮನಸ್ಸಿನಲ್ಲಿರುವ ಮಹತ್ವಾಕಾಂಕ್ಷೆಗೆ ಒತ್ತು ಕೊಟ್ಟು ಸಾಧಿಸಬೇಕು ಎಂದು ಹೇಳಿದರು. ಶ್ರೀ ಬಿ.ಎಸ್ ಗುಂಡುರಾವ್ ನಿರ್ದೇಶಕರು ಕರಾಸೌಸಂಸನಿ ಅವರು ಕೂಡಾ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಕರಾಸೌಸಂಸನಿ, ಬೆಂಗಳೂರಿನ ವ್ಯವಸ್ಥಾಪಕ ನಿರ್ದೇಶಕರು ಶರಣಗೌಡ ಜಿ ಪಾಟೀಲರು ಮಾತನಾಡಿ ಕರ್ನಾಟಕದಲ್ಲಿ ಒಟ್ಟು 168 ಮಹಿಳಾ ಸಹಕಾರಿ ಸಂಘ / ಸಂಸ್ಥೆಗಳಿದ್ದು ಇನ್ನೂ ಹೆಚ್ಚಿನ ಸಂಸ್ಥೆಗಳನ್ನು ಸ್ಥಾಪಿಸಿ ನಡೆಸಲು ಸಹಕಾರ ನೀಡುವುದಾಗಿ ಕರೆ ನೀಡಿದರು.

ಬೆಳಗಿನ ಉಪಹಾರ ನಂತರ ಮಧ್ಯಾಹ್ನ ಪಾನೀಯಗಳ ಜೊತೆಗೆ ಗೃಹೋಪಯೋಗಿ ವಸ್ತುಗಳ ತಯಾರಿಕೆಯ ಪ್ರಾತ್ಯಕ್ಷಿಕೆ ಉದ್ಯೋಗ ಭಾರತಿ

ಇರವರ ವತಿಯಿಂದ ಶ್ರೀಮತಿ ರೇಣುಕಾರವರು ಸೋಪ್ ಮತ್ತು ಫನಾಲ್ ತಯಾರಿಕೆಯ ಸರಳ ವಿಧಾನ ತಿಳಿಸಿದರು ಲಘು ಉದ್ಯೋಗ ಭಾರತೀಯ ಪ್ರತಿನಿಧಿ ಯಾದ ಶ್ರೀಮತಿ ಶಾರದಾ ಭಾರದ್ವಾಜರವರು ಕರಕುಶಲ ವಸ್ತುಗಳಿಗೆ ಭಾರತ ಸರ್ಕಾರದಿಂದ ಸಿಗುವ ಸೌಲಭ್ಯಗಳ ಲಾಭ ಪಡೆಯುವ ಬಗೆಗೆ ಮಾಹಿತಿ ನೀಡಿದರು. ಈ ಕಾರ್ಯಕ್ರಮಕ್ಕೆ ಬೆಂಗಳೂರು ವಲಯದಲ್ಲಿ ಬರುವ 52 ಸಹಕಾರಿ ಸಂಸ್ಥೆಗಳಿಂದ ಒಟ್ಟು 102 ಜನ ಪ್ರತಿನಿಧಿಗಳು ಭಾಗವಹಿಸಿದ್ದರು. ಬಂದ ಮಹಿಳಾ ಅತಿಥಿಗಳಿಗೆ ಮಹಿಳಾ ಸಾಧಕಿಯರೆಂದು ಸನ್ಮಾನಿಸಲಾಯಿತು. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಸಿಬ್ಬಂದಿಗಳಿಗೆ ಏರ್ಪಡಿಸಲಾಗಿದ್ದ ಸ್ಪರ್ಧೆಗಳ ಬಹುಮಾನಗಳನ್ನು ವಿತರಿಸಲಾಯಿತು. Sparsha ಎಂಬ ಸಂಸ್ಥೆಯು ನಿರಾಶ್ರಿತ ಮಕ್ಕಳ ಸಲುವಾಗಿ ನಡೆಸುತ್ತಿರುವ ಸೇವಾ ಕಾರ್ಯಗಳಿಗೆ ಅವರನ್ನು ಸನ್ಮಾನಿಸಲಾಯಿತು.



**ಕಲಬುರಗಿ :** ದಿನಾಂಕ 13.03.2023 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಪ್ರಾಂತೀಯ ಕಛೇರಿ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀಮತಿ ಪ್ರಮೀಳಾ ಪ್ರೇರಲಾ ಮಾನ್ಯ ಪ್ರಧಾನ ವ್ಯವಸ್ಥಾಪಕರು ಜೆಸ್ಕಾಂ ಹಾಗೂ ಪ್ರಾದೇಶಿಕ ಆಯುಕ್ತರು ಕಲಬುರಗಿ ಇವರು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿಯವರು ವಹಿಸಿದ್ದರು. ಮುಖ್ಯಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಉಪಸ್ಥಿತರಿದ್ದರು. ಸ್ವಾಗತವನ್ನು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್ ರವರು ಪ್ರಾಸ್ತವಿಕ ನುಡಿಯನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ನುಡಿದರು. ನಿರೂಪಣೆಯನ್ನು ಶ್ರೀಮತಿ ಶ್ರೀದೇವಿ ಸಹಾಯಕಿ ಇವರು ನೆರವೇರಿಸಿದರು.

ಕಾರ್ಯಕ್ರಮದ ವೇದಿಕೆಯ ಉಪಸ್ಥಿತರಿದ್ದ ಗಣ್ಯಮಾನ್ಯರಿಗೆ ಸಂಯುಕ್ತ ಸಹಕಾರಿ ವತಿಯಿಂದ ಸನ್ಮಾನಿಸಲಾಯಿತು. ಮೊದಲನೆಯ ಅವಧಿಯನ್ನು ಶ್ರೀಮತಿ ವಾಣಿಶ್ರೀ, ಮಾನ್ಯ ಮುಖ್ಯಸ್ಥರು, ಪ್ರವಾಸ ಅಧ್ಯಯನ ವಿಭಾಗ ಶರಣಬಸವ ವಿಶ್ವವಿದ್ಯಾಲಯ ಕಲಬುರಗಿ ಇವರು ಲಿಂಗ ಸಮಾನತೆಗಾಗಿ ನಾವಿನ್ಯತೆ ಮತ್ತು ತಂತ್ರಜ್ಞಾನದ ಕುರಿತು ಉಪನ್ಯಾಸ ನೀಡಿದರು.

ಎರಡನೇಯ ಅವಧಿಯಲ್ಲಿ ಶ್ರೀಮತಿ ರೇಣುಕಾದೇವಿ ಬಗಾಲೆ ಮಾನ್ಯ ಮುಖ್ಯಸ್ಥರು, ಮನೋಶಾಸ್ತ್ರಜ್ಞರು, ಜಿಮ್ಸ್ ವೈದ್ಯಕೀಯ ವಿಭಾಗ ಕಲಬುರಗಿ ಇವರು ಕುಟುಂಬ ಹಾಗೂ ಉದ್ಯೋಗ ನಿರ್ವಹಣೆಯಲ್ಲಿ ಮಹಿಳೆಯರ ಮಾನಸಿಕ ಸಾಸ್ಥ್ಯ ಕುರಿತು ಉಪನ್ಯಾಸ ನೀಡಿದರು.

ನಂತರ ಸಹಕಾರಿಗಳ ಮಹಿಳೆಯರಿಗೆ ಹೂ ಹೆಣೆಯುವ, ಮತ್ತು ಜ್ಞಾಪನಾ ಶಕ್ತಿಯ ಕುರಿತು ಆಟದ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು, ಸ್ಪರ್ಧೆಯಲ್ಲಿ ಗೆದ್ದ ಮಹಿಳೆಯರಿಗೆ ಪ್ರಥಮ, ದ್ವಿತೀಯ, ಸಮಾಧಾನಕರ ಬಹುಮಾನವನ್ನು ನೀಡಲಾಯಿತು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮಹಿಳೆಯರಿಗೆ ಸಂಯುಕ್ತ ಸಹಕಾರಿ ವತಿಯಿಂದ ಕಾಣಿಕೆಯನ್ನು ನೀಡಲಾಯಿತು. ಕಾರ್ಯಕ್ರಮದಲ್ಲಿ 52 ಸಹಕಾರಿಗಳ ಮಹಿಳಾ ಅಧ್ಯಕ್ಷರು, ನಿರ್ದೇಶಕರು ಹಾಗೂ ಮಹಿಳಾ ಸಿಬ್ಬಂದಿಯವರು ಭಾಗವಹಿಸಿದ್ದರು.



**ದಕ್ಷಿಣ ಕನ್ನಡ :** ದಿನಾಂಕ 14.03.2023 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮೈಸೂರು ಪ್ರಾಂತೀಯ ಕಛೇರಿಯ ವತಿಯಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಕಾರ್ಯಕ್ರಮವನ್ನು ದಕ್ಷಿಣ ಕನ್ನಡ ಜಿಲ್ಲೆಯ ಹೋಟೆಲ್ ಶ್ರೀನಿವಾಸ್, ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀಮತಿ ತ್ರಿವೇಣಿ ರಾವ್, ಮಾನ್ಯ ಸಹಕಾರಿ ಸಂಘಗಳ ಸಹಾಯಕ ನಿಬಂಧಕರು, ಪುತ್ತೂರು ಇವರು ನೆರವೇರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಭಾರತೀ ಜಿ. ಭಟ್ ಯವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಚಂಚಲಾ ತೇಜೋಮಯರವರು

ಉಪಸ್ಥಿತರಿದ್ದರು. ಸ್ವಾಗತವನ್ನು ಹಿರಿಯ ವ್ಯವಸ್ಥಾಪಕರಾದ ಶ್ರೀ ಗುರುಪ್ರಸಾದ್ ಬಂಗೇರ ರವರು ನೆರವೇರಿಸಿದರು. ಪ್ರಾಸ್ತಾವಿಕ ನುಡಿಯನ್ನು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರ ರವರು ನುಡಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಡಾ.ರೂಪ ಡಿ ರಾವ್ ರವರು ಮಹಿಳೆಯರ ಆರೋಗ್ಯದ ಕುರಿತು. ಶ್ರೀಮತಿ ವಿದ್ಯಾ ಎಸ್ ರವರು ಮಹಿಳಾ ಸಬಲೀಕರಣ ಕುರಿತು. ಶ್ರೀಮತಿ ಕೆ ದಾಕ್ಷಾಯಿಣಿ ರವರು ಕೈ ತೋಟ ನಿರ್ವಹಣೆ ಕುರಿತು ಹಾಗೂ ಶ್ರೀ ಜಿತಿನ್ ಜಿಜೊ ತಂತ್ರಜ್ಞಾನದ ಕುರಿತು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿ ಕ್ಷೇತ್ರದಲ್ಲಿ ಸಾಧನೆ ಮಾಡಿದ ಮಹಿಳೆಯರಿಗೆ ಸಂಯುಕ್ತ ಸಹಕಾರಿ ವತಿಯಿಂದ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಸೌಹಾರ್ದ ಸಹಕಾರಿಗಳಿಂದ 140 ಮಹಿಳಾ ಅಧ್ಯಕ್ಷರು, ನಿರ್ದೇಶಕರು, ಮಹಿಳಾ ಸಿಬ್ಬಂದಿಗಳು ಭಾಗವಹಿಸಿದ್ದರು.

## ಸೌಹಾರ್ದ ಸಹಕಾರಿಗಳ ಹಾಗೂ ಕರ್ನಾಟಕ ಕಾಲೇಜು ಮಹಿಳಾ ಘಟಕ ಇವರುಗಳ ಸಂಯುಕ್ತ ಆಶ್ರಯದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ.



**ಬೀದರ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಬೀದರ ಹಾಗೂ ಕರ್ನಾಟಕ ಕಾಲೇಜು ಮಹಿಳಾ ಘಟಕ ಬೀದರ ಇವರುಗಳ ಸಂಯುಕ್ತ ಆಶ್ರಯದಲ್ಲಿ "ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ" ಆಚರಿಸಲಾಯಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕ ಗುರುನಾಥ ಜ್ಯಾಂತೀಕರ ನೆರವೇರಿಸಿ ಮಾತನಾಡಿ ಮಹಿಳೆ ಅಬಲೆ ಅಲ್ಲ ಸಬಲೆ ಇಂದು ಎಲ್ಲಾ ಕ್ಷೇತ್ರದಲ್ಲಿ ಮಹಿಳೆ ದುಡಿಯುತ್ತಿದ್ದಾಳೆ ಕುಟುಂಬದಲ್ಲಿ ಸಮಾಜದಲ್ಲಿ ಮಹಿಳೆ ಸ್ಥಾನಮಾನ ಹೆಚ್ಚಿದೆ ಇದಕ್ಕೆ ಇಂದಿನ ಶಿಕ್ಷಣವೆ ಕಾರಣ ಎಲ್ಲರು ವಿದ್ಯಾವಂತರಾಗಿ ಸಾಧನೆ ಮಾಡಿ ಎಂದು ಕರೆ ನೀಡಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಸಹಕಾರ ಸಂಘಗಳ ಉಪನಿಬಂಧಕರಾದ ಮಂಜುಳಾ ಎಸ್ ಇವರು ಮಾತನಾಡಿ ಮಗುವಿಗೆ ಮನೆಯ ಮೊದಲ ಪಾಠ ಶಾಲೆ ತಾಯಿಯ ಮೊದಲ ಗುರು ತಾಯಿ ತನ್ನ ಮಗುವಿಗೆ ಯಾವ ರೀತಿ ಸಂಸ್ಕರ ನೀಡುತ್ತಾಳೆ ಎಂಬುವದರ ಮೇಲೆ ಇಡಿ ಸಮಾಜ ನಿಂತಿದೆ ಎಂದು ಮಹಿಳೆಯ ಮಹತ್ವದ ಕುರಿತು ಮಾತನಾಡಿ ಸಹಕಾರ ಇಲಾಖೆಯಲ್ಲಿನ ಮಹಿಳೆಯರಿಗೆ ಇರುವ ಸೇವೆಗಳ ಕುರಿತು ಮಾಹಿತಿ ನೀಡಿದರು.

ಅತಿಥಿಗಳಾಗಿ ಭಾಗವಹಿಸಿದ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಪನಿರ್ದೇಶಕರಾದ ಕು. ಸುರೇಖಾ ಕೆ.ಇ.ಎಸ್ ಇವರು ಮಾತನಾಡಿ ಸಮಾಜದ ಎಲ್ಲಾ ಅಡೆತಡೆಗಳನ್ನು ಮಿರಿ ತಮ್ಮಗೆ ಸೀಗುವ ಅವಕಾಶಗಳನ್ನು ಉಪಯೋಗಿಸಿಕೊಂಡು ಸಮಾಜದಲ್ಲಿ ಉನ್ನತ ಸ್ಥಾನದಲ್ಲಿ ಮಹಿಳೆಯರು ಬೆಳೆಯಬೇಕು ತಮ್ಮಗಾಗಿ ಇರುವ ಕಾನೂನುಗಳನ್ನು ತಿಳಿದುಕೊಳ್ಳಬೇಕು ಎಂದು ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಶ್ರೀಮತಿ ಸುರೇಖಾ ಮನಗೂಳಿ ಜಂಟಿ ನಿರ್ದೇಶಕರು ಜಿಲ್ಲಾ ಕೈಗಾರಿಕಾ ಕೇಂದ್ರ ಬೀದರ ಇವರು ಮಾತನಾಡಿ ತಮ್ಮ ಇಲಾಖೆಯಲ್ಲಿರುವ ಸೇವೆಗಳನ್ನು ಬಳಸಿಕೊಂಡು ಮಹಿಳೆಯರು ಆರ್ಥಿಕವಾಗಿ ಸಬಲರಾಗಬಹುದು ತಾವುಗಳು ಇಲಾಖೆಯ ಸದುಪಯೋಗ ಪಡೆದುಕೊಳ್ಳಲು ತಿಳಿಸಿದರು.

ಕೆ.ಆರ್.ಈ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಬಸವರಾಜ ಜಾಬಶೆಟ್ಟಿ ಇವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ ಮಹಿಳೆಯರು ಪ್ರತಿಯೊಂದು ಕ್ಷೇತ್ರದಲ್ಲಿ ಮುಂದೆ ಇದ್ದಾರೆ ಇಂದು ಅನೇಕ ಜನ ಸ್ಪರ್ಧಾತ್ಮಕ ಪರಿಕ್ಷೇಗಳನ್ನು ಎದುರಿಸಿ ಪುರುಷರಿಗಿಂತ ಹೆಚ್ಚು ಸ್ಥಾನಗಳಲ್ಲಿ ಕಾರ್ಯನಿರ್ವಾಹಿಸುತ್ತಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಬೀದರ ಜಿಲ್ಲಾ ಒಕ್ಕೂಟ ಸಹಕಾರಿಗಳಿಂದ ಮಹಿಳಾ ಕ್ಷೇತ್ರದಲ್ಲಿ ಸಾಧನೆ ಮಾಡಿದ ಚಿಟ್ಟಾ ವಾಡಿ ಅಂಗನವಾಡಿ ಕಾರ್ಯಕರ್ತೆಯಾದ ಶ್ರೀಮತಿ ಶಾಂತಮ್ಮ ಗಂಡ ಶಿವರಾಜ ಮಧುರಗಿಕರ್ ಹಾಗೂ ಕೆ.ಆರ್.ಈ ಸಂಸ್ಥೆಯಿಂದ ಡಾ॥ ವಿದ್ಯಾ ಪಾಟಿಲ್ ಹಾಗೂ ಶ್ರೀಮತಿ ಸಾವಿತ್ರಿ ಬಾಸೂಳೆ ಇವರಿಗೆ ನಾರಿ ಶಕ್ತಿ ಪುರಸ್ಕಾರ ನೀಡಿ ಗೌರವಿಸಲಾಯಿತ್ತು.

ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಪ್ರಾಚಾರ್ಯರಾದ ಡಾ॥ ಮಲ್ಲಿಕಾರ್ಜುನ ಹಂಗರಗಿ ನಡೆಸಿಕೊಟ್ಟರು. ನಿರೂಪಣೆಯನ್ನು ವೀರಶಟ್ಟಿ ಲಕ್ಷ್ಮೀ ಕುಂಬಾರ ವಂದಿಸಿದರು. ಕಾರ್ಯಕ್ರಮದಲ್ಲಿ ಕೆ.ಆರ್.ಈ ಕಾರ್ಯದರ್ಶಿ ಸಿದ್ರಾಮ ಪಾರಾ ಒಕ್ಕೂಟ ಉಪಾಧ್ಯಕ್ಷ ಸಂಜೀವಕುಮಾರ ಪಾಟೀಲ್, ಸಿ.ಇ.ಓ ಅಮೃತ ಹೊಸಮನಿ, ಉಪನ್ಯಾಸಕರಾದ ಡಾ॥ ಜಗನಾಥ ಹೆಬ್ಬಾಳೆ, ಉಪ ಪ್ರಾಚಾರ್ಯರಾದ ಅನೀಲ ಚಿಕ್ಕಮಣೆ, ಮಲ್ಲಿಕಾರ್ಜುನ ಚಲುವಾ, ಡಿ.ವಿ ಕಂಬಾರ, ಪದ್ಮೀನಿ ಕಾಜಿ, ಗೀತಾ ಮೂಸ್ತೆ, ಲಕ್ಷ್ಮೀ ಕುಂಬಾರ ಸಿಬ್ಬಂದಿ ವರ್ಗ ಕಲಾ ಹಾಗೂ ವಾಣಿಜ್ಯ ವಿಭಾಗದ ವಿದ್ಯಾರ್ಥಿನಿಯರು ಸಹಕಾರಿಯ ಮಹಿಳಾ ನಿರ್ದೇಶಕರು ಭಾಗವಹಿಸಿದರು.




**ಬೆಳಗಾವಿ :** ದಿನಾಂಕ 11.03.2023ರ ಶನಿವಾರದಂದು ಸಂಯುಕ್ತ ಸಹಕಾರಿಯ ಬೆಳಗಾವಿ ಪ್ರಾಂತೀಯ ಕಛೇರಿಯ ವತಿಯಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಕಾರ್ಯಕ್ರಮವನ್ನು ಪ್ರಾಂತೀಯ ಕಛೇರಿ ತರಬೇತಿ ಸಭಾಭವನ ಬೆಳಗಾವಿ ಇಲ್ಲಿ ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮದ ಉದ್ಘಾಟನೆಯನ್ನು ಕುಮಾರಿ ಲಕ್ಷ್ಮೀ ಎಮ್ ಅಷ್ಟಗಿ, ಮಾನ್ಯ ನಗರಸಭೆ ಪೌರಾಯುಕ್ತರು, ಜಮಖಂಡಿ ಇವರು ನಡೆಸಿಕೊಟ್ಟರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಜಗದೀಶ ಕವಟಗಿಮಠ ಮಾನ್ಯ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಸರಸ್ವತಿ ರನ್ ರವಿ, ಮಾನ್ಯ ನಿಕಟಪೂರ್ವ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಶ್ರೀಮತಿ ಜ್ಯೋತಿ ಪರಾಂಡೆ, ಮಾನ್ಯ ಪೋಲೀಸ್ ನಿರೀಕ್ಷಕರು, ಮಚ್ಚೆ ಬೆಳಗಾವಿ. ಶ್ರೀಮತಿ ಶಾಹಿನ ಅಕ್ತರ್, ಮಾನ್ಯ ಸಹಕಾರಿಗಳ ಸಹಾಯಕ ನಿಬಂಧಕರು, ಬೈಲಹೊಂಗಲ್. ಶ್ರೀಮತಿ ಅಶ್ವಿನಿ ಭಾಗೋಜಿ, ಮಾನ್ಯ ಸಹ ಪ್ರಾಧ್ಯಾಪಕರು ಮತ್ತು ವಿಭಾಗದ ಮುಖ್ಯಸ್ಥರು, ಎಸ್ ಜಿ ವಿ ಆಯುರ್ವೇದಿಕ ಕಾಲೇಜ್, ಬೈಲಹೊಂಗಲ, ಇವರುಗಳು ಭಾಗವಹಿಸಿದ್ದರು.

ಸದರಿ ಕಾರ್ಯಕ್ರಮದ ಕುರಿತು ಪ್ರಾಸ್ತಾವಿಕವನ್ನು ಶ್ರೀ ಶ್ರೀಕಾಂತ ಬರುವೆ, ಮಾನ್ಯ ಉಪಪ್ರಧಾನ ವ್ಯವಸ್ಥಾಪಕರು, ಟಾಸ್ಕ ಪೋರ್ಸ ವಿಭಾಗ, ಬೆಳಗಾವಿ ಮತ್ತು ಕಲಬುರಗಿ ಪ್ರಾಂತ, ಇವರು ನಡೆಸಿಕೊಟ್ಟರು, ಶ್ರೀ ಬಸವರಾಜ ಹೊಂಗಲ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು ಇವರು ಸ್ವಾಗತಿಸಿದರು.

ಸಂಪನ್ಮೂಲ ವ್ಯಕ್ತಿಗಳಾದ ಶ್ರೀಮತಿ ಸರಸ್ವತಿ ಎನ್. ರವಿ, ಮಾನ್ಯ ನಿಕಟಪೂರ್ವ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು, ಇವರು "ಲಿಂಗ ಸಮಾನತೆಗಾಗಿ ನಾವೀನ್ಯತೆ ಮತ್ತು ತಂತ್ರಜ್ಞಾನ" ಎನ್ನುವ ವಿಷಯದ ಕುರಿತು ಉಪನ್ಯಾಸ ನೀಡಿದರು. ತದನಂತರ "ಮಹಿಳೆ ಆರೋಗ್ಯ ಮತ್ತು ಸುರಕ್ಷತೆ" ಬಗ್ಗೆ ಶ್ರೀಮತಿ ಡಾ॥ ಅಶ್ವಿನಿ ಭಾಗೋಜಿ, ಇವರು ಉಪನ್ಯಾಸ ನೀಡಿದರು.

ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಶ್ರೀಮತಿ ಚಂದ್ರಲೇಖಾ ಸವ್ವಾಸೇರಿ, ಮನ್ಯ ಅಧ್ಯಕ್ಷರು ಸೇವಕ ಫೌಂಡೇಶನ್ ಹಾಗೂ ಕುಮಾರಿ ಲಕ್ಷ್ಮೀ ಎಮ್ ಅಷ್ಟಗಿ, ಮಾನ್ಯ ನಗರಸಭೆ ಪೌರಾಯುಕ್ತರು, ಜಮಖಂಡಿ ಈ ಗಣ್ಯಮಾನ್ಯರುಗಳಿಗೆ ಸಂಯುಕ್ತ ಸಹಕಾರಿಯ ವತಿಯಿಂದ ಗೌರವಿಸಿ ಸನ್ಮಾನಿಸಲಾಯಿತು.

ಹಲವಾರು ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಕಾರ್ಯಕ್ರಮದಲ್ಲಿ, ಸಾಂಸ್ಕೃತಿಕ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸಿದರು. ಈ ಕಾರ್ಯಕ್ರಮದಲ್ಲಿ ವಿವಿಧ ಸಹಕಾರಿಗಳಿಂದ 170 ಕ್ಕೂ ಹೆಚ್ಚಿನ ಮಹಿಳೆಯರು ಭಾಗವಹಿಸಿದ್ದರು.

## ಭೂಮಿ ಪೂಜೆ ಹಾಗೂ ಶಿಲಾನ್ಯಾಸ ಕಾರ್ಯಕ್ರಮ



**ಶಿವಮೊಗ್ಗ :** ದಿನಾಂಕ 05.03.2023 ರಂದು ಸಹ್ಯಾದ್ರಿ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ, ಶಿವಮೊಗ್ಗ ಇವರ ವತಿಯಿಂದ ಕಲ್ಯಾಣಿ ಚೌಕ, ಸಂಪೆಕಟ್ಟೆ ಹತ್ತಿರ, ಹೊಸನಗರ ತಾಲುಕು, ಶಿವಮೊಗ್ಗ ಇಲ್ಲಿ ಒಕ್ಕೂಟದ ತರಬೇತಿ ಕೇಂದ್ರದ ಭೂಮಿ ಪೂಜೆ ಹಾಗೂ ಶಿಲಾನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆ ಹಾಗೂ ಭೂಮಿ ಪೂಜೆಯನ್ನು ಶ್ರೀ ಹರತಾಳು ಹಾಲಪ್ಪ, ಮಾನ್ಯ ಶಾಸಕರು, ಇವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ನಂಜನಗೌಡ, ಮಾನ್ಯ ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ, ಇವರು ಭಾಗವಹಿಸಿದ್ದರು. ಅಧ್ಯಕ್ಷತೆಯನ್ನು ಶ್ರೀ ಎ.ಆರ್. ಪ್ರಸನ್ನ ಕುಮಾರ್, ಮಾನ್ಯ ಉಪಾಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ, ಇವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ರಾಘವೇಂದ್ರ, ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಸುರೇಶ್ ಇವರು ಉಪಸ್ಥಿತರಿದ್ದರು, ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ಎಸ್. ಇವರು ಭಾಗವಹಿಸಿದ್ದರು.

## ವಿಷಯಾಧಾರಿತ ತರಬೇತಿ ಕಾರ್ಯಕ್ರಮ



**ಕೊಪ್ಪಳ ಜಿಲ್ಲೆ :** ದಿನಾಂಕ 06.03.2023 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಕಲಬುರಗಿ ಪ್ರಾಂತೀಯ ಕಛೇರಿ ವತಿಯಿಂದ ಕೊಪ್ಪಳ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರುಗಳಿಗೆ SARFAESI ACT ಮತ್ತು ದಾವಾ ದಾಖಲಾತಿ ಮತ್ತು ಸಾಲ ವಸೂಲಾತಿ ಪ್ರಕ್ರಿಯೇಯನ್ನು ಶ್ರೀ ಚನ್ನಬಸವಸ್ವಾಮಿ ಕಲಾಮಂದಿರ ಗಂಗಾವತಿಯಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರರವರು ವಹಿಸಿದ್ದರು. ಕಾರ್ಯಕ್ರಮದ ಉದ್ಘಾಟನೆಯನ್ನು ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಪತ್ತಾರ ರವರು ನೆರವೆರಸಿದರು. ಮುಖ್ಯಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ನಾರಾಯಣ ಬಾಬು, ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ನಿರ್ದೇಶಕರುಗಳಾದ ಶ್ರೀ ಕುಮಾರೆಪ್ಪ ಸಿಂಗನಾಳ ಮತ್ತು ಶ್ರೀ ಗುರುರಾಜ, ಆರ್.ಡಿಸಿಸಿ ಬ್ಯಾಂಕಿನ ಮಾನ್ಯ ನಿರ್ದೇಶಕರಾದ ಶ್ರೀ ಶರಣಪ್ಪ ಹ್ಯಾಟಿ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್ ರವರು ಉಪಸ್ಥಿತರಿದ್ದರು. ಮೊದಲಿಗೆ SARFAESI ACT ಕುರಿತು ಸಂಯುಕ್ತ ಸಹಕಾರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ನಾರಾಯಣ ಬಾಬು ರವರು ಉಪನ್ಯಾಸ ನೀಡಿದರು. ಎರಡನೆಯ ಅವಧಿಯಲ್ಲಿ ದಾವಾ ದಾಖಲಾತಿ ಮತ್ತು ಸಾಲ ವಸೂಲಾತಿ ಪ್ರಕ್ರೀಯೇಯ ಕುರಿತು ಮಾನ್ಯ ನಿವೃತ್ತ ಸಹಾಯಕ ನಿಬಂಧಕರಾದ ಶ್ರೀ ಲಿಯಾಕತ್ ಅಲಿಯವರು ಉಪನ್ಯಾಸ ನೀಡಿದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್ ರವರು ನುಡಿದರು. ನಿರೂಪಣೆ ಮತ್ತು ವಂದನಾರ್ಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ಪವನ ಎಮ್ ಆರ್ ರವರು ನೆರವೆರಿಸಿದರು. ಕಾರ್ಯಕ್ರಮದಲ್ಲಿ ಒಟ್ಟು 180 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

**ಸಮಾರೋಪ ಸಮಾರಂಭ :** ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳಿಗೆ ಆಯೋಜಿಸಲಾಗಿದ್ದ ವಿಷಯಾಧಾರಿತ ತರಬೇತಿಯ ಸಮಾರೋಪ ಸಮಾರಂಭ ಕಾರ್ಯಕ್ರಮದಲ್ಲಿ ಶ್ರೀ ದಸ್ತಗಿರಿ ಅಲಿ ಮಾನ್ಯ ಸಹಕಾರಿಗಳ ಉಪನಿಬಂಧಕರು, ಶ್ರೀ ಶರಣಬಸ್ಸಪ್ಪ ರವರು ಭಾಗವಹಿಸಿ ತರಬೇತಿಯನ್ನು ಉದ್ದೇಶಿಸಿ ಮಾತನಾಡಿದರು.

## ಸಮಾಲೋಚನಾ ಸಭೆ

**ಶಿವಮೊಗ್ಗ :** ದಿನಾಂಕ 05.03.2023 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ,. ಬೆಂಗಳೂರು ಪ್ರಾಂತೀಯ ಕಛೇರಿ ಇದರ ವತಿಯಿಂದ ಶಿವಮೊಗ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳೊ ಂದಿಗೆ ಸಮಾಲೋಚನಾ ಸಭೆಯನ್ನು, ಕಲ್ಯಾಣಿ ಚೌಕ, ಸಂಪೆಕಟ್ಟೆ ಹತ್ತಿರ, ಹೊಸನಗರ ತಾಲುಕು, ಶಿವಮೊಗ್ಗ ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಶ್ರೀ ಜಿ. ನಂಜನಗೌಡ, ಮಾನ್ಯ ಅಧ್ಯಕ್ಷರು, ಸಂಯುಕ್ತ ಸಹಕಾರಿ ಇವರು ವಹಿಸಿದ್ದರು. ಪ್ರಾಸ್ತಾವಿಕ ನುಡಿಯನ್ನು ಶ್ರೀ ಎ.ಆರ್. ಪ್ರಸನ್ನ ಕುಮಾರ್, ಮಾನ್ಯ ಉಪಾಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ, ಇವರು ನೆರವೇರಿಸಿದರು. ಕಾರ್ಯಕ್ರಮದ ಸ್ವಾಗತವನ್ನು ಶ್ರೀ ಸಂಜಯ ಕೋರಟಕರ, ಪ್ರಾಂತೀಯ ವ್ಯವಸ್ಥಾಪಕರು, ಬೆಂಗಳೂರು ಪ್ರಾಂತ ಇವರು ನಡೆಸಿಕೊಟ್ಟರು. ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ಎಸ್. ಇವರು ಕಾರ್ಯಕ್ರಮವನ್ನು ನಿರೂಪಿಸಿ ವಂದಿಸಿದರು.

## ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಮುನ್ನೆಚ್ಚರಿಕೆ ಸೂಚನೆ

ರಾಜ್ಯದಲ್ಲಿ ದಿನಾಂಕ 10.05.2023 ರಂದು ಕರ್ನಾಟಕ ವಿಧಾನಸಭಾ ಚುನಾವಣೆ ಮತ್ತು ದಿನಾಂಕ 13.05.2023 ರಂದು ಫಲಿತಾಂಶ ನಿಗದಿಯಾಗಿರುವುದರಿಂದ ರಾಜ್ಯದಲ್ಲಿ ದಿನಾಂಕ 29.03.2023 ರಿಂದಲೇ ನೀತಿ ಸಂಹಿತೆ ಜಾರಿಯಾಗಿರುವುದು ನಿಮಗೆ ಗೊತ್ತಿರುವ ವಿಷಯ. ಈ ಹಿನ್ನಲೆಯಲ್ಲಿ ಸೌಹಾರ್ದ ಸಹಕಾರಿ ಸಂಸ್ಥೆಗಳು ನಿಯಮಾನುಸಾರ ಕಾರ್ಯನಿರ್ವಹಿಸಲು ತಿಳಿಸಿದೆ. ಸದಸ್ಯರಿಗೆ ತೊಂದರೆಯಾಗದಂತೆ ಹಾಗೂ ಚುನಾವಣಾ ಕಾರ್ಯಗಳಿಗೆ ತೊಂದರೆಯಾಗದಂತೆ, ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ರಾಜ್ಯದ ಸೌಹಾರ್ದ ಸಹಕಾರಿಗಳು ಎಚ್ಚರಿಕೆಯಿಂದ ಕಾರ್ಯನಿರ್ವಹಿಸಲು ಸೂಚಿಸಿದೆ.

# ರಾಜ್ಯದ ಇ=ಸ್ಟಾಂಪ್ ಕೇಂದ್ರ ಹೊಂದಿರುವ ಸೌಹಾರ್ದ ಸಹಕಾರಿಗಳು ಕಡ್ಡಾಯವಾಗಿ ಸಲ್ಲಿಸಬೇಕಿರುವ ಮಾಹಿತಿ ಸುತ್ತೋಲೆ

■ ಸಂಖ್ಯೆ: ಆರ್.ಎಸ್.ಆರ್:ಸೌಕಾ:136/ನೋ:051/2001-02
www.souharda.coop
email : souharda@souharda.coop
Karnataka State Souharda Federal Cooperative Limited
"Souharda Sahakari Soudha", No. 68, 1st Floor, Between 17th & 18th Cross, Margosa Road, Malleshwaram, Bengaluru-560 055. Ph : 080-23378375-80
ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ
"ಸೌಹಾರ್ದ ಸಹಕಾರಿ ಸೌಧ", ನಂ. 68, ಒಂದನೇ ಮಹಡಿ, 17&18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560055
ಶಾಸನಬದ್ಧ ಸಹಕಾರಿ ಸಂಸ್ಥೆ

ಸಂ.ಸ/ಇ-ಸ್ಟಾಂಪ್/01/2022-23 ದಿನಾಂಕ:20-03-2023

ಇವರಿಗೆ,

**ಇ-ಸ್ಟಾಂಪ್ ವ್ಯವಹಾರ ಹೊಂದಿರುವ ಸೌಹಾರ್ದ ಸಹಕಾರಿಗಳ,**
**ಮುಖ್ಯಕಾರ್ಯನಿರ್ವಾಹಕರಿಗೆ,**

**ಮಾನ್ಯರೇ,**

**ವಿಷಯ: ಇ-ಸ್ಟಾಂಪ್ ಕೇಂದ್ರ ಹೊಂದಿರುವ ಸಹಕಾರಿಗಳು ಕಡ್ಡಾಯವಾಗಿ ಸಲ್ಲಿಸಬೇಕಿರುವ ಮಾಹಿತಿ.**

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಇವರು ಓಟಿಪಿ ಆಧಾರಿತ ಇ-ಸ್ಟಾಂಪಿಂಗ್ ಲಾಗಿನ್ ವ್ಯವಸ್ಥೆಯನ್ನು ಅತೀ ಶೀಘ್ರದಲ್ಲಿ ಜಾರಿ ಮಾಡುವವರಿದ್ದಾರೆ. ಈ ವ್ಯವಸ್ಥೆ ಜಾರಿಯಾದ ನಂತರ, ಇ-ಸ್ಟಾಂಪಿಂಗ್ ವಿಭಾಗದ ಸಿಬ್ಬಂದಿಗಳು ತಮ್ಮ ಮೊಬೈಲ್ ಸಂಖ್ಯೆಗೆ ಸ್ವೀಕರಿಸುವ ಓಟಿಪಿ ನಮೂದಿಸುವ ಮೂಲಕವೇ ಇ-ಸ್ಟಾಂಪ್ ವೆಬ್‌ಸೈಟ್‌ನಲ್ಲಿ ಲಾಗಿನ್ ಮಾಡಲು ಸಾಧ್ಯವಾಗುತ್ತದೆ. ಸದರಿ ವಿಷಯದ ಕುರಿತು ದಿನಾಂಕ 02.02.2023ರಿಂದ ಎಸಿಸಿಯಲ್ಲಿನ ಇ-ಸ್ಟಾಂಪಿಂಗ್ ವಿಭಾಗದ ಸಿಬ್ಬಂದಿಗಳ ವೈಯಕ್ತಿಕ ಮಾಹಿತಿಗಳಾದ **ಮೊಬೈಲ್ ಸಂಖ್ಯೆ, ಇ-ಮೇಲ್ ಐಡಿ ಮತ್ತು ಪ್ಯಾನ್ ಸಂಖ್ಯೆಗಳನ್ನು ಎಕ್ಸೆಲ್ ಫೈಲ್‌ನಲ್ಲಿ ಸಂಯುಕ್ತ ಸಹಕಾರಿಯ vijayashrip@souharda.coop ಇ-ಮೇಲ್ ಐಡಿಗೆ ಕಳುಹಿಸುವಂತೆ ಮಿಂಚಂಚೆ ಮೂಲಕ ಮೂರ್ನಾಲ್ಕು ಬಾರಿ ಕೋರಲಾಗಿತ್ತು.** ಕೆಲವೇ ಸಹಕಾರಿಗಳು ಮಾಹಿತಿ ನೀಡಿದ್ದು, ಇನ್ನು ಬಹಳಷ್ಟು ಸಹಕಾರಿಗಳು ಮಾಹಿತಿ ನೀಡಬೇಕಿದೆ.

ಆದ್ದರಿಂದ ಇ-ಸ್ಟಾಂಪಿಂಗ್ ವ್ಯವಸ್ಥೆ ಹೊಂದಿರುವ ಎಲ್ಲ ಸಹಕಾರಿಗಳು ತಮ್ಮ ಎಸಿಸಿಗಳಲ್ಲಿ ಇ-ಸ್ಟಾಂಪಿಂಗ್ ಬಳಕೆದಾರರ ಐಡಿಗಳನ್ನು ಹೊಂದಿರುವ ಸಿಬ್ಬಂದಿಗಳ ವೈಯಕ್ತಿಕ ಮೊಬೈಲ್ ಸಂಖ್ಯೆ, ವೈಯಕ್ತಿಕ ಇ-ಮೇಲ್ ಐಡಿ ಮತ್ತು ವೈಯಕ್ತಿಕ ಪ್ಯಾನ್ ಸಂಖ್ಯೆಗಳನ್ನು ಲಗತ್ತಿಸಿರುವ ಎಕ್ಸೆಲ್ ನಮೂನೆಯಲ್ಲಿ ಕಡ್ಡಾಯವಾಗಿ ನಮೂದಿಸಿ ನೀಡಬೇಕಾಗಿ ಕೋರಿದೆ. **ಈಗಾಗಲೇ ಮಾಹಿತಿಯನ್ನು ಕಳುಹಿಸಿದ ಸಹಕಾರಿಗಳು, ಈ ವಿಷಯವನ್ನು ಪರಿಗಣಿಸದಿರಲು ಕೋರಿದೆ.** ಮಾಹಿತಿಯನ್ನು ಸಲ್ಲಿಸದ ಎಸಿಸಿಗಳ ಐಡಿಗಳು ನಿಷ್ಕ್ರಿಯವಾದರೆ ಅದಕ್ಕೆ ಸಂಯುಕ್ತ ಸಹಕಾರಿ ಜವಾಬ್ದಾರಿಯಾಗುವುದಿಲ್ಲ.

ಇಂತಿ ತಮ್ಮ ವಿಶ್ವಾಸಿ,

Karnataka State Souharda Federal Co-operative Ltd. Service Division Bengaluru

(ರಾಜೇಂದ್ರ ರಾವ್ ಸಿಂಧೆ)
ನೋಡಲ್ ಅಧಿಕಾರಿ

ಗಮನಿಸಿ:

1. ಮಾಹಿತಿಯನ್ನು ಮೇಲೆ ತಿಳಿಸಿರುವ ಇ-ಮೇಲ್ ಐಡಿಗೆ ಎಕ್ಸೆಲ್ ನಮೂನೆಯಲ್ಲಿ ಕಳುಹಿಸಬಹುದು.
2. ಈ ಪತ್ರದೊಂದಿಗೆ ನಮೂದಿಸಿರುವ ನಮೂನೆಯಲ್ಲಿ ತುಂಬಿ ಸಹಕಾರಿಯ ಮುಖ್ಯಕಾರ್ಯನಿರ್ವಾಹಕರ ದೃಢೀಕರಣದೊಂದಿಗೆ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಕಳುಹಿಸಬಹುದು.

# ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಮಹಾಮಂಡಳದ ನೂತನ ಕಛೇರಿ ಉದ್ಘಾಟನೆ



**ಬೆಂಗಳೂರು :** ದಿನಾಂಕ 24.03.2023 ರಂದು ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ, ಬೆಂಗಳೂರು ಇದರ ನೂತನ ಕಟ್ಟಡದ ಉದ್ಘಾಟನೆಯನ್ನು ಮಾನ್ಯ ಸಹಕಾರ ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್ ಇವರು ನೆರವೇರಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಭಾಗವಹಿಸಿ ಮಹಾಮಂಡಳದ ಅಧ್ಯಕ್ಷರಾದ ಶ್ರೀಮತಿ ಕೆ. ಲಲಿತಾ ಜಿ. ಟಿ. ದೇವೇಗೌಡ ಇವರಿಗೆ ಶುಭಾಶಯ ಕೋರಿದರು.

## ಭೇಟಿ



**ಉತ್ತರ ಕನ್ನಡ :** ದಿನಾಂಕ 24 ಮಾರ್ಚ 2023 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಮೋಹನದಾಸ್ ಜೆ. ನಾಯಕ ಮತ್ತು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ಇವರು ಉತ್ತರ ಕನ್ನಡ ಜಿಲ್ಲೆಯ ಕದಂಬ ಮಾರ್ಕೆಟಿಂಗ್ ಸೌಹಾರ್ದ ಸಹಕಾರಿ ನಿ., ಮತ್ತು ಕೆ.ಡಿ.ಸಿ.ಸಿ. ಬ್ಯಾಂಕ್ ಪ್ರಧಾನ ಕಛೇರಿ ಶಿರಸಿ ಸಹಕಾರಿಗೆ ಭೇಟಿ ನೀಡಿ ಅಗತ್ಯ ಮಾರ್ಗದರ್ಶನ ನೀಡಿದರು.





**ಹಾವೇರಿ :** ದಿನಾಂಕ 23 ಮಾರ್ಚ 2023ರಂದು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಹಾವೇರಿ ಜಿಲ್ಲೆಯ ನವಚೇತನ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಹಾವೇರಿ ಮತ್ತು ಶ್ರೀ ಸುವರ್ಣ ಪತ್ತಿನ ಸೌಹಾರ್ದ ಸಹಕಾರಿ ನಿ., ಹಾವೇರಿ ಸಹಕಾರಿಗಳಿಗೆ ಭೇಟಿ ನೀಡಿ ಸಹಕಾರಿಗಳ ಆರ್ಥಿಕ ಚಟುವಟಿಕೆಗಳ ಬಗ್ಗೆ ಚರ್ಚಿಸಿ ಅಗತ್ಯ ಮಾರ್ಗದರ್ಶನ ನೀಡಿದರು.





**ಮೈಸೂರು :** ದಿನಾಂಕ: 27–03–2022ರಂದು ಶ್ರೀ ಸಾಯಿ ಪ್ರಗತಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ಬಳ್ಳಾರಿ ಇದರ ಸಹಕಾರಿಯ ಆಡಳಿತ ಮಂಡಲಿ ಸದಸ್ಯರು ಮತ್ತು ಮುಖ್ಯಕಾರ್ಯನಿರ್ವಾಹಕರು ಕೊಡಗು ವಿದ್ಯಾ ಇಲಾಖಾ ನೌಕರರ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಮತ್ತು ಕೊಡಗು ಸೌಹಾರ್ದ ಪತ್ತಿನ ಸಹಕಾರಿ ನಿ., ಮಡಿಕೇರಿ ಸಹಕಾರಿಗಳಿಗೆ ಭೇಟಿ ನೀಡಿ, ಸದರಿ ಸಹಕಾರಿಗಳ ಕಾರ್ಯಚಟುವಟಿಕೆಗಳ ಕುರಿತು ಮಾಹಿತಿ ಪಡೆದುಕೊಳ್ಳಲಾಯಿತು. ಸದರಿ ಸಹಕಾರಿಯ ಆಡಳಿತ ಮಂಡಲಿ ಸದಸ್ಯರು ಮತ್ತು ಜಿಲ್ಲಾ ಸಂಯೋಜಕರಾದ ಶ್ರೀ ಸುರೇಶ ಆರ್ ಎಸ್ ರವರು ಉಪಸ್ಥಿತರಿದ್ದರು.

## ಸಹಕಾರ ಸಂಘಗಳ ಲೆಕ್ಕಪರಿಶೋಧನೆ ಇಲಾಖೆಯನ್ನು ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಲ್ಲಿ ವಿಲೀನ.

ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯನ್ನು ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಲ್ಲಿ ಒಂದು ಪ್ರತ್ಯೇಕ ವಿಭಾಗದಲ್ಲಿ ವಿಲೀನಗೊಳಿಸಿದೆ ಹಾಗೂ ಇಲಾಖಾ ಲೆಕ್ಕಪರಿಶೋಧಕರಿಂದ ಲೆಕ್ಕ ಪರಿಶೋಧನೆ ಕೈಗೊಳ್ಳಲು ಆಯ್ಕೆ ಮಾಡಿಕೊಂಡಂತಹ ಸಹಕಾರ ಸಂಘಗಳ ಲೆಕ್ಕಪರಿಶೋಧನೆಯನ್ನು ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಇಲಾಖೆಯಲ್ಲಿ ವಿಲೀನಗೊಂಡ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯ ಸಿಬ್ಬಂದಿಗಳಿಂದ ನಿರ್ವಹಿಸಲು ದಿನಾಂಕ 28.03.2023 ರಂದು ಸರ್ಕಾರ ಆದೇಶಿಸಿದೆ. ಸದರಿ ಸುತ್ತೋಲೆ ಸಂಯುಕ್ತ ಸಹಕಾರಿಯ ವೆಬ್‌ಸೈಟ್ www.souharda.coop ನಲ್ಲಿ ಲಭ್ಯವಿರುತ್ತದೆ.

## ರಾಜ್ಯದ ಸೌಹಾರ್ದ ಸಹಕಾರಿಗಳು ತಂತ್ರಾಂಶ ಅವಶ್ಯಕತೆ ಪರಿಗಣನಾ ನಮೂನೆಯನ್ನು ಆನ್ ಲೈನ್‌ನಲ್ಲಿ ಸಲ್ಲಿಸುವ ಕುರಿತು

ಸಂಯುಕ್ತ ಸಹಕಾರಿಯಿಂದ Comman Software ಅಭಿವೃದ್ಧಿಪಡಿಸಲು ಉದ್ದೇಶಿಸಿದ್ದು, ಅದರಂತೆ ರಾಜ್ಯದ ಸೌಹಾರ್ದ ಸಹಕಾರಿಗಳಿಂದ ಅಭಿಪ್ರಾಯ ಹಾಗೂ ಅಗತ್ಯ ಕ್ರೂಡೀಕರಣಕ್ಕಾಗಿ **Google form** ಮೂಲಕ **https://docs.google.com/forms/d/e/1FAIpQLSfIvPCHt-crdGu01ESUIOzjcfiXTmH6b8QuJXIklZd5oPtGnQ/viewform?usp=sf_link** ಸದರಿ ಲಿಂಕ್ ಅನ್ನು ಬಳಸಿ ಹಾಗೂ **QR CODE SCAN** ಮಾಡಿ ನಮೂನೆಯನ್ನು ಭರ್ತಿ ಮಾಡಿ ಸಲ್ಲಿಸಲು ತಿಳಿಸಲಾಗಿದೆ.

## ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ




**ಸದಾಶಿವಗಡ** : ದಿನಾಂಕ 08/03/2023ರ ಬುಧವಾರದಂದು ಸಹಕಾರಿಯ ಪ್ರಧಾನ ಕಛೇರಿಯಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದ ಉದ್ಘಾಟನೆಯನ್ನು ಸಹಕಾರಿಯ ಅಧ್ಯಕ್ಷರು ಶ್ರೀಮತಿ. ದೀಕ್ಷಾ ದತ್ತಾರಾಮ ಕಲ್ಗುಟಕರ ಹಾಗೂ ಸಹಕಾರಿಯ ನಿರ್ದೇಶಕರಾದ ಶ್ರೀಮತಿ. ಗೌರಿ ಪುತ್ತು ಕಲ್ಗುಟಕರ ಇವರು ನಡೆಸಿಕೊಟ್ಟರು. ಹಾಗೂ ಈ ಕಾರ್ಯಕ್ರಮದಲ್ಲಿ ಸಹಕಾರಿಯ ಮಹಿಳಾ ಸಿಬ್ಬಂದಿಗಳು ಉಪಸ್ಥಿತರಿದ್ದರು.




**ವಿಜಯಪುರ** : ಶ್ರೀ ವರಮಹಾಲಕ್ಷ್ಮೀ ಮಹಿಳಾ ಸೌಹಾರ್ದ ಸಹಕಾರಿ ನಿ., ವಿಜಯಪುರ ಸಹಕಾರಿಯಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಸ್ವಾಭಿಮಾನಿ ಸಹಕಾರ ಮಾಸಿಕ ಪತ್ರಿಕೆಯ ಚಂದಾ ದರ ಪರಿಷ್ಕೃತ
## ವಾರ್ಷಿಕ ಚಂದಾ ರೂ 200/- ಬಿಡಿ ಪತ್ರಿಕೆಗಳಿಗೆ 20/-

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿ., ಬೆಂಗಳೂರು ಇದರ ಪ್ರಕಟಣೆಯಾದ ಸ್ವಾಭಿಮಾನಿ ಸಹಕಾರಿಯ ಪತ್ರಿಕೆಯ ಚಂದಾ ದರವನ್ನು 200/- ರೂಗಳಿಗೆ ಹಾಗೂ ಬಿಡಿ ಪತ್ರಿಕೆಗಳಿಗೆ 20/- ರೂಗಳಿಗೆ ಪರಿಷ್ಕರಿಸಲಾಗಿದೆ. ರಾಜ್ಯದ ಸೌಹಾರ್ದ ಸಹಕಾರಿಗಳು ಪಾವತಿಸಲು ಕ್ರಮವಿಡಬೇಕೆಂದು ಕೋರಿದೆ.

## ಉದ್ಘಾಟನೆ



**ಕಂಪ್ಲಿ :** ದಿನಾಂಕ 12.03.2023 ರಂದು ಶ್ರೀ ಶರಣಗ ಸಕ್ಕರೆ ಕರಡೀಶ ಸೌಹಾರ್ದ ಪತ್ತಿನ ಸಹಕಾರ ಸಂಘ ನೂತನ ಕಂಪ್ಲಿ ಶಾಖೆಯ ಉದ್ಘಾಟನೆಯನ್ನು ಶಾಸಕರಾದ ಶ್ರೀ ಜೆ.ಎನ್ ಗಣೇಶ ನೆರವೇರಿಸಿದರು. ನಂತರ ಮಾತನಾಡಿ ಸಂಘಗಳು ಸಮಾಜದ ಕಟ್ಟಕಡೆಯ ವ್ಯಕ್ತಿಗೂ ತಲುಪುತ್ತಿರುವುದರಿಂದ ಸಹಕಾರಿ ಕ್ಷೇತ್ರದಲ್ಲಿನ ಗಣನೀಯ ಬೆಳೆಯುತ್ತಿವೆ. ಸಹಕಾರ ಸಂಘಗಳ ಪ್ರತಿನಿಧಿಗಳು ವೃತ್ತಿಪರತೆ, ಶಿಸ್ತು ಹಾಗೂ ಬದ್ಧತೆ ಮೈಗೂಡಿಸಿಕೊಳ್ಳಬೇಕು, ರಾಷ್ಟ್ರೀಕೃತ ಬ್ಯಾಂಕುಗಳಿಗೆ ಹೋಲಿಸಿದರೆ ಸಹಕಾರ ಸಂಘಗಳ ಮೂಲಕ ತ್ವರಿತಗತಿಯಲ್ಲಿ ಸಾಲ ಸೌಲಭ್ಯ ಪಡೆದುಕೊಳ್ಳಬಹುದು, ಸಹಕಾರ ಸಂಘಗಳ ಮೂಲಕ ಸದಸ್ಯರು ತಾವು ಪಡೆದ ಸಾಲವನ್ನು ಸಮರ್ಪಕವಾಗಿ ಸಕಾಲದಲ್ಲಿ ಮರುಪಾವತಿ ಮಾಡಿದಲ್ಲಿ ಸಂಘ ಅಭಿವೃದ್ಧಿ ಹೊಂದಲು ಸಾದ್ಯ ಎಂದು ತಿಳಿಸಿದರು.

ಸಂಡೂರು ವಿರಕ್ತ ಸಂಸ್ಥಾನ ಮಠದ ಮ.ನಿ.ಪ್ರ.ಸ್ವ. ಪ್ರಭುಸ್ವಾಮಿಗಳು, ಗುರು ಕರಿ ಸಿದ್ದೇಶ್ವರ ವಿಶ್ವಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಬುಕ್ಕಸಾಗರ, ಕಂಪ್ಲಿ ಕಲ್ಮಠದ ಅಭಿನವ ಪ್ರಭುಸ್ವಾಮಿಗಳು ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ, ಮಾಜಿ ಶಾಸಕರಾದ ಶ್ರೀ ಸುರೇಶಬಾಬು, ಪುರಸಭೆ ಅಧ್ಯಕ್ಷೆ ಶಾಂತಲಾ ವಿ. ವಿದ್ಯಾಧರ, ಹಾಗೂ ಸಹಕಾರಿ ಆಡಳಿತ ಮಂಡಳಿ ಸದಸ್ಯರು, ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಕೊಪ್ಪಳ ;** ಶುಕಮುರಿ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಗಿಣಿಗೇರಾ ಇದರ ನೂತನ ಕಟ್ಟಡದ ಉದ್ಘಾಟಕರಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಹಾಗೂ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ ಮತ್ತು ಕೊಪ್ಪಳ ಜಿಲ್ಲಾ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಪತ್ತಾರ ರವರು, ಸಹಕಾರ ಭಾರತೀಯ ಜಿಲ್ಲಾ ನಿರ್ದೇಶಕರಾದ ಶ್ರೀ ಮುದ್ದಪ್ಪ ಗೊಂದಿಹೊಸಳ್ಳಿ, ಸುರೇಶರಾವ್ ಕುಕರ್ಣಿ, ಮಾರುತೇಶ ಜಾನಶರಭಯ್ಯ ರಾವಳಮಠ, ರವಿಕುಮಾರ ಇಟಗಿ ಇವರುಗಳು ಉದ್ಘಾಟಿಸಿ, ಮಾನ್ಯ ಅಧ್ಯಕ್ಷರು ಉದ್ಘಾಟನೆಯ ಭಾಷಣದಲ್ಲಿ ಕೊಪ್ಪಳ ಜಿಲ್ಲೆಯ ಸಹಕಾರಿಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಅವುಗಳನ್ನು ಇನ್ನು ಹೆಚ್ಚು ಸಧೃಢವಾಗಲಿಕ್ಕೆ ಹಲವಾರು ಸಭೆ ಮುಖಾಂತರ, ಸಹಕಾರಿ ಪರಿಶೀಲನೆ ಮಾಡುವುದರ ಮುಖಾಂತರ, ಸಹಕಾರಿ ಸದೃಢ ಮಾಡಲಿಕ್ಕೆ ಕಂಕಣಬದ್ದರಾಗಿ ನಿಲ್ಲುತ್ತೆವೆ. ವಿಶೇಷವಾಗಿ ಇಂತಹ ಸಣ್ಣ ಹಳ್ಳಿಯಲ್ಲಿ ಸಹಕಾರಿ ಹೆಸರಿನಲ್ಲಿ ಸ್ವಂತ ಕಟ್ಟಡವನ್ನು ಹೊಂದಿರುವುದು ಶ್ಲಾಘನೀಯ ಎಂದು ಶುಭ ಹಾರೈಸಿದರು. ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳು ಆಗಮಿಸಿ ಶುಭ ಹಾರೈಸಿದರು. ಶುಕಮುರಿ ಪತ್ತಿನ ಸೌಹಾರ್ದ ಸಹಕಾರಿಯ ಆಡಳಿತ ಮಂಡಳಿ ಸದಸ್ಯರುಗಳು ಕಾರ್ಯಕ್ರಮಕ್ಕೆ ಆಗಮಿಸಿದ ಪ್ರತಿನಿಧಿಗಳಿಗೆ ಧನ್ಯವಾದಗಳನ್ನು ಸಲ್ಲಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಶಿವಶರಣಪ್ಪ ಹ್ಯಾಟಿ, ನಿರೂಪಣೆಯನ್ನು ಪುಟ್ಟಪ್ಪ ವಾರದ, ಪ್ರಾಸ್ತಾವಿಕ ನುಡಿಯನ್ನು ಡಾ॥ ಪಿ.ಎಮ್ ಬಸವರಾಜ ನುಡಿದರು. ವಂದನಾರ್ಪಣೆಯನ್ನು ಮುದ್ದಪ್ಪ ಗೊಂದಿಹೊಸಳ್ಳಿ ನೆರವೆರಿಸಿದರು.



**ಮೈಸೂರು :** ದಿನಾಂಕ: 21–03–2022ರಂದು ಹುಣಸೂರು ಆದಿವಾಸಿ ಬಿರ್ಸಾಮುಂಡ ಸೌಹಾರ್ದ ಸಹಕಾರಿ ನಿ., ಹುಣಸೂರು ಸಹಕಾರಿಯನ್ನು ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಬ್ಯಾಂಕ್‌ನ ಮಾನ್ಯ ಅಧ್ಯಕ್ಷರಾದ ಶ್ರೀ ಜಿ.ಡಿ. ಹರೀಶ್‌ಗೌಡರವರು ಉದ್ಘಾಟಿಸಿದ್ದರು. ಸದರಿ ಕಾರ್ಯಕ್ರಮದಲ್ಲಿ ಸಹಕಾರಿಯ ಆಡಳಿತ ಮಂಡಲಿ ಸದಸ್ಯರು ಹಾಗೂ ಜಿಲ್ಲಾ ಸಂಯೋಜಕರಾದ ಶ್ರೀ ಸುರೇಶ ಆರ್ ಎಸ್ ರವರು ಉಪಸ್ಥಿತರಿದ್ದರು.

## ಸದಸ್ಯರ ಹಿತಾಸಕ್ತಿಯ ಸೌಹಾರ್ದ ಸಹಕಾರಿಗಳ ಮುಖ್ಯ ಉದ್ದೇಶವಾಗಬೇಕು – ಜ್ಯಾಂತೀಕರ್



**ಬೀದರ :** ಸಹಕಾರಿ ಸಂಸ್ಥೆಗಳು ಸದಸ್ಯರ ಹಿತಾಸಕ್ತಿ ಕಾಪಾಡಿಕೊಳ್ಳುವ ಮೂಲಕ ಲಾಭಗಳಿಸಬೇಕು ಎಂದು ಸಂಯುಕ್ತ ಸಹಕಾರಿ ರಾಜ್ಯ ನಿರ್ದೇಶಕ ಗುರುನಾಥ ಜ್ಯಾಂತೀಕರ ತಿಳಿಸಿದರು. ಸದಸ್ಯರು ಪರಸ್ಪರ ಸಹಕಾರದಿಂದ ಮಾತ್ರ ಸಂಸ್ಥೆ ಬೆಳವಳಿಗೆ ಸಾಧ್ಯ ಎಲ್ಲರು ಆಡಳಿತ ಮಂಡಳಿಗೆ ಸಹಕಾರ ನೀಡಬೇಕು ಎಂದರು. ಬೀದರ ನಗರದ ಶಿವನಗರ ಹತ್ತಿರದ ನೂತನವಾಗಿ ನೋಂದಣಿಗೊಂಡ ಬೀದರ ಸೌಹಾರ್ದ ಸಹಕಾರಿ ಸಂಘ ನಿ., ಬೀದರ ಇದರ ಕಛೇರಿ ಉದ್ಘಾಟನೆಯ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು.

ಸಹಕಾರಿ ಸಂಸ್ಥೆಗಳಲ್ಲಿ ಸರ್ವರ ಹಿತ ಮುಖ್ಯವಾಗಿದೆ ಆಡಳಿತ ಮಂಡಳಿಯವರು ಎಲ್ಲಾ ಸದಸ್ಯರ ಹಿತವನ್ನು ಕಾಪಾಡಿಕೊಂಡು ಸಂಸ್ಥೆಯನ್ನು ಮುನ್ನಡೆಸಬೇಕು ಎಂದು ಉದ್ಘಾಟಕರಾಗಿ ಆಗಮಿಸಿದ ಮಾಜಿ ಬೀದರ ನಗರಾಭಿವೃದ್ಧಿ ಅಧ್ಯಕ್ಷ ಬಾಬುರಾವ ಮದಕಟ್ಟಿ ತಿಳಿಸಿದರು.

ಸಹಕಾರಿಯ ಆಡಳಿತ ಮಂಡಳಿಯ ಸದಸ್ಯರು ಸಹಕಾರ ಕಾಯ್ದೆದೆ ಮತ್ತು ನಿಯಮಗಳು ಹಾಗೂ ಉಪ ವಿಧಿಯಲ್ಲಿ ತಿಳಿಸಿರುವಂತೆ ಕಾರ್ಯನಿರ್ವಹಿಸಬೇಕು ಎಂದು ನ್ಯಾಯವಾದಿ ಕೆ.ಹೆಚ್.ಪಾಟೀಲ್ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಮುಖ್ಯ ಪ್ರವರ್ತಕರಾದ ಕ್ರಾಂತಿಕುಮಾರ ಕುಲಾಲ ವಹಿಸಿಕೊಂಡಿದರು, ಕಾರ್ಯಕ್ರಮದಲ್ಲಿ ಸಹಕಾರಿಯ ಪ್ರವರ್ತಕರಾದ ವಿನೋದ, ಬಸವರಾಜ, ಅರುಣ, ಸೂರ್ಯಕಾಂತ, ಸತೀಷ, ಸಿದ್ರಾಮ್ಮಪ್ಪ, ಅನೀಲ, ಶಾಹಬುದಿನ್, ವಿನಾಯಕ, ಗುರುಸಿದ್ಧ, ಕಲ್ಲಪ್ಪ, ಶಾಂತಕುಮಾರ, ಅಮರ, ವೀರೇಶ, ಪ್ರೇಮಾ ಬಿರಾದರ, ವಿಜಯಲಕ್ಷ್ಮೀ, ಪ್ರೇಮಲಾ ಕುಲಾಲ, ರೇಣುಕಾ, ಸಮಿನಾ, ಶಿಲ್ಪಾ, ವಿಜಯಲಕ್ಷ್ಮೀ, ಪ್ರತಿಭಾವ, ಸುರೇಖಾ, ಆಶಾ, ಭಾಗ್ಯಶ್ರೀ ಒಕ್ಕೂಟ ನಿರ್ದೇಶಕ ಜಗನಾಥ ಕರಂಜೆ, ಸಂಜಯ ಕ್ಯಾಸಾ ಮುಖ್ಯ ಕಾರ್ಯನಿರ್ವಾಹಕ ಅಮೃತ ಹೊಸಮನಿ ಸಹಕಾರಿಯ ಸದಸ್ಯರು ಉಪಸ್ಥಿತರಿದ್ದರು.

## ಭೇಟಿ



**ಮೈಸೂರು :** ದಿನಾಂಕ 01.03.2023 ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ.ನಂಜನಗೌಡ ರವರು, ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್ ಪ್ರಸನ್ನಕುಮಾರ್, ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥ ರವರು, ಶ್ರೀಮತಿ ಭಾರತಿ ಭಟ್ ರವರು ಹಾಗೂ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್ ರವರು ಮೈಸೂರು ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ, ಮೈಸೂರು ಸಹಕಾರಿಗೆ ಭೇಟಿ ನೀಡಿದರು. ಸದರಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರೊಂದಿಗೆ ಸಹಕಾರಿ ಅಭಿವೃದ್ಧಿಯ ಕುರಿತು ಚರ್ಚಿಸಿದರು. ಈ ಸಂದರ್ಭದಲ್ಲಿ ಮೈಸೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರ ರವರು ಉಪಸ್ಥಿತರಿದ್ದರು.




ಹೇರಾಡಿ ಮುಖ್ಯ ರಸ್ತೆಯು ಇತ್ತೀಚೆಗೆ ಅಗಲೀಕರಣಗೊಂಡಿದ್ದು ಈ ರಸ್ತೆಯಲ್ಲಿ ಸಂಚರಿಸುವ ವಾಹನಗಳ ವೇಗ ಮಿತಿಮೀರಿದ್ದನ್ನು ಮನಗಂಡು ಇಲ್ಲಿನ ಸ್ಥಳೀಯ ಸಂಸ್ಥೆಯಾದ ಅನನ್ಯ ಸೌಹಾರ್ದ ಸಹಕಾರಿ ನಿ., ಸಹಕಾರಿಯ ಸಾರ್ವಜನಿಕರ ಹಾಗೂ ಶಾಲಾ ಮಕ್ಕಳ ಸುರಕ್ಷತಾ ದೃಷ್ಟಿಯಿಂದ ವಾಹನಗಳ ವೇಗ ನಿಯಂತ್ರಿಸುವ ಸಲುವಾಗಿ ತನ್ನ ಸ್ವತಃ ಖರ್ಚಿನಲ್ಲಿ ಸುಮಾರು 40000 ರೂ. ವೆಚ್ಚದ 4 ಬ್ಯಾರಿಕೇಡ್ ಗಳನ್ನು ಮಾಡಿಸಿ ಸಂಸ್ಥೆಯ ಅಧ್ಯಕ್ಷ ಶ್ರೀಯುತ ಹರೀಶ್ ಕುಮಾರ್ ನೇತೃತ್ವದಲ್ಲಿ, ಬ್ರಹ್ಮಾವರ ಆರಕ್ಷಕ ಠಾಣೆಯ ASI ಶ್ರೀಯುತ ವೆಂಕಟೇಶ್ ಗೊಲ್ಲ ಹಾಗೂ ಠಾಣಾ ಸಿಬ್ಬಂದಿಯವರ ಸಮ್ಮುಖದೊಂದಿಗೆ ರಸ್ತೆಯಲ್ಲಿ ಅಳವಡಿಸಲಾಯಿತು.

ಈ ಸಂದರ್ಭದಲ್ಲಿ ಸಂಸ್ಥೆಯ ಮುಖ್ಯಕಾರ್ಯನಿರ್ವಾಣಾಧಿಕಾರಿ ಶ್ರೀಮತಿ ಮೇಘ, ಉಪಾಧ್ಯಕ್ಷರಾದ ಶ್ರೀ ರತ್ನಾಕರ್ ಶೆಟ್ಟಿ ಹಾಗೂ ಸಂಸ್ಥೆಯ ನಿರ್ದೇಶಕರು, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಯಡ್ತಾಡಿ ಗ್ರಾಮ ಪಂಚಾಯತ್ ಸದಸ್ಯ ಶ್ರೀ ಪ್ರಕಾಶ್ ಶೆಟ್ಟಿ,ರಿಕ್ಷಾ ಮಾಲಕರು ಹೇರಾಡಿ, ಅತುಲ ಯುವಕ ಸಂಘದ ಪದಾಧಿಕಾರಿಗಳು ಹೇರಾಡಿ, ಸ್ಥಳೀಯ ಹಿರಿಯರು,ಅನನ್ಯ ಫ್ರೆಂಡ್ಸ್ ಹೇರಾಡಿ ಹಾಗೂ ಸ್ಥಳೀಯ ಅಂಗಡಿ ಹೋಟೆಲ್ ಗಳ ಮಾಲೀಕರು ಉಪಸ್ಥಿತರಿದ್ದು ಸಂಸ್ಥೆಯ ಕೊಡುಗೆಗೆ ಶ್ಲಾಘನೆ ವ್ಯಕ್ತಪಡಿಸಿದರು.

## ವಿಷ್ಣುವಿಲಾಸ್ ಸಹಕಾರಿ ಬೃಹತ್ ಕಲ್ಪವೃಕ್ಷವಾಗಿ ಬೆಳೆಯಲಿ : ಪಾಲಿಮಾರು ಶ್ರೀ

## ದಶಮಾನೋತ್ಸವ ಅಚರಣೆಗೆ ಅರ್ಜುನ್‌ಜನ್ಯ ಹಾಗೂ ತಂಡದ ಸಂಗೀತೋತ್ಸವ



**ಸಿರುಗುಪ್ಪ :** ವಿಷ್ಣುವಿಲಾಸ್ ಸಹಕಾರಿಯು ರಾಜ್ಯ ಇತರೆ ಜಿಲ್ಲೆಗಳಲ್ಲಿಯೂ ತಮ್ಮ ವ್ಯವಹಾರ ಮತ್ತು ಸಾಮಾಜಿಕ ಸೇವೆಗಳನ್ನು ಮುಂದುವರೆಸುವ ಮೂಲಕ ಚಿಕ್ಕ ವ್ಯಾಪರಿಯಿಂದ ದೊಡ್ಡ ವ್ಯಾಪಾರಿಗಳಿಗೆ ಕಲ್ಪವೃಕ್ಷದಂತೆ ನಾಡಿನಾದ್ಯಾಂತ ಸಹಕಾರಿಯೇ ಸಮೃದ್ಧಿ ಎನ್ನುವ ಮಂತ್ರದೊಂದಿಗೆ ಮನೆ ಮನೆ ವಿಷ್ಣುವಿಲಾಸ್‌ನ ಸೇವೆ ತಲುಪಲಿ ಎಂದು ಉಡುಪಿಯ ಪಾಲಿಮಾರು ಮಠದ, ಶ್ರೀ ವಿದ್ಯಾಧೀಶತೀರ್ಥಶ್ರೀಪಾದಂಗ ತಿಳಿಸಿದರು.

ನಗರದ ತಾಲೂಕ ಕ್ರೀಡಾಂಗಣದಲ್ಲಿ ಸಹಕಾರಿ ಪಿತಾಮಹಾ ದಿ. ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲರ ವೇದಿಕೆಯಲ್ಲಿ ವಿಷ್ಣುವಿಲಾಸ್ ಸೌರ್ಹದ ಪತ್ತಿನ ಸಹಕಾರಿಯ ದಶಮಾನೋತ್ಸವ ಕಾರ್ಯಕ್ರಮದ ಸಾನಿಧ್ಯವಹಿಸಿ ಮಾತನಾಡಿದ ಅವರು, 2012ರ ಆಕ್ಟೋಬರ್ 21ರಂದು ಪ್ರಾರಂಭಗೊಂಡ ವಿಷ್ಣುವಿಲಾಸ್ ಸಹಕಾರಿಯು ಕಳೆದ 10 ವರ್ಷಗಳಿಂದ ಸಹಕಾರಿಯ ವ್ಯವಹಾರಗಳ ಜತೆಗೆ ನಾನಾ ಸಾಮಾಜಿಕ, ಧಾರ್ಮಿಕ ಕಾರ್ಯಗಳ ಮೂಲಕ ಯೋಜನೆಗಳ ಜನರ ಮನ ಗೆದ್ದಿರುವುದಕ್ಕೆ ಈ ದಶಮಾನೋತ್ಸವ ಅಚರಣೆ ಮಾಡುತ್ತಿರುವ ಸಹಕಾರಿಯೇ ಸಾಕ್ಷಿ. ಸಹಕಾರಿ ತತ್ವದ ಮೇಲೆ ಸಾಮಾನ್ಯ ಮನುಷ್ಯನಿಗೆ ಅಗತ್ಯ ಅರ್ಥಿಕ ಸಹಾಯವನ್ನು ಮಾಡುವುದೇ ಸಹಕಾರಿಯ ಮಹತ್ವವಾಗಿದೆ.

ಟಿಟಿಡಿಯ ನಿವೃತ್ತ ವಿಶೇಷಾಧಿಕಾರಿ ಅಪ್ಪಣ್ಣಾಚಾರ್ಯ ಮಾತನಾಡಿ, ಸಹಕಾರ ತತ್ವದ ಮೇಲೆ ಪ್ರಾರಂಭಗೊಂಡಿರುವ ಸಹಕಾರಿಗಳು ಸಮಾಜದಲ್ಲಿನ ಜಾತಿ ಮತ ಬೇದ ಭಾವಗಳನ್ನು ತೊಲಗಿಸಿ ಎಲ್ಲರು ಒಂದೇ ಎನ್ನುವ ಭಾವನೆಯನ್ನು ಮೂಡಿಸುವ ಮೂಲಕ ಒಗ್ಗಟ್ಟಿನ ಸಹಕಾರ ತತ್ವವನ್ನು ವಿಷ್ಣುವಿಲಾಸ್ ಸಹಕಾರಿ ಕಳೆದ 10 ವರ್ಷಗಳಿಂದ ನಡೆದು ಬಂದ ಹಾದಿಯ ಮುನ್ನೋಟದಲ್ಲಿ ತಿಳಿಯಬಹುದಾಗಿದೆ ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ ರಾಜ್ಯಾಧ್ಯಕ್ಷ ಜಿ. ನಂಜನಗೌಡ ಮಾತನಾಡಿ ಸಹಕಾರಿ ತತ್ವದ ಮೇಲೆ ಹಾಲು ಉತ್ಪಾದಕರ ಸಂಘವನ್ನು ರಚಿಸಿಕೊಂಡು ರೈತರು ಉತ್ಪಾದನೆ ಮಾಡಿದ ಹಾಲನ್ನು ಖರೀದಿಸಿ ನಂತರ ಅವುಗಳಿಗೆ ಮೌಲ್ಯವರ್ಧನೆಯೊಂದಿಗೆ ಮಾರಾಟ ಮಾಡಿ ಹಣವನ್ನು ರೈತರ ಮನೆಗೆ ತಲುಪಿಸುವ ಕಾರ್ಯ ಸೇರಿದಂತೆ ಸಹಕಾರಿ ತತ್ವದ ಮೂಲಕ ಹಣವನ್ನು ಠೇವಣಿ ಮಾಡಿಕೊಂಡು ಅದೇ ಹಣವನ್ನು ಸಣ್ಣ ಹಾಗೂ ಮದ್ಯಮ ವ್ಯಾಪಾರಿಗಳಿಗೆ ಸಲಭ ಷರತ್ತುಗಳೊಂದಿಗೆ ಸಾಲ ಸೌಲಭ್ಯ ಹಾಗೂ ನಿತ್ಯವೂ ತಾವು ದುಡಿದ ಹಣದಲ್ಲಿ ಸಾಲ ಮರುಪಾವತಿಗೆ ನಿತ್ಯ ಠೇವಣಿಯ ಮೂಲಕ ಅನುಕೂಲ ಮಾಡಿಕೊಡುವ ಮೂಲಕ ಸಹಕಾರಿ ಕ್ಷೇತ್ರ ಇಂದು ಹೆಮ್ಮರವಾಗಿ ಬೆಳೆಯುತ್ತಿದೆ. ವಿಶೇಷವಾಗಿ ವಿಷ್ಣುವಿಲಾಸ್ ಸಹಕಾರಿಯೂ ತನ್ನ ವ್ಯವಹಾರದ ಜತೆಗೆ ರಕ್ತದಾನ ಶಿಬಿರ, ಸಸಿ ನಡುವ ಕಾರ್ಯಕ್ರಮ, ಬೇಸಿಗೆಯಲ್ಲಿ ಸಾರ್ವಜನಿಕರಿಗೆ ಕುಡಿವ ನೀರಿನ ಅರವಟಿಗೆ, ಪ್ರತಿಭಾನ್ವಿತಾ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸೇರಿದಂತೆ ಇತರೆ ಹತ್ತು ಹಲವು ಕಾರ್ಯಕ್ರಮಗಳನ್ನು ಆಯೋಜನೆ ಮಾಡುವ ಮೂಲಕ ಸಂಸ್ಥೆಯೂ ಉತ್ತಮ ಲಾಭದತ್ತಾ ಸಾಗುತ್ತ ಇದೀಗಾ ದಶಮಾನೋತ್ಸವ ಆಚರಣೆ ನಡೆಸುತ್ತಿರುವುದು ಸಹಕಾರಿ ಕ್ಷೇತ್ರದ ಹೆಮ್ಮೆಯಾಗಿದೆ ಎಂದು ತಿಳಿಸಿದರು.

ನಂತರ ಸಹಕಾರಿಯ ಅಧ್ಯಕ್ಷ ಎಚ್.ಜೆ.ಹನುಮಂತಯ್ಯಶೆಟ್ಟಿ, ಸಹಕಾರಿಯ ಮುಖ್ಯಕಾರ್ಯನಿರ್ವಹಕ ಅಧಿಕಾರಿ ಅನಿಲ್‌ಕುಮಾರ್ ಮಾತನಾಡಿದರು.

ನಂತರ ವಿಷ್ಣುವಿಲಾಸ ಸೌಹರ್ದಪತ್ತಿನ ಸಹಕಾರದ ಸಾಧನೆಗಳನ್ನು ಬಿಂಬಿಸುವ ಸ್ಮರಣಸಂಚಿಕೆಯನ್ನು ಶಿವಮೊಗ್ಗ ವಿಧಾನಪರಿಷತ್ ಸದಸ್ಯರಾದ ಡಿ.ಎಸ್.ಆರುಣ್, ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕ ಶರಣಗೌಡ,ಜಿ.ಪಾಟೀಲ್, ಹಾಗೂ ಮಾಜಿ ಶಾಸಕ ಬಿ.ಎಂ.ನಾಗರಾಜ ಬಿಡುಗಡೆಗೊಳಿಸಿದರು.

ಕಾರ್ಯಕ್ರಮದಲ್ಲಿ ರಾಜ್ಯ ಸಹಕಾರಿಯ ಉಪಾಧ್ಯಕ್ಷ ಎ. ಆರ್.ಪ್ರಸನ್ನಕುಮಾರ್, ನಿರ್ದೇಶಕರಾದ ಬಿ.ಎಚ್.ಕೃಷ್ಣಾರೆಡ್ಡಿ, ಶೈಲಜ. ವಿ ತಪಲಿ, ಸಿ.ಪಿ.ವಿಜಯ್, ರಾಯಚೂರು ಅಕ್ಕಿಗಿರಣಿ ಮಾಲಿಕರ ಸಂಘದ ಕಾರ್ಯಧ್ಯಕ್ಷ ಸಾವಿತ್ರಿಪುರುಷೋತ್ತಮಶೆಟ್ಟಿ, ಮಾಜಿ ಶಾಸಕ ಟಿ.ಎಂ. ಚಂದ್ರಶೇಖರಯ್ಯಸ್ವಾಮಿ, ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಚೊಕ್ಕಬಸವನಗೌಡ, ವಿಕಾಸ್ ಬ್ಯಾಂಕ್ ಆದ್ಯಕ್ಷ ವಿಶ್ವನಾಥ ಹೀರೆಮಠ ಮುಂತಾದ ಸಹಕಾರಿಗಳು ಭಾಗವಹಿಸದ್ದರು ಹಾಗೂ ಹೊಸಪೇಟೆಯ ಅಂಜಲಿ ತಂಡದಿಂದ ಭರತನಾಟ್ಯ ಹಾಗೂ ಸಿರುಗುಪ್ಪದ ಭಕ್ತಿ ನೃತ್ಯ ಶಾಲೆಯ ವಿದ್ಯಾರ್ಥಿಗಳು ನಡೆಸಿಕೊಟ್ಟ ಕಾಂತಾರ ಚಿತ್ರದ ಹಾಡಿನ ನೃತ್ಯಗಳನ್ನು ಏರ್ಪಡಿಸಲಾಗಿತ್ತು.

# ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘಕ್ಕೆ ರೂ.5.15 ಕೋಟಿ ನಿವ್ವಳ ಲಾಭ.

**ಪುತ್ತೂರು** : ಪುತ್ತೂರಿನಲ್ಲಿ ಪ್ರಧಾನ ಕಚೇರಿಯನ್ನು ಹೊಂದಿ ರಾಜ್ಯಾದ್ಯಂತ 17 ಶಾಖೆಗಳೊಂದಿಗೆ ಕಾರ್ಯಾಚರಿಸುತ್ತಿರುವ ಪ್ರತಿಷ್ಠಿತ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘವು 2022 –23ರ ಆರ್ಥಿಕ ವರ್ಷಾಂತ್ಯಕ್ಕೆ ರೂ.5.15 ಕೋಟಿ ನಿವ್ವಳ ಲಾಭ ದಾಖಲಿಸಿದೆ. ಸಹಕಾರಿಯು ದಿನಾಂಕ: 31–03–2023 ರಂತೆ 40075 ಸದಸ್ಯರನ್ನು ಹೊಂದಿ ರೂ.256 ಕೋಟಿ ಠೇವಣಾತಿಯನ್ನು ಸಂಗ್ರಹಿಸಿ ರೂ.228ಕೋಟಿ ಸಾಲವನ್ನು ವಿತರಿಸಿ ಒಟ್ಟು ರೂ.484 ಕೋಟಿ ವ್ಯವಹಾರವನ್ನು ದಾಖಲಿಸಿರುತ್ತದೆ. ಪಾಲುಬಂಡವಾಳ ರೂ.9.81ಕೋಟಿ ಹೊಂದಿರುತ್ತದೆ. ಸಹಕಾರಿಯ 18ನೇ ಶಾಖೆಯು ಬೆಳ್ತಂಗಡಿ ತಾಲೂಕಿನ ಮಡಂತ್ಯಾರಿನಲ್ಲಿ ಶೀಘ್ರವೇ ಉದ್ಘಾಟನೆಗೊಳ್ಳಲಿದೆ. ಸಹಕಾರಿಯು ತನ್ನ ಸದಸ್ಯರಿಂದ ಆಕರ್ಷಕ ಬಡ್ಡಿದರದಲ್ಲಿ ಠೇವಣಿಯನ್ನು ಸ್ವೀಕರಿಸಿ ಸದಸ್ಯರಿಗೆ ವಿವಿಧ ಉದ್ದೇಶಗಳ ಸಾಲವನ್ನು ಕಡಿಮೆ ಬಡ್ಡಿದರದಲ್ಲಿ ವಿತರಿಸುತ್ತಿದ್ದು ಇದರ ಸದುಪಯೋಗ ಪಡೆದುಕೊಳ್ಳುವಂತೆ ಹಾಗೂ ಸಹಕಾರಿಯ ಪ್ರಗತಿಗೆ ಕಾರಣೀಕರ್ತರಾದ ಎಲ್ಲಾ ಸದಸ್ಯ ಬಾಂಧವರಿಗೂ ಕೃತಜ್ಞತೆಗಳನ್ನು ಅಧ್ಯಕ್ಷರಾದ ಶ್ರೀ ಎಸ್. ಆರ್. ಸತೀಶ್ಚಂದ್ರ ಮತ್ತು ಪ್ರಧಾನ ವ್ಯವಸ್ಥಾಪಕರಾದ ಶ್ರೀ ವಸಂತ ನಾಯಕ್ ತಿಳಿಸಿರುತ್ತಾರೆ



**ಮಂಡ್ಯ** : ನುಡಿ ಭಾರತಿ ಸೌಹಾರ್ದ ಸಹಕಾರಿ ಸಂಘ ನಿ., ಮಂಡ್ಯ ಇದರ ಆಡಳಿತ ಮಂಡಳಿ ಸಭೆಯಲ್ಲಿ ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು ಭಾಗವಹಿಸಿ ನಿರ್ದೇಶಕರ ಹಕ್ಕು & ಕರ್ತವ್ಯಗಳು, ಲೆಕ್ಕ ಪರಿಶೋಧನೆ ವರದಿ, ಆರ್ಥಿಕ ಬೆಳವಣಿಗೆ, ಸಂಯುಕ್ತ ಸಹಕಾರಿ ತರಬೇತಿ ವಿಷಯಗಳ ಕುರಿತು ಮಾಹಿತಿಯನ್ನು ನೀಡಿದರು.



**ಮಂಡ್ಯ** : ಮಂಡ್ಯ ಜಿಲ್ಲಾ ಶಾಮಿಯಾನ ಮಾಲೀಕರ ಸೌಹಾರ್ದ ಸಹಕಾರಿ ಸಂಘ ನಿ., ಮಂಡ್ಯ ಇದರ ಆಡಳಿತ ಮಂಡಳಿ ಸಭೆಯಲ್ಲಿ ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು ಭಾಗವಹಿಸಿ ನಿರ್ದೇಶಕರ ಹಕ್ಕು & ಕರ್ತವ್ಯಗಳು, ಲೆಕ್ಕ ಪರಿಶೋಧನೆ ವರದಿ, ಆರ್ಥಿಕ ಬೆಳವಣಿಗೆ, ಸಂಯುಕ್ತ ಸಹಕಾರಿ ತರಬೇತಿ ವಿಷಯಗಳ ಕುರಿತು ಮಾಹಿತಿಯನ್ನು ನೀಡಿದರು. ಸಭೆಯ ಅಧ್ಯಕ್ಷತೆಯನ್ನು ಅಧ್ಯಕ್ಷರಾದ ಶ್ರೀ ರಮೇಶ್ ರವರು ವಹಿಸಿದ್ದರು. ಆಡಳಿತ ಮಂಡಳಿ ನಿರ್ದೇಶಕರು ಸಿಇಓ ರಾದ ಶ್ರೀ ಬಸವರಾಜು ರವರು ಹಾಜರಿದ್ದರು. ಇದೇ ಸಂದರ್ಭದಲ್ಲಿ ಯಶಸ್ವಿನಿ ಫಲಾನುಭವಿ ಸದಸ್ಯರಿಗೆ ನೋಂದಣಿ ಕಾರ್ಡ್ ನ್ನು ವಿತರಿಸಲಾಯಿತು.



**ಹಾಸನ** : ಶ್ರೀ ಪುಷ್ಪಗಿರಿ ಸೌಹಾರ್ದ ಸಹಕಾರಿ ಸಂಘ ನಿ., ಹಾಸನ ಇದರ ಆಡಳಿತ ಮಂಡಳಿ ಸಭೆಯಲ್ಲಿ ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು ಭಾಗವಹಿಸಿ ಹಕ್ಕು & ಕರ್ತವ್ಯಗಳು, ಆರ್ಥಿಕ ಬೆಳವಣಿಗೆ ಕುರಿತು ಮಾಹಿತಿಯನ್ನು ನೀಡಲಾಯಿತು.



ಮಂಡ್ಯ : ಮಂಡ್ಯ ಜಿಲ್ಲಾ ಶ್ರೀ ಶ್ರೀ ಜಗಜ್ಯೋತಿ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಮಂಡ್ಯ ಇದರ ಆಡಳಿತ ಮಂಡಳಿ ಸಭೆಯಲ್ಲಿ ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು ಭಾಗವಹಿಸಿ ನಿರ್ದೇಶಕರ ಹಕ್ಕು & ಕರ್ತವ್ಯಗಳು, ಲೆಕ್ಕ ಪರಿಶೋಧನೆ ವರದಿ, ಆರ್ಥಿಕ ಬೆಳವಣಿಗೆ, ಸಂಯುಕ್ತ ಸಹಕಾರಿ ತರಬೇತಿ ವಿಷಯಗಳ ಕುರಿತು ಮಾಹಿತಿಯನ್ನು ನೀಡಿದರು. ಸಭೆಯ ಅಧ್ಯಕ್ಷತೆಯನ್ನು ಅಧ್ಯಕ್ಷರಾದ ಶ್ರೀ ಎಸ್. ನಾಗರಾಜು ರವರು ವಹಿಸಿದ್ದರು. ಉಪಾಧ್ಯಕ್ಷರು, ಆಡಳಿತ ಮಂಡಳಿ ನಿರ್ದೇಶಕರು ಸಿಇಓ ರಾದ ಶ್ರೀ ಮಹೇಶ್ ರವರು ಹಾಜರಿದ್ದರು.

## ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಆಯ್ಕೆ

**ಇಶಾನಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ವಿಜಯಪುರ**



**ಶ್ರೀ ಕೊಟ್ರಬಸವರಾಜ ತಂದೆ ಬಸಲಿಂಗಪ್ಪ ಬಿದರಕುಂದಿ**
ಅಧ್ಯಕ್ಷರು



**ಶ್ರೀ ನಾಗಯ್ಯ ತಂದೆ ಮಡಿವಾಳಯ್ಯ ಹಿರೇಮಠ**
ಉಪಾಧ್ಯಕ್ಷರು



**ಮಂಡ್ಯ** : ಜೆ.ಆರ್.ಡಿ.ಎಸ್ ಗ್ರಾಮೀಣ ಮಹಿಳಾ ಸೌಹಾರ್ದ ಸಹಕಾರಿ ನಿ., ಮಳವಳ್ಳಿ ಸಹಕಾರಿಯ ಅಧ್ಯಕ್ಷರಾಗಿ ಶ್ರೀಮತಿ ಚಂದ್ರಕಾಂತ ಹಾಗೂ ಉಪಾಧ್ಯಕ್ಷರಾಗಿ ಶ್ರೀಮತಿ ಮಂಜುಳಾ ಇವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.

## ಸುಕೋ ಬ್ಯಾಂಕ್ : 7.87 ಕೋಟಿ ರೂಪಾಯಿ ಲಾಭ

ಸಹಕಾರಿ ಕ್ಷೇತ್ರದಲ್ಲಿ ವಿಶ್ವಾಸಾರ್ಹವಾಗಿ ಬೆಳೆಯುತ್ತಿರುವ 'ಸುಕೋ ಬ್ಯಾಂಕ್' 2022-23ರ ಆರ್ಥಿಕ ಸಾಲಿನಲ್ಲಿ ಒಟ್ಟು 1560 ಕೋಟಿ ರೂಪಾಯಿ ವಹಿವಾಟು ನಡೆಸಿ, ಶೇ.23.43% ರಷ್ಟು ಪ್ರಗತಿ ಸಾಧಿಸಿ 7.87 ಕೋಟಿ ರೂಪಾಯಿ ಲಾಭಗಳಿಸಿದ್ದು, ಬ್ಯಾಂಕ್‌ನ ಎನ್‌ಪಿಎ ಶೂನ್ಯವಾಗಿದೆ ಎಂದು ಬ್ಯಾಂಕಿನ ಅಧ್ಯಕ್ಷ ಮೋಹಿತ್ ಮಸ್ಕಿ ಅವರು ತಿಳಿಸಿದ್ದಾರೆ.

ಸುಕೋ ಬ್ಯಾಂಕ್ ಕೇಂದ್ರ ಕಚೇರಿಯ ಸಭಾಂಗಣದಲ್ಲಿ ಭಾನುವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಈ ಮಾಹಿತಿ ನೀಡಿ, ಒಟ್ಟು ಲಾಭ 18.65 ಕೋಟಿ ರೂಪಾಯಿ ಆಗಿದ್ದು, ತೆರಿಗೆ ಪಾವತಿಯ ನಂತರ ನಿವ್ವಳ ಲಾಭ 7.87 ಕೋಟಿ ರೂಪಾಯಿ ಆಗಿದೆ. ಬ್ಯಾಂಕ್‌ನ ಎನ್‌ಪಿಎ (ನಿವ್ವಳ ಅನುತ್ಪಾದಕ ಆಸ್ತಿ) ಶೇ. 0% ರಷ್ಟಿದೆ ಎಂದರು.

ಸುಕೋ ಬ್ಯಾಂಕ್ ಕರ್ನಾಟಕದಾದ್ಯಂತ ಕಾರ್ಯಕ್ಷೇತ್ರ ವ್ಯಾಪ್ತಿಯನ್ನು ಹೊಂದಿದ್ದು 29 ಶಾಖೆಗಳಲ್ಲಿ ತನ್ನ ವ್ಯವಹಾರವನ್ನು ನಡೆಸಿದೆ. ಒಟ್ಟು 940 ಕೋಟಿ ರೂಪಾಯಿ ಠೇವಣಿ ಹೊಂದಿ, 620 ಕೋಟಿ ರೂಪಾಯಿ ಸಾಲ ವಿತರಣೆ ಮಾಡಿದೆ. ಒಟ್ಟು ಸಾಲದಲ್ಲಿ 25 ಲಕ್ಷದೊಳಗಿನ ಕಿರು ಸಾಲಗಳು 252 ಕೋಟಿ ಇದ್ದು, ಇದು ಒಟ್ಟು ಸಾಲದ ಶೇ.41 ರಷ್ಟು ಇರುತ್ತದೆ. ಸುಕೋ ಬ್ಯಾಂಕ್ ಎಂ.ಎಸ್.ಎಂ.ಇ ವಲಯಕ್ಕೆ ನೀಡುತ್ತಿರುವ ಮಹತ್ವವನ್ನು ಇದು ಸಾಬೀತು ಮಾಡುತ್ತದೆ ಎಂದರು.

ಸುಕೋ ಬ್ಯಾಂಕ್ ಕೇಂದ್ರ ಸರ್ಕಾರದ ಯುಪಿಐ ಹಣ ಪಾವತಿ ತಂತ್ರಜ್ಞಾನದ ವ್ಯವಸ್ಥೆಗೆ ಒಳಪಟ್ಟಿದೆ. ಹೊಸ ತಂತ್ರಜ್ಞಾನವನ್ನು ದೈನಂದಿನ ವ್ಯವಹಾರದಲ್ಲಿ ಅಳವಡಿಸಿಕೊಳ್ಳುವ ಮೂಲಕ ಅನೇಕ ಪ್ರಥಮಗಳ ಗೌರವಕ್ಕೆ ಪ್ರಾಪ್ತಿಯಾಗಿದೆ ಎಂದರು.

'ರೆಪೋ ರಿಲೇಟೆಡ್ ರೇಟ್' ಠೇವಣಿ ಯೋಜನೆ ಅಡಿಯಲ್ಲಿ ನಮ್ಮ ಗ್ರಾಹಕರ ಉಳಿತಾಯಕ್ಕೆ ಹಣದುಬ್ಬರಕ್ಕಿಂತ ಹೆಚ್ಚಿನ ಬಡ್ಡಿ ನೀಡಿ ಅವರ ಉಳಿತಾಯಕ್ಕೆ ಗೌರವ ನೀಡುವ ನಿಟ್ಟಿನಲ್ಲಿ ಕಳೆದ ವರ್ಷ ಹೊಸ ಹಾಗೂ ವಿನೂತನ ಠೇವಣಿ ಯೋಜನೆಯನ್ನು ಜಾರಿ ತಂದಿದ್ದೇವೆ. ರೆಪೋ ರೇಟ್‌ಗಿಂತ ಶೇ.2.20% ಹೆಚ್ಚು ಬಡ್ಡಿಯನ್ನು ಈ ಯೋಜನೆಯಲ್ಲಿ ನೀಡುತ್ತಿದ್ದು 3 ವರ್ಷಗಳ ಠೇವಣಿ ಯೋಜನೆ ಇದಾಗಿದೆ. ಪ್ರತೀ ಆರು ತಿಂಗಳಿಗೊಮ್ಮೆ ರಿಜರ್ವ್ ಬ್ಯಾಂಕಿನ ರೆಪೋ ರೇಟ್ ಅನುಸಾರ ಬಡ್ಡಿದರ ಬದಲಾಗುತ್ತದೆ. ಇದು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಒಂದು ವಿನೂತನ ಠೇವಣಿ ಯೋಜನೆಯಾಗಿದೆ ಎಂದು ಹೇಳಿದರು.

ನವೆಂಬರ್ ತಿಂಗಳಿನಲ್ಲಿ ಈ ಯೋಜನೆಗೆ ಚಾಲನೆ ನೀಡಿದ್ದು, ಶೇ. 8.10 ಬಡ್ಡಿ ನೀಡುತ್ತಿದ್ದು ಏಪ್ರೀಲ್ 1 ರ ನಂತರ ಶೇ. 8.70 ಬಡ್ಡಿದರ ನೀಡಲಾಗುತ್ತಿದೆ. ಹಣದುಬ್ಬರ ನಿರ್ವಹಿಸಲು ಇದು ಉತ್ತಮ ಠೇವಣಿ ಯೋಜನೆಯಾಗಿದ್ದು ಗ್ರಾಹಕರು ಈ ಯೋಜನೆಯ ಸದವಕಾಶ ಪಡೆಯಬಹುದಾಗಿದೆ ಎಂದರು.

ನಮ್ಮ ಭಾಗದಲ್ಲಿರುವ ಶೈತ್ಯಾಗಾರ ಗೋದಾಮುಗಳ ಜೊತೆ ಒಪ್ಪಂದ ಮಾಡಿಕೊಂಡು ರೈತರು ಸಂಗ್ರಹಿಸಿದ ಕೃಷಿ ಉತ್ಪನ್ನಗಳ ಮೇಲೆ ಕಡಿಮೆ ಬಡ್ಡಿ ದರದಲ್ಲಿ ರೂ. 36 ಕೋಟಿ ಸಾಲವನ್ನು ವಿತರಿಸಿ ರೈತರ ಹಿತಾಸಕ್ತಿ ಕಾಪಾಡುವಲ್ಲಿ ಯಶಸ್ವಿಯಾಗಿದ್ದೇವೆ ಎಂದರು.

ಕಾರ್ಯಕ್ರಮದಲ್ಲಿ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಎಂ.ಆರ್. ಗಿರೀಶ್, ಆಡಳಿತ ಮಂಡಳಿಯ ಕಾರ್ಯದರ್ಶಿ ವೆಂಕಟೇಶ್‌ರಾವ್ ಉಪಸ್ಥಿತರಿದ್ದರು.



**ಮಂಡ್ಯ** : ಸಮೃದ್ಧಿ ಭಾರತಿ ಸೌಹಾರ್ದ ಸಹಕಾರಿ ಸಂಘ ನಿ., ಭಾರತೀನಗರ ಇದರ ಮಂಡ್ಯ ಶಾಖೆಯ ಉದ್ಘಾಟನೆಯನ್ನು ಅಧ್ಯಕ್ಷರಾದ ಶ್ರೀ ಸಿದ್ದಲಿಂಗಯ್ಯ ಇವರು ನೆರವೇರಿಸಿದರು. ಆಡಳಿತ ಮಂಡಳಿ ಸದಸ್ಯರು, ಸಿಇಓ ಶ್ರೀಮತಿ ಪೂರ್ಣಿಮಾ, ಮಂಡ್ಯ ಶಾಖೆ ವ್ಯವಸ್ಥಾಪಕರಾದ ಶ್ರೀ ಶ್ರೀಧರ್ ಹಾಜರಿದ್ದರು.

## ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳು ಹಾಗೂ ಸೌಹಾರ್ದ ಸಹಕಾರಿ ಬ್ಯಾಂಕುಗಳು ಸಾಧಿಸಿದ 2022-23ನೇ (ಮಾರ್ಚ್ 2023ಕ್ಕೆ ಇದ್ದಂತೆ) ವರ್ಷಾಂತ್ಯಕ್ಕೆ ಆರ್ಥಿಕ ಅಂಕಿ ಸಂಖ್ಯೆಗಳು

### ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬಳ್ಳಾರಿ

| ಆರ್ಥಿಕ ಅಂಶಗಳು | 31.03.2023ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ಒಟ್ಟು ಠೇವಣಿ | 940 |
| ಸಾಲ ಮತ್ತು ಮುಂಗಡಗಳು | 620 |
| ಒಟ್ಟು ವ್ಯವಹಾರ | 1560 |
| ಒಟ್ಟು ಎನ್.ಪಿ.ಎ ಅನುಪಾತ | 5.07% |
| ನೆಟ್ ಎನ್.ಪಿ.ಎ ಅನುಪಾತ | 0% |
| ಒಟ್ಟು ಲಾಭ | 18.65 |
| ನಿವ್ವಳ ಲಾಭ | 7.8 |

### ವಿಕಾಸ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬಳ್ಳಾರಿ

| ಆರ್ಥಿಕ ಅಂಶಗಳು | 31.03.2023ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ಒಟ್ಟು ಠೇವಣಿ | 704 |
| ಸಾಲ ಹಾಗು ಮುಂಗಡಗಳು | 458 |
| ಒಟ್ಟು ವ್ಯವಹಾರ | 1162 |
| ತೆರಿಗೆ ಮೊದಲ ಲಾಭ | 16.31 |
| ತೆರಿಗೆ ನಂತರದ ಲಾಭ | 8.41 |
| ಒಟ್ಟು ಎನ್.ಪಿ.ಎ ಅನುಪಾತ | 1.85% |
| ನೆಟ್ ಎನ್.ಪಿ.ಎ ಅನುಪಾತ | 0% |

### ಶ್ರೀ ಭ್ರಮರಾಂಭ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿ

| ಆರ್ಥಿಕ ಅಂಶಗಳು | 31.03.2023ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ಒಟ್ಟು ಠೇವಣಿ | 316.83 |
| ಒಟ್ಟು ಸಾಲ | 248.12 |
| ಒಟ್ಟು ವ್ಯವಹಾರ | 564.95 |
| ದುಡಿಯುವ ಬಂಡವಾಳ | 362.54 |
| ನಿವ್ವಳ ಲಾಭ | 4.77 |
| ಒಟ್ಟು ಎನ್.ಪಿ.ಎ ಅನುಪಾತ | 3.75% |

### ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಚಿತ್ರದುರ್ಗ

| ಆರ್ಥಿಕ ಅಂಶಗಳು | 31.03.2023ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ನಿವ್ವಳ ಲಾಭ | 5.28 |
| ಒಟ್ಟು ಠೇವಣಿ | 164.75 |
| ಒಟ್ಟು ಸಾಲಗಳು | 117.09 |
| ಒಟ್ಟು ಎನ್‌ಪಿಎ ಅನುಪಾತ | 0.78 |
| ನೆಟ್ ಎನ್‌ಪಿಎ ಅನುಪಾತ | 0.0% |
| ಸ್ವಂತ ಬಂಡವಾಳ | 36 |
| ಒಟ್ಟು ವ್ಯವಹಾರ | 281.84 |

### ಶ್ರೀ ವಿಷ್ಣು ವಿಲಾಸ ಸೌಹಾರ್ದ ಸಹಕಾರಿ ಸಂಘ ನಿ., ರಾಯಚೂರು

| ಆರ್ಥಿಕ ಅಂಶಗಳು | 31.03.2023ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ಶೇರುಗಳು | 2.62 |
| ಒಟ್ಟು ಠೇವಣಿಗಳು | 87.62 |
| ಮೀಸಲು ನಿಧಿಗಳು | 5.81 |
| ಸಾಲಗಳು | 72.55 |
| ಒಟ್ಟು ವ್ಯವಹಾರ | 160.47 |
| ನಿವ್ವಳ ಲಾಭ | 1.59 |

### ಮಾನ್ವಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಮಾನ್ವಿ

| ಆರ್ಥಿಕ ಅಂಶಗಳು | 31.03.2023ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ಸಿ.ಆರ್.ಎ.ಆರ್ ಅನುಪಾತ | 10.25% |
| ಸಾಲ ಮತ್ತು ಮುಂಗಡಗಳು | 166.30 |
| ನೆಟ್ ಎನ್.ಪಿ.ಎ ಅನುಪಾತ | 1.94% |
| ನಿವ್ವಳ ಲಾಭ | 3.38 |
| ಒಟ್ಟು ನಿಧಿಗಳು | 37.84 |
| ಒಟ್ಟು ಠೇವಣಿಗಳು | 260.30 |

**ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಪುತ್ತೂರು**

| ಆರ್ಥಿಕ ಅಂಶಗಳು | 31.03.2023ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ಸದಸ್ಯರು | 40075 |
| ಒಟ್ಟು ಠೇವಣಿ | 256 |
| ಒಟ್ಟು ಸಾಲ | 228 |
| ಶೇರು ಬಂಡವಾಳ | 9.81 |
| ಒಟ್ಟು ವ್ಯವಹಾರ | 484 |
| ನಿವ್ವಳ ಲಾಭ | 5.15 |

**ಜಿಎಂ ಸೌಹಾರ್ದ ಪತ್ತಿನ ಸಹಕಾರಿ ನಿ., ದಾವಣಗೆರೆ**

| ಆರ್ಥಿಕ ಅಂಶಗಳು | 31.03.2023ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ಶೇರು ಬಂಡವಾಳ | 7.22 |
| ಒಟ್ಟು ಠೇವಣಿಗಳು | 202.74 |
| ಒಟ್ಟು ಸಾಲ | 173.32 |
| ನಿವ್ವಳ ಲಾಭ | 3.43 |
| ದುಡಿಯುವ ಬಂಡವಾಳ | 221.71 |
| ಸ್ವಂತ ಬಂಡವಾಳ | 11.75 |

**ಸಂಡೂರು ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬಳ್ಳಾರಿ**

| ಆರ್ಥಿಕ ಅಂಶಗಳು | 31.03.2023ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ಒಟ್ಟು ನಿಧಿಗಳು | 13.76 |
| ಒಟ್ಟು ಠೇವಣಿ | 102.95 |
| ಒಟ್ಟು ಸಾಲ | 28.08 |
| ಒಟ್ಟು ಎನ್.ಪಿ.ಎ ಅನುಪಾತ | 0.22 |
| ನೆಟ್ ಎನ್.ಪಿ.ಎ ಅನುಪಾತ | 0.00 |
| ತೆರಿಗೆ ಮೊದಲ ಲಾಭ | 2.56 |
| ತೆರಿಗೆ ನಂತರದ ಲಾಭ | 1.90 |
| ಸಿ.ಆರ್.ಎ.ಆರ್ ಅನುಪಾತ | 29.65% |
| ಆರ್.ಓ.ಎ ಅನುಪಾತ | 1.71% |

**ಒಡಿಯೂರು ಶ್ರೀ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ಬಂಟ್ವಾಳ**

| ಆರ್ಥಿಕ ಅಂಶಗಳು | 31.03.2023ಕ್ಕೆ ಇದ್ದಂತೆ |
|---|---|
| ಸದಸ್ಯರು | 34,149 |
| ಒಟ್ಟು ಸಾಲಗಳು | 182 ಕೋಟಿ |
| ಸ್ವಸಹಾಯ ಗುಂಪುಗಳು | 6583 |
| ಪಾಲು ಬಂಡವಾಳ | 1.73 ಕೋಟಿ |
| ಒಟ್ಟು ಠೇವಣಿ | 250 ಕೋಟಿ |
| ಒಟ್ಟು ವ್ಯವಹಾರ | 432 ಕೋಟಿ |
| ನಿವ್ವಳ ಲಾಭ | 3.35 ಕೋಟಿ |

**ಪ್ರಗತಿಕೃಷ್ಣ ಸೌಹಾರ್ದ ಪತ್ತಿನ ಸಹಕಾರಿ ನಿ., ಹೊಸಪೇಟೆ**

| ಆರ್ಥಿಕ ಅಂಶಗಳು | 31.03.2023ಕ್ಕೆ ಇದ್ದಂತೆ (ಲಕ್ಷಗಳಲ್ಲಿ) |
|---|---|
| ಶೇರು ಬಂಡವಾಳ | 167 |
| ಒಟ್ಟು ನಿಧಿಗಳು | 42 |
| ಒಟ್ಟು ಠೇವಣಿಗಳು | 2665 |
| ಸಾಲ ಮತ್ತು ಮುಂಗಡ | 2056 |
| ಆದಾಯ | 309 |
| ವೆಚ್ಚ | 266 |
| ನಿವ್ವಳ ಲಾಭ | 43 |

**ಗಂಗೊಳ್ಳಿ ಟೌನ್ ಸೌಹಾರ್ದ ಕೋ-ಆಪರೇಟಿವ್ ಲಿ., ಗಂಗೊಳ್ಳಿ**

| ಆರ್ಥಿಕ ಅಂಶಗಳು | 31.03.2023ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ನಿವ್ವಳ ಲಾಭ | 1.01 |
| ಠೇವಣಿಗಳು | 59.92 |
| ಸದಸ್ಯರ ಸಾಲಗಳು | 56.02 |
| ನಿಧಿಗಳು | 4.89 |
| ಪಡೆದುಕೊಂಡ ಸಾಲ | 2.70 |
| ಹೂಡಿಕೆಗಳು | 17.50 |
| ಪಾಲು ಬಂಡವಾಳ | 2.31 |
| ಬ್ಯಾಂಕ್ ಖಾತೆಗಳಲ್ಲಿ | 0.91 |

### ರಡ್ಡೇರ ಪತ್ತಿನ ಸೌಹಾರ್ದ ಸಹಕಾರಿ ನಿ., ಲಿಂಗಸುಗೂರು

| ಆರ್ಥಿಕ ಅಂಶಗಳು | 31.03.2023ಕ್ಕೆ ಇದ್ದಂತೆ (ಲಕ್ಷಗಳಲ್ಲಿ) |
|---|---|
| ಒಟ್ಟು ವ್ಯವಹಾರ | 129.72 ಕೋಟಿ |
| ನಿವ್ವಳ ಲಾಭ | 1.30 ಕೋಟಿ |
| ಶೇರು ಬಂಡವಾಳ | 183.20 |
| ಒಟ್ಟು ನಿಧಿಗಳು | 478.33 |
| ಠೇವಣಿಗಳು | 7340.18 |
| ಒಟ್ಟು ಸಾಲಗಳು | 5631.88 |
| ದುಡಿಯುವ ಬಂಡವಾಳ | 8002.22 |
| ಒಟ್ಟು ವಹಿವಾಟು | 469.50 |

### ಅಳಣಾವರ ಪತ್ತಿನ ಸೌಹಾರ್ದ ಸಹಕಾರಿ ನಿ., ಅಳಣಾವರ

| ಆರ್ಥಿಕ ಅಂಶಗಳು | 31.03.2023ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ನಿವ್ವಳ ಲಾಭ | 73.45 ಲಕ್ಷ |
| ಒಟ್ಟು ಠೇವಣಿ | 15.05 |
| ಒಟ್ಟು ಸಾಲ | 14.69 |
| ಆದಾಯ | 1.77 |
| ಶೇರು ಬಂಡವಾಳ | 1.31 |
| ಸ್ವಂತ ಬಂಡವಾಳ | 3.43 |

### ಶ್ರೀ ವಿಜಯಲಕ್ಷ್ಮಿ ಸೌಹಾರ್ದ ಸಹಕಾರಿ ಸಂಘ ನಿ., ಧಾರವಾಡ

| ಆರ್ಥಿಕ ಅಂಶಗಳು | 31.03.2023ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ಶೇರು ಬಂಡವಾಳ | 1.83 |
| ಒಟ್ಟು ನಿಧಿಗಳು | 4.39 |
| ಒಟ್ಟು ಠೇವಣಿ | 29.15 |
| ನಗದು ಮತ್ತು ಬ್ಯಾಂಕ್ ಖಾತೆ | 4.72 |
| ಹೂಡಿಕೆ | 9.51 |
| ಸ್ಥಿರ ಆಸ್ತಿ | 1.35 |
| ನಿವ್ವಳ ಲಾಭ | 58.35 ಲಕ್ಷ |
| ದುಡಿಯುವ ಬಂಡವಾಳ | 37.20 |
| ಸಾಲ ಮತ್ತು ಮುಂಗಡ | 20 |

### ಶ್ರೀ ಕನ್ಯಕಾಪರಮೇಶ್ವರಿ ಸೌಹಾರ್ದ ಸಹಕಾರಿ ಸಂಘ ನಿ., ಚಿತ್ರದುರ್ಗ

| ಆರ್ಥಿಕ ಅಂಶಗಳು | 31.03.2023ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ಒಟ್ಟು ವ್ಯವಹಾರ | 74 |
| ಸಾಲ ಮತ್ತು ಮುಂಗಡಗಳು | 35.83 |
| ದುಡಿಯುವ ಬಂಡವಾಳ | 47 |
| ನಿವ್ವಳ ಲಾಭ | 1.40 |
| ಒಟ್ಟು ನಿಧಿಗಳು | 9 |
| ಒಟ್ಟು ಠೇವಣಿಗಳು | 38 |

### ಶ್ರೀ ಬಸವೇಶ್ವರ ಸೌಹಾರ್ದ ಸಹಕಾರಿ ನಿ., ಮೂಡಲಗಿ, ಬೆಳಗಾವಿ

| ಆರ್ಥಿಕ ಅಂಶಗಳು | 31.03.2023ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ಸ್ವಂತ ಬಂಡವಾಳ | 16.56 |
| ಒಟ್ಟು ಸಾಲ ಮತ್ತು ಮುಂಗಡ | 54.18 |
| ದುಡಿಯುವ ಬಂಡವಾಳ | 59.54 |
| ನಿವ್ವಳ ಲಾಭ | 3.14 |
| ಸಾಲ ವಸೂಲಾತಿ ಅನುಪಾತ | 100% |
| ಒಟ್ಟು ಠೇವಣಿಗಳು | 42.20 |

### ಸುಣಧೋಳಿ ಮಹಿಳಾ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., ಸುಣಧೋಳಿ

| ಆರ್ಥಿಕ ಅಂಶಗಳು | 31.03.2023ಕ್ಕೆ ಇದ್ದಂತೆ (ಲಕ್ಷಗಳಲ್ಲಿ) |
|---|---|
| ದುಡಿಯುವ ಬಂಡವಾಳ | 44.19 |
| ಸಾಲ ಮತ್ತು ಮುಂಗಡ | 31.12 |
| ನಿವ್ವಳ ಲಾಭ | 76.07 |
| ಒಟ್ಟು ಠೇವಣಿ | 36.24 |

2022-23ನೇ ಸಾಲಿನ ವರ್ಷಾಂತ್ಯದ ಆರ್ಥಿಕ ಅಂಕಿ ಅಂಶಗಳನ್ನು ಸಾಧಿಸಿದ ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳು ಹಾಗೂ ಸೌಹಾರ್ದ ಸಹಕಾರಿ ಬ್ಯಾಂಕುಗಳಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರ ಪರವಾಗಿ ಅಭಿನಂದನೆಗಳು.



# 97ನೇ ತಿದ್ದುಪಡಿ ನಂತರ ಸೌಹಾರ್ದ ಕಾಯಿದೆ 1997 ಮತ್ತು ಸಹಕಾರ ಕಾಯಿದೆ 1959 ಆದ ಪರಿಣಾಮಗಳು - ಬದಲಾವಣೆಗಳು - ಒಂದು ವಿಮರ್ಷೆ

– ಶ್ರೀ ಸಿ.ಎನ್ ಪರಶಿವಮೂರ್ತಿ

97ನೇ ಸಂವಿದಾನ 2011ರಲ್ಲಿ ಕೇಂದ್ರ ಸರ್ಕಾರ "ಸಹಕಾರ" ದ ವಿಷಯವನ್ನು ಸಂವಿಧಾನದ ಭಾಗ IVನ್ನು ಸೇರ್ಪಡೆಮಾಡಿ 43ಬಿ, 243 ZH ರಿಂದ ZQ ವರೆಗೆ ಹೊಸದಾಗಿ 2012ರಲ್ಲಿ ಗೆಜೆಟ್‌ನಲ್ಲಿ ಪ್ರಕಟಿಸಿ, ರಾಜ್ಯ ಸರ್ಕಾರಗಳಿಗೆ, ಒಂದು ವರ್ಷದೊಳಗೆ, ಕಾಯಿದೆಗೆ ತಿದ್ದುಪಡಿ ತರಲು ಸೂಚಿಸಿತ್ತು, ಅದನ್ನು ಗುಜರಾತ್ ಉಚ್ಚನ್ಯಾಯಾಲಯ ಅಸಂವಿದಾನಿಕ ಎಂದು ಕಿತ್ತು ಹಾಕಿತ್ತು ಮತ್ತು ಅದನ್ನು ಶ್ರೇಷ್ಠನ್ಯಾಯಾಲಯ ಧೃಡೀಕರಿಸಿ, ಬಹುರಾಜ್ಯ ಸಹಕಾರಿ ಕಾಯಿದೆ 2002ಕ್ಕೆ ಮಾತ್ರ ಇದು ಸಿಂಧು ಎಂದು ತೀರ್ಪಿಟ್ಟಿತ್ತು. ಅದರೂ ಕರ್ನಾಟಕ ರಾಜ್ಯ 2012ರ ಸಂವಿದಾನ ತಿದ್ದುಪಡಿಯನ್ನು ರಾಜ್ಯದ ಎರಡೂ ಸಹಕಾರಿ ಕಾಯಿದೆಗಳಿಗೆ ಅಳವಡಿಸಿಕೊಳ್ಳಲು ತೀರ್ಮಾನಿಸಿ 2013ರಲ್ಲಿ ಎರಡೂ ಕಾಯಿದೆಗೆ ತಿದ್ದುಪಡಿತರಲು ತೀರ್ಮಾನಿಸಿತು.

97ನೇ ಸಂವಿಧಾನದಲ್ಲಿ ಮಾಡಿದ ತಿದ್ದುಪಡಿಯಲ್ಲಿ ಸಹಕಾರಿ ಸಂಸ್ಥೇಗಳ ಸ್ಥಾಪನೆಗೆ ದ್ಯೋಯೋದ್ದೇಶಗಳನ್ನು ಸೇರಿಸಿ ರಾಜ್ಯ ಸರ್ಕಾರಗಳು ಸಹಕಾರಿ ಸಂಸ್ಥೆಗಳನ್ನ ಸ್ವಯಂಪ್ರೇರಿತ ರಚನೆ ಸ್ವಾಯತ್ತ ನಿರ್ವಹಣೆ, ಪ್ರಜಾಸತಾತ್ಮಕ ನಿಯಂತ್ರಣ ಮತ್ತು ವೃತ್ತಿಪರ ಆಡಳಿತದ ಬಗ್ಗೆ ಉಲ್ಲೇಖಿಸಿತು (43ಬಿ) ಹಾಗೂ ಈ ಕೆಳಕಂಡ ವಿಷಯಗಳಬಗ್ಗೆ ಹೊಸದಾಗಿ ಅವಕಾಶವನ್ನ ಕಲ್ಪಿಸಿತ್ತು.

1. ಆಡಳಿತ ಮಂಡಳಿ ರಚನೆ ಹಾಗೂ ಗರಿಷ್ಠ 21 ನಿರ್ದೇಶಕರ ಮಿತಿ. ಆಡಳಿತ ಮಂಡಳಿ ಅವಧಿಯ 5 ವರ್ಷಗಳು ಮತ್ತು ಇಬ್ಬರಿಗೆ ಹೆಚ್ಚಿಲ್ಲದಂತೆ ವೃತ್ತಿಪರ ನಿರ್ದೇಶಕರನ್ನ ಸಹಮತದಿಂದ ನೇಮಕ ಮತ್ತು ಮೂವರಿಗೆ ಹೆಚ್ಚಿಲ್ಲದಂತೆ ಕಾರ್ಯನಿರ್ವಾಹಕ ನಿರ್ದೇಶಕರನ್ನ ಸಹಮತದಿಂದ ಸೇರ್ಪಡೆ (ಹಿರಿಯ ಅಧಿಕಾರಿಗಳನ್ನು) ಹಾಗೂ ಖಾಲಿಯಾದ ಸ್ಥಾನಗಳನ್ನ ಭರ್ತಿಮಾಡಲು. (243Z)

2. ಮಂಡಳಿ, ಪದಾದಿಕಾರಿಗಳ ಆಯ್ಕೆಗೆ ಚುನಾವಣಾ ಪ್ರಾಧಿಕಾರ ರಚನೆ, ಮೇಲ್ವಿಚಾರಣೆ, ಮತದಾರರ ಪಟ್ಟಿ ಮತ್ತು ಪದಾದಿಕಾರಿಗಳ ಆಯ್ಕೆಗಾಗಿ ಒಂದು ಸಹಕಾರ ಚುನಾವಣಾ ಪ್ರಾಧಿಕಾರದ ರಚನೆಗೆ ಅವಕಾಶ. (243ZK)

3.ಆಡಳಿತ ಮಂಡಳಿ ರಚನೆಯಾದ ನಂತರ ಸಂಘವು ಆಡಳಿತ ನಡೆಸುವಲ್ಲಿ ಚ್ಯುತಿ ಮಾಡಿದಾಗ ಮಂಡಳಿಯನ್ನು ರದ್ದು ಪಡಿಸಿ ಅಥವಾ ಅಮಾನತ್ತಿನಲ್ಲಿಟ್ಟು ಆಡಳಿತಾಧಿಕಾರಿ ನೇಮಿಸುವುದು. ಆಡಳಿತಾಧಿಕಾರಿಯ ಅವಧಿಯನ್ನ 6 ತಿಂಗಳಿಗೆ ಮಿತಿಗೊಳಿಸುವುದು. (243ZL)

4. ಲೆಕ್ಕಪತ್ರ ಪರಿಶೋಧನೆ ಮಾಡಲು ಸನ್ನದ್ದ ಲೆಕ್ಕಿಗರ ಪಟಿ ್ಟತಯಾರಿಸಲು ಲೆಕ್ಕತಪಾಸಣಾ ಇಲಾಖೆಯ ನಿರ್ದೇಶಕರಿಗೆ ಅಧಿಕಾರ ಮತ್ತು ಲೆಕ್ಕತಪಾಸಿಗರ ವಿದ್ಯಾರ್ಹತೆ ನಿಗದಿ.(243ZM)

5. ಸಹಕಾರಿ ಸಂಘಗಳು ಸೆಪ್ಟೆಂಬರ್ ಅಂತ್ಯದೊಳಗೆ ವಾರ್ಷಿಕ ಸಾಮಾನ್ಯ ಸಭೆಯನ್ನು ಕರೆಯತಕ್ಕದ್ದು. (243ZN)

6. ಸಹಕಾರಿ ಸಂಘದ ಸದಸ್ಯರು ತನಗೆ ಸಂಬಂದಪಟ್ಟ ಮಾಹಿತಿಯನ್ನ ಪಡೆಯಲು ಅವಕಾಶ ಹಾಗೂ ಪ್ರತಿಯೊಬ್ಬ ಸದಸ್ಯನು ಸಾಮಾನ್ಯ ಸಭೆಯಲ್ಲಿ ಭಾಗವಹಿಸುವ ಹಕ್ಕು. (243ZO)

7. ನಿಬಂಧಕರಿಗೆ ಸೆಪ್ಟೆಂಬರ್ ಅಂತ್ಯದೊಳಗೆ ಪ್ರತಿಯೊಂದು ಸಹಕಾರಿ ಸಂಘವು ತನ್ನ 1) ವಾರ್ಷಿಕ ವರದಿ, 2) ಲೆಕ್ಕ ತಪಾಸಣೆ ಮಾಡಿದ ವರದಿ,3) ಹೆಚ್ಚುವರಿ ವೆಚ್ಚ ವಿಲೇವಾರಿ, 4) ಉಪವಿಧಿಗಳ ತಿದ್ದುಪಡಿ. ಚುನಾವಣೆ ಬಾಕಿ ಇದ್ದರೆ ಅದರ ರಚನೆಗೆ ಕ್ರಮ, ಈಎಲ್ಲಾ ಮಾಹಿತಿಯನ್ನ ಸಲ್ಲಿಸಲೇಬೇಕೆಂಬ ಷರತ್ತು. (243ZP)

8. ಅಪರಾಧಗಳು ಮತ್ತು ದಂಡಗಳಿಗೆ ಸಂಬಂಧ ಪಟ್ಟಂತೆ ಶಾಸನಬದ್ದ ಜವಾಬ್ದಾರಿ ನಿರ್ವಹಿಸಿದ್ದರೆ ದಂಡ ಮತ್ತು ಶಿಕ್ಷೆ ಹೆಚ್ಚುವರಿಯಾಗಿ ಸೇರ್ಪಡೆ ಮಾಡುವುದು. (243ZQ)

ಈ ಮೇಲ್ಕಂಡ ಸಂವಿಧಾನದ ಅವಕಾಶಗಳನ್ನ ಕರ್ನಾಟಕ ರಾಜ್ಯ ತನ್ನ ಎರಡೂ ಕಾಯಿದೆಗಳಿಗೆ ತಿದ್ದುಪಡಿ ತಂದು 2013ರಿಂದ ಜಾರಿ ಮಾಡಿದೆ. ಈ ಸಂವಿಧಾನ ತಿದ್ದುಪಡಿ ಮಾಡುವಾಗ ಕರ್ನಾಟಕ ಸರ್ಕಾರ 1997ರಲ್ಲಿ ರೂಪಿಸಿ/ರಚಿಸಿ ಕರ್ನಾಟಕ ಸೌಹಾರ್ದ ಕಾಯಿದೆಯಲ್ಲಿನ ಬಹುಮುಖ್ಯ ಮಾರ್ಪಾಡುಗಳನ್ನ ಸೇರಿಸಿರುವುದನ್ನ ಗಮನಿಸಬಹುದು. ಅಂದರೆ ಸೌಹಾರ್ದ ಕಾಯಿದೆ ರಚನೆ ಉದ್ದೇಶ ಸ್ವಾಯತ್ತತೆ, ಸ್ವಾತಂತ್ರ್ಯ ಮತ್ತು ಸ್ವಯಂ ನಿಯಂತ್ರಣದ ಬಗ್ಗೆ ಉಲ್ಲೇಖಿಸಿದ್ದನ್ನು ಅನುಸರಿಸಿ, ಸಂವಿಧಾನಕ್ಕೂ ಸೇರ್ಪಡೆಮಾಡಿರುವುದನ್ನು ಗಮನಿಸಬಹುದು.

## ಪ್ರಮುಖವಾಗಿ ಚರ್ಚಿಸಬೇಕಾದ ಅಂಶಗಳೆಂದರೆ

1. ಎರಡೂ ಕಾಯಿದೆಗಳಲ್ಲಿ ಸಂವಿಧಾನ ತಿದ್ದುಪಡಿಯಲ್ಲಿ ಸಾಮಾನ್ಯ ಸಭೆ ಕರೆಯುವುದನ್ನು ಸೆಪ್ಟೆಂಬರ್ ಅಂತ್ಯಕ್ಕೆ ಎಂದಿರುವುದನ್ನ ಸೆಪ್ಟೆಂಬರ್ 25ರೊಳಗೆ ಎಂದು ಮಾರ್ಪಡಿಸಿಕೊಂಡಿತ್ತು. ಏಕೆಂದರೆ ನಿಬಂಧಕರಿಗೆ ಸಲ್ಲಿಸಬೇಕಾದ ವರದಿಗಳನ್ನ ಸೆಪ್ಟೆಂಬರ್ ಅಂತ್ಯಕ್ಕೆ ಸಲ್ಲಿಸಲು ಅವಧಿ ಇರಲೆಂದು ಈ ಮಾರ್ಪಾಡು ಮಾಡಲಾಯಿತು.

2. ಮಂಡಲಿ ಅವಧಿ ಎರಡೂ ಕಾಯಿದೆಯಲ್ಲಿಯೂ 5 ವರ್ಷಗಳೂ

ಎಂದಿದ್ದರೂ ಸಹಕಾರಿ ವರ್ಷಕ್ಕೆ ಸೀಮಿತಗೊಳಿಸಿದ್ದಕ್ಕೆ ಬದಲಾಗಿ ಚುನಾವಣಾ ದಿನಾಂಕದಿಂದ 5 ವರ್ಷಗಳು ಎಂಬುದರ ಅರ್ಥ ನೀಡಲಾಯಿತು.

3. ಲೆಕ್ಕ ತಪಾಸಣಾ ವರದಿ ಸೆಪ್ಟೆಂಬರ್ ಅಂತ್ಯದೊಳಗೆ ಎಂದಿರುವುದನ್ನು ಸೆಪ್ಟೆಂಬರ್ 1ನೇ ತಾರೀಖಿನೊಳಗೆ ಪಡೆಯಲು ಷರತ್ತು ವಿಧಿಸಲಾಯಿತು. ಏಕೆಂದರೆ ವರದಿ ಬಂದ ನಂತರ ನ್ಯೂನತೆಗಳ ಬಗ್ಗೆ ಕ್ರಮ ಜರುಗಿಸಿ, ಸಾಮಾನ್ಯ ಸಭೆ ಒಪ್ಪಿಗೆ ಪಡೆಯಬೇಕಾಗುತ್ತದೆ.ಲೆಕ್ಕ ತಪಾಸಕರ ಪಟ್ಟಿಯನ್ನು ಈ ಹಿಂದೆ ಸಂಯುಕ್ತ ಸಹಕಾರಿ ತಯಾರಿಸುತ್ತಿತ್ತು. ಅದನ್ನು ಹಿಂಪಡೆದ ನಂತರ, ಈಗ ಲೆಕ್ಕತಪಾಸಿಗರ ಪಟ್ಟಿಯನ್ನು ಲೆಕ್ಕತಪಾಸಣಾ ಇಲಾಖೆಯ ನಿರ್ದೇಶಕರು ಮಾಡುತ್ತಿದ್ದಾರೆ. ಆದರೆ ಇದನ್ನು ಜಾರಿಮಾಡುವಾಗ ಇಲಾಖೆಯಲ್ಲಿರುವ ಅಧಿಕಾರಿಗಳೇ ಬಹುಸಂಖ್ಯೆಯ ಸಹಕಾರಿ ಸಂಸ್ಥೆಗಳ ಲೆಕ್ಕ ತಪಾಸಣೆ ಮಾಡಲು, ಲೆಕ್ಕ ತಪಾಸಣಾ ಇಲಾಖೆಯ ಅಧಿಕಾರಿಗಳನ್ನೇ ನೇಮಿಸುತ್ತಿದ್ದಾರೆ? ಇದು ಪರೋಕ್ಷವಾಗಿ ಸಂವಿದಾನದ ಆಶಯಕ್ಕೆ ವಿರುದ್ಧ.

4. ಆಡಳಿತ ಮಂಡಳಿಯ ರಚನೆಯಲ್ಲಿ ಗರಿಷ್ಠ ಮಂಡಳಿಯ ಸಂಖ್ಯೆಯನ್ನ 21 ಎಂದು ಸಂವಿದಾನ ನಿಗದಿಪಡಿಸಿದ್ದರೂ ಹಾಗೂ ಈ ಸಂಖ್ಯೆಯಲ್ಲಿ ಚುನಾಯಿತ ಸದಸ್ಯರ ಸಂಖ್ಯೆ ಎಂದು ತಿಳಿದಿದ್ದರೂ, 1959ರ ಕಾಯಿದೆಯಲ್ಲಿ ಹಲವಾರು ಸಹಕಾರಿ ಸಂಘಗಳು ಮತ್ತು ಮಹಾಮಂಡಳಗಳಲ್ಲಿ ಸರ್ಕಾರದ ಅಧಿಕಾರಿಗಳು ಒಂದಕ್ಕಿಂತ ಹೆಚ್ಚು ಸಂಖ್ಯೆಯಲ್ಲಿ ಸದಸ್ಯರಾಗಿರುವಂತೆ ಉಪವಿಧಿಗಳಲ್ಲಿ ಅವಕಾಶ ಕಲ್ಪಿಸಿದರೂ, ಅದನ್ನ ಸಹಕಾರ ಇಲಾಖೆ ಒಪ್ಪಿಗೆ ನೀಡುತ್ತಿದೆ. ಏಕೆಂದರೆ 1959ರ ಕಾಯಿದೆ ಕಲಂ 28ಎ (4ಬಿ) ಅನ್ವಯ ಸಹಾಯಧನ ಪಡೆದ ಸಹಕಾರ ಸಂಘಗಳಿಗೆ ಒಬ್ಬರಿಗಿಂತ ಹೆಚ್ಚು ನಾಮ ನಿರ್ದೇಶನ ಮಾಡುವ ಅವಕಾಶ ಮಾತ್ರ ಇದ್ದರೂ, ಹಿಂಬಾಗಿಲಿನಿಂದ ಒಂದಕ್ಕಿಂತ ಹೆಚ್ಚು ಅಧಿಕಾರಿಗಳನ್ನು ಹಲವಾರು ಸಹಕಾರಿ ಸಂಸ್ಥೆಗಳಲ್ಲಿ ಸೇರ್ಪಡೆಯಾಗಿದ್ದಾರೆ. ಉದಾಹರಣೆಗೆ ಜಿಲ್ಲಾ ಸಹಕಾರಿ ಹಾಲು ಒಕ್ಕೂಟಗಳು ಹಾಗೂ ರಾಜ್ಯ ಮಟ್ಟದ ಎಲ್ಲಾ ಸಹಕಾರ ಮಹಾಮಂಡಳಗಳಲ್ಲಿ 3–4 ಅಧಿಕಾರಿಗಳು ಆಡಳಿತ ಮಂಡಳಿ ಸದಸ್ಯರಿದ್ದಾರೆ. ಇದು ಸಂವಿಧಾನದ ಆಶಯಕ್ಕೆ ಪೂರಕವಲ್ಲ. ಇದರ ಜೊತೆಗೆ ವೃತ್ತಿಪರ ನಿರ್ದೇಶಕರನ್ನು ಸಹಮತದಿಂದ ಸೇರಿಸಿಕೊಳ್ಳುವಾಗ ಸಂವಿಧಾನದ ಆಶಯದಂತೆ ವೃತ್ತಿಪರರಲ್ಲದ ವ್ಯಕ್ತಿಗಳನ್ನ ವೃತ್ತಿಪರ ಸದಸ್ಯರೆಂದು ಸೇರಿಸಿಕೊಂಡು ಸಂವಿಧಾನದ ಆಶಯಕ್ಕೆ ಅಪಚಾರ ವೆಸಗಿದ್ದಾರೆ. ಇಂತಹ ಅವಕಾವ ಸೌಹಾರ್ದ ಸಹಕಾರಿ ಕಾಯಿದೆಯಲ್ಲಿ ಸರ್ಕಾರದ ಅಧಿಕಾರಿಗಳ ನೇಮಕಕ್ಕೆ ಅವಕಾಶವೇ ಇಲ್ಲದೇ ಇರುವುದರಿಂದ ಈ ತೊಡಕು ಸೌಹಾರ್ದ ಸಹಕಾರಿಗಳನ್ನ ಬಾದಿಸುತ್ತಿಲ್ಲ.

5. ಮಂಡಳಿಯ ಸದಸ್ಯರ ಅನರ್ಹತೆಗೆ ಸಂಬಂಧಪಟ್ಟಂತೆ ಸಂವಿಧಾನ ತಿದ್ದುಪಡಿಯ ನಂತರ ಎರಡೂ ಸಹಕಾರಿ ಕಾಯಿದೆಗಳಲ್ಲಿ ಸೇರ್ಪಡೆಯಾದ ಒಂದು ಪ್ರಮುಖ ಬೆಳವಣಿಗೆ ಎಂದರೆ, ಸಾಮಾನ್ಯ ಸಭೆ ಸೆಪ್ಟೆಂಬರ್ 25ರೊಳಗೆ ಮಾಡದೇ ಇದ್ದರೆ, ಸೆಪ್ಟೆಂಬರ್ 1 ನೇ ತಾರೀಖಿನಲ್ಲಿ ಲೆಕ್ಕ ತಪಾಸಣಾ ವರದಿ ಪಡೆಯದೇ ಇದ್ದರೆ; ನಿಬಂಧಕರಿಗೆ ನಿಗದಿ ಪಡಿಸಿದ ಮಾಹಿತಿಯನ್ನ ಸೆಪ್ಟೆಂಬರ್ ಅಂತ್ಯದಲ್ಲಿ ಸಲ್ಲಿಸದಿದ್ದರೆ, ಚುನಾವಣೆ ಇದ್ದರೂ, ಅದನ್ನು ನಡೆಸಲು ಚುನಾವಣಾ ಪ್ರಾಧಿಕಾರಕ್ಕೆ ಸಹಕಾರ ನೀಡದಿದ್ದರೆ, ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ 5 ವರ್ಷಗಳ ವರೆಗೆ ಅನರ್ಹತೆಗೆ ಒಳಗಾಗುವ ಅವಕಾಶ; ಒಂದು ವಿಷಿಷ್ಟವಾದ ಬೆಳವಣಿಗೆ. ಆದ್ದರಿಂದ ಮಂಡಳಿಯ ಸದಸ್ಯರು ಜಾಗೃತರಾಗಿರುವಂತೆ ಮಾಡುತ್ತದೆ.

6. ಮಂಡಳಿ ಚುನಾವಣೆ ಬಗ್ಗೆ ಸಂವಿಧಾನದಲ್ಲಿ, ಚುನಾವಣೆ ನಡೆಸಲು ಒಂದು ಚುನಾವಣಾಪ್ರಾಧಿಕಾರ ಎಂದಿದ್ದರೂ, ರಾಜ್ಯ ಸರ್ಕಾರ ಪ್ರಾರಂಭದಲ್ಲಿ "ಸಹಕಾರ ಚುನಾವಣಾ ಆಯೋಗ" ಎಂದು ರಚನೆ ಮಾಡಿದ್ದು, ಅದನ್ನು ಸ್ವಾತಂತ್ರ್ಯ ಸಂಸ್ಥೆಯಾಗಿದ್ದುದನ್ನು ಮೊಟಕುಗೊಳಿಸಿ "ಸಹಕಾರಿ ಚುನಾವಣಾ ಪ್ರಾಧಿಕಾರ" ಎಂದು ಮಾರ್ಪಡಿಸಿತು. ಇದರಿಂದ ರಾಜ್ಯ ಸರ್ಕಾರ ಚುನವಣೆಗೆ ಸಂಬಂದಿಸಿದ ವಿಷಯದಲ್ಲಿ ಮಧ್ಯಪ್ರವೇಶಮಾಡಲು ಅವಕಾಶ ಪಡೆದುಕೊಂಡಿದೆ. ಚುನಾವಣಾಪ್ರಾಧಿಕಾರ ತನ್ನ ಕೆಲಸ ನಿರ್ವಹಣೆಯಲ್ಲಿ ನ್ಯೂನತೆಗಳನ್ನ ಗಮನಿಸಬಹುದು. ಕಾಯಿದೆಯಲ್ಲಿ ಮಂಡಳಿ ಅವಧಿ 5 ವರ್ಷ ಎಂದಿದ್ದರೂ ಹಾಗೂ ಅಂತಹ ವರದಿ ಪಡೆದಿದ್ದರೂ, ಅವಧಿ ಮುಗಿಯುವ ಪೂರ್ವದಲ್ಲಿ ಮಂಡಳಿ ರಚನೆ ಮಾಡಲು ಕ್ರಮ ವಿಡುತ್ತಿಲ್ಲ. ಸಂಯುಕ್ತ ಸಹಕಾರಿ ಮಂಡಳಿ ಅವದಿ ಮುಗಿದ ದಿನಾಂಕದಂದು ನ್ಯಾಯಾಲಯದಲ್ಲಿ ಸಮರ್ಥ ನಿರ್ವಹಣೆ ಮಾಡದೆ ಅವಧಿಯನ್ನು ಶ್ರೇಷ್ಠನ್ಯಾಯಾಲಯದ ತೀರ್ಪುಗಳ ವಿರುದ್ದ ಆರುವರೆ ವರ್ಷ ಅಧಿಕಾರದಲ್ಲಿರಲು ಅವಕಾಶ ಕಲ್ಪಿಸಿ ಸಂವಿಧಾನದ ಆಶಯಕ್ಕೆ ಚ್ಯುತಿಯಾಗಿದೆ.

ಖಾಲಿ ಇರುವ ಮಂಡಳಿ ಸದಸ್ಯರ ಸ್ಥಾನಗಳಿಗೆ ಆರು ತಿಂಗಳಲ್ಲಿ ಭರ್ತಿಮಾಡಬೇಕೆಂದಿದ್ದರೂ 2–3ವರ್ಷ ಭರ್ತಿಮಾಡುವ ನಿಷ್ಠೂರತೆಯನ್ನು ಚುನಾವಣಾ ಪ್ರಾಧಿಕಾರ ಪ್ರಯತ್ನಿಸುತ್ತಿಲ್ಲ. ಕೆಲವು ರಾಜ್ಯ ಮಟ್ಟದ ಸಂಸ್ಥೆಗಳು ಸಂವಿಧಾದನ ಆಶಯಕ್ಕೆ ವಿರುದ್ದವಾಗಿ ಆಡಳಿತ ಮಂಡಳಿಗೆ ವಿಶೇಶ ಆಹ್ವಾನಿತರೆಂದು 3–4 ವ್ಯಕ್ತಿಗಳನ್ನು ಸದಸ್ಯರಂತೆ ಕಾರ್ಯನಿರ್ವಹಿಸಲು ಮತ್ತು ಶಿಕ್ಷಣ ಸಲಹಾ ಸಮಿತಿಯಲ್ಲಿ ನಿರ್ದೇಶಕರಿಗೆ ಸಮಾನವಾದಂತಹ ಅಧಿಕಾರಗಳನ್ನು ಕೊಟ್ಟು 5–6 ವ್ಯಕ್ತಿಗಳಿಗೆ ಸಲಹಾ ಸಮಿತಿ ಶಿಕ್ಷಣ ತಜ್ಞರಲ್ಲದ ಸದಸ್ಯರಿಗೆ ಅವಕಾಶ ಕಲ್ಪಿಸುವುದು ಕಾಯಿದೆಯಲ್ಲಿ ಮಂಡಳಿ ಸದಸ್ಯರ ಸಂಖ್ಯೆ ಮಿತಿಯನ್ನು ಅಣಕಿಸುತ್ತದೆ ಮತ್ತು ಇದು ಸಂವಿಧಾನದಲ್ಲಿನ ಆಶಯಕ್ಕೆ ಪೂರಕವಲ್ಲ.

7. ಪ್ರಥಮ ಭಾರಿಗೆ ಸಹಕಾರ ಕಾಯಿದೆ ರಚನೆಯಲ್ಲಿ ಚುನಾಯಿತ ಮಂಡಳಿಯನ್ನು ರದ್ದುಪಡಿಸಿ ಆಡಳಿತಾಧಿಕಾರಿ ನೇಮಕ ಮಾಡುವುದಕ್ಕೆ ಅವಕಾಶ ಇರುವುದನ್ನು, ಸಂವಿಧಾನ ತಿದ್ದುಪಡಿಯಲ್ಲಿ ಅಮಾನತ್ತಿನಲ್ಲಿಡಲು ಅವಕಾಶ ಕಲ್ಪಿಸಿದ ನಂತರ ಎರಡೂ ಕಾಯಿದೆಗೆ ಚುನಾಯಿತ ಮಂಡಳಿಯನ್ನು ಅಮಾನತ್ತಿನಲ್ಲಿಡಲು ಪ್ರಥಮ ಭಾರಿಗೆ ಎರಡೂ ಕಾಯಿದೆಯಲ್ಲೂ ಅವಕಾಶ ಕಲ್ಪಿಸಿದೆ. ಇದರಿಂದ ತಪ್ಪು ಮಾಡಿದ ಮಂಡಳಿಗೆ

23ನೇ ಪುಟಕ್ಕೆ.....

# ದೇಶದಲ್ಲಿ ಸಹಕಾರ ಚಳವಳಿಯನ್ನು ಬಲಪಡಿಸುವುದು ಮತ್ತು ಅದರ ವ್ಯಾಪ್ತಿಯನ್ನು ತಳಮಟ್ಟಕ್ಕೆ ವಿಸ್ತಾರಗೊಳಿಸುವುದು - ಭಾರತ ಸರ್ಕಾರದ ಯೋಜನೆಗಳ ವಿಶ್ಲೇಷಣೆ



– ಡಾ. ಎಂ. ಜಯಪ್ರಕಾಶ್, ಉಪನ್ಯಾಸಕರು, ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ, ಪದ್ಮನಾಭನಗರ, ಬೆಂಗಳೂರು

- ಪ್ರತಿ ಪಂಚಾಯತಿ ಕಾರ್ಯವ್ಯಾಪ್ತಿಯಲ್ಲಿರದ ಪರಿಣಾಮಕಾರಿ ಪ್ರಾಥಮಿಕ ಕೃಷಿ ಪತ್ತಿನ ಸಂಘಗಳನ್ನು (PACS) ಸ್ಥಾಪಿಸುವುದು, ಪ್ರತಿ ಪಂಚಾಯತಿ ವ್ಯಾಪ್ತಿಯಲ್ಲಿ ಪರಿಣಾಮಕಾರಿ ಹಾಲು ಉತ್ಪಾದಕರ ಸಹಕಾರ ಸಂಘಗಳು ಮತ್ತು ಪ್ರತಿ ಕರಾವಳಿಯ ಪಂಚಾಯತ್/ಗ್ರಾಮಗಳಲ್ಲಿ ಪರಿಣಾಮಕಾರಿ ಮೀನುಗಾರಿಕಾ ಸಹಕಾರಿ ಸಂಘಗಳು ಮತ್ತು ಬೃಹತ್ ಜಲಮೂಲಗಳನ್ನು ಹೊಂದಿರುವ ಪಂಚಾಯತ್/ಗ್ರಾಮಗಳಲ್ಲಿ ಮತ್ತು ಅಸ್ತಿತ್ವದಲ್ಲಿರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಬಲಪಡಿಸುವುದು.
- ಮುಂದಿನ ಐದು ವರ್ಷಗಳಲ್ಲಿ ಎರಡು ಲಕ್ಷ ವಿವಿಧೋದ್ದೇಶ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು/ ಹಾಲು ಉತ್ಪಾದಕರ ಸಹಕಾರ ಸಂಘಗಳು/ ಮೀನುಗಾರಿಕಾ ಸಹಕಾರ ಸಂಘಗಳನ್ನು ಸ್ಥಾಪಿಸುವ ಆರಂಭಿಕ ಗುರಿಯನ್ನು ಹೊಂದಿದೆ.
- ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕು (NABARD), ರಾಷ್ಟ್ರೀಯ ಹೈನುಗಾರಿಕಾ ಅಭಿವೃದ್ಧಿ ಮಂಡಳಿ (NDDB) ಮತ್ತು ರಾಷ್ಟ್ರೀಯ ಮೀನುಗಾರಿಕಾ ಅಭಿವೃದ್ಧಿ ಮಂಡಳಿ (NFDB) ಬೆಂಬಲದೊಂದಿಗೆ 'ಇಡೀ–ಸರ್ಕಾರದ' ವಿಧಾನವನ್ನು ಸದುಪಯೋಗಪಡಿಸಿಕೊಳ್ಳುವ ಮೂಲಕ ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವಾಲಯದ ವಿವಿಧ ಯೋಜನೆಗಳ ಒಗ್ಗೂಡುವಿಕೆಯ ಮೂಲಕ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುವುದು.
- ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು/ಹಾಲು ಉತ್ಪಾದಕರ ಸಹಕಾರ ಸಂಘಗಳು/ಮೀನುಗಾರಿಕಾ ಸಹಕಾರ ಸಂಘಗಳು ತಮ್ಮ ವ್ಯಾಪಾರ ಚಟುವಟಿಕೆಗಳನ್ನು ವೈವಿಧ್ಯಗೊಳಿಸಲು ಅಗತ್ಯವಾದ ಮೂಲಸೌಕರ್ಯಗಳನ್ನು ಸ್ಥಾಪಿಸಲು ಮತ್ತು ಆಧುನೀಕರಿಸಲು ಅನುವು ಮಾಡಿಕೊಡುತ್ತದೆ.
- ರೈತ ಸದಸ್ಯರಿಗೆ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಉತ್ತಮ ಸಂಪರ್ಕಗಳನ್ನು ಒದಗಿಸುವುದು, ಅವರ ಆದಾಯವನ್ನು ಹೆಚ್ಚಿಸಲು, ಗ್ರಾಮ ಮಟ್ಟದಲ್ಲಿ ಸಾಲ ಸೌಲಭ್ಯಗಳು ಮತ್ತು ಇತರ ಸೇವೆಗಳನ್ನು ಪಡೆಯಲು ಅಗತ್ಯವಾದ ಸೌಲಭ್ಯಗಳನ್ನು ಒದಗಿಸಿಕೊಡುವುದು.

ಸಹಕಾರ ಚಳುವಳಿಯು ಗ್ರಾಮೀಣ ಆರ್ಥಿಕತೆಯ ಬೆನ್ನೆಲುಬಾಗಿದೆ. ಪ್ರಸ್ತುತ, ದೇಶದಲ್ಲಿ ಸುಮಾರು 29 ಕೋಟಿ ಜನರು ನೇರವಾಗಿ ಸಹಕಾರಿ ಕ್ಷೇತ್ರದೊಂದಿಗೆ ಸಂಪರ್ಕ ಹೊಂದಿದ್ದಾರೆ. ಸಹಕಾರಿ ಸಂಘಗಳು, ನಿರ್ದಿಷ್ಟವಾಗಿ, ಕೃಷಿ, ಹೈನುಗಾರಿಕೆ ಮತ್ತು ಮೀನುಗಾರಿಕಾ ಕ್ಷೇತ್ರಗಳಲ್ಲಿ ಗ್ರಾಮೀಣ ಜನರಿಗೆ ಜೀವನೋಪಾಯದ ಅವಕಾಶಗಳನ್ನು ಮಾತ್ರವಲ್ಲದೆ ಸಮುದಾಯ ಆಧಾರಿತ ವಿಧಾನದೊಂದಿಗೆ ಆರ್ಥಿಕ ಸುರಕ್ಷತಾ ನಿವ್ವಳವನ್ನು ಒದಗಿಸುತ್ತವೆ.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಸುಮಾರು 13 ಕೋಟಿ ಸದಸ್ಯರನ್ನು ಹೊಂದಿದ್ದು, ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲ ಮತ್ತು ಇತರ ಅಗತ್ಯ ಸೇವೆಗಳನ್ನು ಒದಗಿಸುವುದು. ಪ್ರಮುಖವಾಗಿ ದೇಶದಲ್ಲಿ ಅಲ್ಪಾವಧಿ ಸಹಕಾರಿ ಸಾಲ (STCC) ರಚನೆಯು ಅತ್ಯಂತ ಕೆಳಸ್ತರದ್ದಾಗಿದೆ. ಸದಸ್ಯ ರೈತರಿಗೆ ಬೀಜ, ಗೊಬ್ಬರ, ಕೀಟನಾಶಕ ವಿತರಣೆ ಇತ್ಯಾದಿಗಳನ್ನ ಪೂರೈಸುತ್ತಿವೆ. ದೇಶದಲ್ಲಿನ 352 ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು (DCCBs) ಮತ್ತು 34 ರಾಜ್ಯ ಸಹಕಾರಿ ಬ್ಯಾಂಕುಗಳಿಗೆ (StCBs) ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿನ (NABARD) ಮೂಲಕ ಮರುಹಣಕಾಸು ಮಾಡುತ್ತಿದೆ.

ಪ್ರಾಥಮಿಕ ಮೀನುಗಾರಿಕಾ ಸಹಕಾರ ಸಂಘಗಳು, ಸುಮಾರು 38 ಲಕ್ಷ ಸದಸ್ಯರನ್ನು ಹೊಂದಿದ್ದು, ಸಮಾಜದ ಅತ್ಯಂತ ಹಿಂದುಳಿದ ವರ್ಗದವರಿಗೆ ಸಹಕಾರಿಯಾಗಿದೆ, ಮಾರುಕಟ್ಟೆ ಸೌಲಭ್ಯಗಳು, ಮೀನುಗಾರಿಕಾ ಉಪಕರಣಗಳು, ಮೀನು ಬೀಜ ಮತ್ತು ಆಹಾರವನ್ನು ಸಂಗ್ರಹಿಸಲು ಸಹಾಯ ಮಾಡುತ್ತವೆ ಮತ್ತು ಸದಸ್ಯರಿಗೆ ಸೀಮಿತ ಸಾಲ ಸೌಲಭ್ಯಗಳನ್ನು ಒದಗಿಸುತ್ತಿವೆ.

ಆದಾಗ್ಯೂ, ಇನ್ನೂ 1.6 ಲಕ್ಷ ಪಂಚಾಯಿತಿಗಳು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಲ್ಲದೆ ಮತ್ತು ಸುಮಾರು 2 ಲಕ್ಷ ಪಂಚಾಯಿತಿಗಳು ಹಾಲು ಉತ್ಪಾದಕರ ಸಹಕಾರ ಸಂಘಗಳಿಲ್ಲದೆ ಇವೆ. ದೇಶದ ಗ್ರಾಮೀಣ ಆರ್ಥಿಕತೆಯನ್ನು ಸುಸ್ಥಿರಗೊಳಿಸುವಲ್ಲಿ ಈ ಪ್ರಾಥಮಿಕ ಹಂತದ ಸಹಕಾರಿ ಸಂಘಗಳು ಪ್ರಮುಖ ಪಾತ್ರ ವಹಿಸುತ್ತಿರುವ ಹಿನ್ನೆಲೆಯಲ್ಲಿ, ದೇಶದಲ್ಲಿ ಸಹಕಾರ ಚಳವಳಿಯನ್ನು ಬಲಪಡಿಸಲು, ತಳಮಟ್ಟದವರೆಗೆ ಅದರ ವ್ಯಾಪ್ತಿಯನ್ನು ಇನ್ನಷ್ಟು ವಿಸ್ತಾರಗೊಳಿಸಲು ಮತ್ತು ಇಂತಹ ಸಹಕಾರ ಸಂಘಗಳ ಸದಸ್ಯರ ಸಮಸ್ಯೆಗಳನ್ನು ಪರಿಹರಿಸಲು ಸಂಘಟಿತ ಪ್ರಯತ್ನಗಳನ್ನು ಮಾಡುವ ಅಗತ್ಯವಿದೆ. ಸಂದರ್ಭಾನುಸಾರ ಎಲ್ಲಾ ಪಂಚಾಯತ್/

ಗ್ರಾಮಗಳನ್ನು ಒಳಗೊಂಡಂತೆ ಇಂತಹ ಸಂಘಗಳನ್ನು ಸ್ಥಾಪಿಸುವ ಮೂಲಕ ದೇಶದ ಅಭಿವೃದ್ಧಿಯನ್ನು ಕಾಣಲು ಸಾಧ್ಯವಾಗುತ್ತದೆ.

ಇದನ್ನು ಗಮನದಲ್ಲಿಟ್ಟುಕೊಂಡು, ಗೌರವಾನ್ವಿತ ಪ್ರಧಾನಮಂತ್ರಿಗಳಾದ ಶ್ರೀಯುತ ನರೇಂದ್ರ ಮೋದಿ ಅವರ ದೂರದೃಷ್ಟಿಯ ನಾಯಕತ್ವದಲ್ಲಿ ಮತ್ತು ಮಾನ್ಯ ಗೃಹ ಮತ್ತು ಸಹಕಾರ ಸಚಿವರಾದ ಶ್ರೀಯುತ ಅಮಿತ್ ಶಾ ಅವರ ಸಮರ್ಥ ಮಾರ್ಗದರ್ಶನದ ಅಡಿಯಲ್ಲಿ, ಪ್ರತೀ ಗ್ರಾಮಪಂಚಾಯತಿಗಳಲ್ಲಿ ಪರಿಣಾಮಕಾರಿಯಾಗಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಸ್ಥಾಪಿಸುವ ಯೋಜನೆಯನ್ನು ಕ್ಯಾಬಿನೆಟ್ ಅನುಮೋದಿಸಿದೆ. ಪಂಚಾಯತ್ ಮಟ್ಟದಲ್ಲಿ, ಕೆಳ ಸ್ತರದ ಸಹಕಾರ ಸಂಘಗಳು ಇಲ್ಲದಿರುವ ಪ್ರತಿ ಪಂಚಾಯತ್/ಗ್ರಾಮಗಳಲ್ಲಿ ಪರಿಣಾಮಕಾರಿಯಾದ ಹಾಲು ಉತ್ಪಾದಕರ ಸಹಕಾರಿ ಸಂಘಗಳು ಮತ್ತು ಪ್ರತಿ ಕರಾವಳಿ ಪಂಚಾಯತ್/ಗ್ರಾಮಗಳಲ್ಲಿ ಪರಿಣಾಮಕಾರಿಯಾದ ಮೀನುಗಾರಿಕೆ ಸಹಕಾರ ಸಂಘಗಳು ಹಾಗೂ ಬೃಹತ್ ಜಲಮೂಲಗಳನ್ನು ಹೊಂದಿರುವ ಪಂಚಾಯತ್/ಗ್ರಾಮಗಳು ಮತ್ತು ಅಸ್ತಿತ್ವದಲ್ಲಿರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು/ ಹಾಲು ಉತ್ಪಾದಕರ ಸಹಕಾರ ಸಂಘಗಳು/ಮೀನುಗಾರಿಕೆ ಸಹಕಾರಿ ಸಂಘಗಳನ್ನು ಸಹಕಾರ ಸಚಿವಾಲಯದ ವಿವಿಧ ಯೋಜನೆಗಳ ಮೂಲಕ ಬಲಪಡಿಸಲಾಗುವುದು. ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ 'ಇಡೀ–ಸರ್ಕಾರದ' ವಿಧಾನವನ್ನು ಬಳಸಿಕೊಳ್ಳುವ ಮೂಲಕ ಅಭಿವೃದ್ಧಿಪಡಿಸಲಾಗುವುದು. ಮುಂದಿನ ಐದು ವರ್ಷಗಳಲ್ಲಿ ಎರಡು ಲಕ್ಷ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು / ಡೈರಿ / ಮೀನುಗಾರಿಕಾ ಸಹಕಾರ ಸಂಘಗಳನ್ನು ಸ್ಥಾಪಿಸಲಾಗುವುದು. ಈ ಯೋಜನೆಯ ಅನುಷ್ಠಾನಕ್ಕಾಗಿ ಕ್ರಿಯಾ ಯೋಜನೆಯನ್ನು ನಬಾರ್ಡ್, ರಾಷ್ಟ್ರೀಯ ಹಾಲು ಅಭಿವೃದ್ಧಿ ಮಂಡಳಿ (NDDB) ಮತ್ತು ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿ (NFDB) ಸಿದ್ಧಪಡಿಸುತ್ತಿದೆ.

ಪ್ರಸ್ತುತ ಯೋಜನೆಯಡಿಯಲ್ಲಿ ಒಗ್ಗೂಡಿಸುವಿಕೆಗಾಗಿ ಈ ಕೆಳಗಿನ ಯೋಜನೆಗಳನ್ನು ಗುರುತಿಸಲಾಗಿದೆ:

a) ಪಶುಸಂಗೋಪನೆ ಮತ್ತು ಹೈನುಗಾರಿಕೆ ಇಲಾಖೆ:

(i) ಹೈನುಗಾರಿಕೆ ಅಭಿವೃದ್ಧಿಗಾಗಿ ರಾಷ್ಟ್ರೀಯ ಕಾರ್ಯಕ್ರಮ (NPDD), ಮತ್ತು

(ii) ಡೈರಿ ಸಂಸ್ಕರಣೆ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಧಿ (DIDF)

b) ಮೀನುಗಾರಿಕಾ ಇಲಾಖೆ:

(i) ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆ (PMMSY), ಮತ್ತು

(ii) ಮೀನುಗಾರಿಕೆ ಮತ್ತು ಜಲಚರಸಾಕಣೆ ಮೂಲಸೌಕರ್ಯ ಅಭಿವೃದ್ಧಿ (FIDF)

ಕೃಷಿ ಮತ್ತು ರೈತರ ಕಲ್ಯಾಣ ಸಚಿವರೊಂದಿಗೆ ಗೃಹ ಮತ್ತು ಸಹಕಾರ ಸಚಿವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಅಂತರ–ಸಚಿವಾಲಯ ಸಮಿತಿ (IMC)ಯು ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವರು; ಸಂಬಂಧಪಟ್ಟ ಕಾರ್ಯದರ್ಶಿಗಳು; ಅಧ್ಯಕ್ಷರಾದ NABARD, NDDB ಮತ್ತು ಮುಖ್ಯ ಕಾರ್ಯನಿರ್ವಾಹಕ NFDB, ಸದಸ್ಯರನ್ನೊಳಗೊಂಡಂತೆ ರಚಿಸಲಾಗಿದೆ ಮತ್ತು ಯೋಜನೆಗಳ ಸುಗಮ ಅನುಷ್ಠಾನಕ್ಕಾಗಿ ಒಗ್ಗೂಡಿಸಲು ಗುರುತಿಸಲಾದ ಯೋಜನೆಗಳ ಮಾರ್ಗಸೂಚಿಗಳಲ್ಲಿ ಸೂಕ್ತ ಮಾರ್ಪಾಡುಗಳನ್ನು ಒಳಗೊಂಡಂತೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲು ಅಧಿಕಾರವನ್ನು ನೀಡಲಾಗಿದೆ. ಕ್ರಿಯಾ ಯೋಜನೆಯ ಕೇಂದ್ರೀಕೃತ ಮತ್ತು ಪರಿಣಾಮಕಾರಿ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಲು ರಾಷ್ಟ್ರೀಯ, ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಸಮಿತಿಗಳನ್ನು ಸಹ ರಚಿಸಲಾಗಿದೆ.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕಾರ್ಯಸಾಧ್ಯತೆಯನ್ನು ಹೆಚ್ಚಿಸಲು ಮತ್ತು ಪಂಚಾಯತ್ ಮಟ್ಟದಲ್ಲಿ ಅವುಗಳನ್ನು ಪರಿಣಾಮಕಾರಿಯಾಗಿ ಆರ್ಥಿಕ ಘಟಕಗಳನ್ನಾಗಿ ಮಾರ್ಪಡಿಸಲು ಅವರ ವ್ಯಾಪಾರ ಚಟುವಟಿಕೆಗಳನ್ನು ವೈವಿಧ್ಯಗೊಳಿಸಲು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮಾದರಿ ಉಪನಿಯಮಗಳನ್ನು ಎಲ್ಲಾ ಪಾಲುದಾರರೊಂದಿಗೆ ಸಮಾಲೋಚಿಸಿದ ನಂತರ ಸಚಿವಾಲಯವು ಸಿದ್ಧಪಡಿಸಿದೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಈ ಮಾದರಿ ಉಪನಿಯಮಗಳು ಹೈನುಗಾರಿಕೆ, ಮೀನುಗಾರಿಕೆ, ಉಗ್ರಾಣಗಳ ಸ್ಥಾಪನೆ, ಆಹಾರ ಧಾನ್ಯಗಳ ಸಂಗ್ರಹಣೆ, ರಸಗೊಬ್ಬರಗಳು, ಬೀಜಗಳು, ಐಕಲು/ಅಓಲು/ಪೆಟ್ರೋಲ್/ಡೀಸೆಲ್ ವಿತರಕತ್ವ, ಅಲ್ಪಾವಧಿಯ 25ಕ್ಕೂ ಹೆಚ್ಚು ವ್ಯಾಪಾರ ಚಟುವಟಿಕೆಗಳನ್ನು ಕೈಗೊಳ್ಳಲು ಅನುವು ಮಾಡಿಕೊಡುತ್ತದೆ. ಮತ್ತು ದೀರ್ಘಾವಧಿಯ ಸಾಲ, ಕಸ್ಟಮ್ ನೇಮಕಾತಿ ಕೇಂದ್ರಗಳು, ಸಾಮಾನ್ಯ ಸೇವಾ ಕೇಂದ್ರಗಳು, ನ್ಯಾಯಬೆಲೆ ಅಂಗಡಿಗಳು, ಸಮುದಾಯ ನೀರಾವರಿ, ವ್ಯಾಪಾರ ಒಪ್ಪಂದ ಚಟುವಟಿಕೆಗಳು, ಸಾಮಾನ್ಯ ಸೇವಾ ಕೇಂದ್ರ, ಇತ್ಯಾದಿ. ಮಾದರಿ ಉಪನಿಯಮಗಳನ್ನು 5ನೇ ಜನವರಿ, 2023 ರಂದು ಎಲ್ಲಾ ರಾಜ್ಯಗಳು/ಕೇಂದ್ರಾಳಿತ ಪ್ರದೇಶಗಳಿಗೆ ವಿತರಿಸಲಾಗಿದೆ ಆಯಾ ರಾಜ್ಯ ಸಹಕಾರಿ ಕಾಯಿದೆಗಳ ಪ್ರಕಾರ ಸೂಕ್ತ ಬದಲಾವಣೆಗಳನ್ನು ಮಾಡಿದ ನಂತರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಅನುಸರಿಸಬಹುದಾಗಿದೆ.

ಸಹಕಾರ ಸಚಿವಾಲಯವು ರಾಷ್ಟ್ರೀಯ ಸಹಕಾರಿ ಡೇಟಾಬೇಸ್ ಅನ್ನು ಸಹ ಸಿದ್ಧಪಡಿಸುತ್ತಿದೆ, ಅಲ್ಲಿ ರಾಜ್ಯಗಳು / ಕೇಂದ್ರಾಡಳಿತ ಪ್ರದೇಶಗಳ ಸಹಕಾರ ಸಂಘಗಳ ನಿಬಂಧಕರ ಬೆಂಬಲದೊಂದಿಗೆ ಪಂಚಾಯತ್ ಮತ್ತು ಗ್ರಾಮ ಮಟ್ಟದಲ್ಲಿ ಸಹಕಾರ ಸಂಸ್ಥೆಗಳನ್ನು ದೇಶಾದ್ಯಂತ ಮ್ಯಾಪಿಂಗ್ ಅನ್ನು ಕೈಗೊಳ್ಳಲಾಗುತ್ತಿದೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಸಮಗ್ರ ಡೇಟಾಬೇಸ್ ಅನ್ನು ಜನವರಿ, 2023 ರಲ್ಲಿ ಅಭಿವೃದ್ಧಿಪಡಿಸಲಾಗಿದೆ, ಇದು ಒಂದು ಲಕ್ಷಕ್ಕೂ ಹೆಚ್ಚು ಪ್ರಾಥಮಿಕ ಕೃಷಿ ಪತ್ತಿನ ಸಂಘಗಳು (PACS)/ ಬೃಹತ್ ಆದಿವಾಸಿ ಬಹುಪಯೋಗಿ

ಸಂಘಗಳು (LAMPS)/ ರೈತರ ಸೇವಾ ಸಂಘಗಳ (FSS) ವಿವರಗಳನ್ನು ಸಂಗ್ರಹಿಸಿರುತ್ತದೆ. ಪ್ರಾಥಮಿಕ ಡೈರಿ/ಮೀನುಗಾರಿಕಾ ಸಹಕಾರಿ ಸಂಘಗಳ ದತ್ತಸಂಚಯವನ್ನು ಸಹ ಸಿದ್ಧಪಡಿಸಲಾಗುತ್ತಿದೆ ಮತ್ತು ಇದುವರೆಗೆ 1,34,000 ಕ್ಕೂ ಹೆಚ್ಚು ಹಾಲು ಉತ್ಪಾದಕರ ಸಹಕಾರ ಸಂಘಗಳು ಮತ್ತು ಸುಮಾರು 25,000 ಮೀನುಗಾರಿಕಾ ಸಹಕಾರ ಸಂಘಗಳ ವಿವರಗಳನ್ನು ರಾಜ್ಯ ಸಹಕಾರ ಸಂಘಗಳ ನಿಬಂಧಕರ ಬೆಂಬಲದೊಂದಿಗೆ ಸಂಗ್ರಹಿಸಲಾಗಿದೆ. ಈ ಕಾರ್ಯವು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಡೈರಿ ಮತ್ತು ಮೀನುಗಾರಿಕೆ ಸಹಕಾರ ಸಂಘಗಳಿಂದ ಸೇವೆ ಇಲ್ಲದ ಪಂಚಾಯತ್ಗಳು ಮತ್ತು ಗ್ರಾಮಗಳ ಪಟ್ಟಿಯನ್ನು ಒದಗಿಸುತ್ತದೆ. ಹೊಸ ಸಹಕಾರ ಸಂಘಗಳ ರಚನೆಯ ಅನಿವಾರ್ಯತೆಯ ಮೇಲ್ವಿಚಾರಣೆ ಪ್ರಸ್ತುತ ಅತ್ಯಗತ್ಯವಾಗಿದೆ ಮತ್ತು ಇವುಗಳ ಸ್ಥಾಪನೆ ಮತ್ತು ಬಲವರ್ಧನೆಗೆ ರಾಷ್ಟ್ರೀಯ ಸಹಕಾರಿ ಡೇಟಾಬೇಸ್ ಮತ್ತು ಆನ್ಲೈನ್ ಕೇಂದ್ರ ಪೋರ್ಟಲ್ ಅನ್ನು ಬಳಸಿಕೊಳ್ಳಲಾಗುತ್ತದೆ.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು / ಹಾಲು ಉತ್ಪಾದಕರ ಸಹಕಾರ ಸಂಘಗಳು / ಮೀನುಗಾರಿಕಾ ಸಹಕಾರ ಸಂಘಗಳನ್ನು ಆಯಾ ಜಿಲ್ಲಾ ಮತ್ತು ರಾಜ್ಯ ಮಟ್ಟದ ಒಕ್ಕೂಟಗಳೊಂದಿಗೆ ಸಂಪರ್ಕ ಕಲ್ಪಿಸಿಕೊಡಲಾಗುವುದು. 'ಇಡೀ–ಸರ್ಕಾರದ' ವಿಧಾನವನ್ನು ಬಳಸಿಕೊಳ್ಳುವ ಮೂಲಕ, ಈ ಸಂಘಗಳು ಹಾಲು ಪರೀಕ್ಷಾ ಪ್ರಯೋಗಾಲಯಗಳು, ಬೃಹತ್ ಹಾಲು ಶೈತ್ಯಾಗಾರಗಳು, ಹಾಲು ಸಂಸ್ಕರಣಾ ಘಟಕಗಳು, ಬಯೋಫ್ಲೋಕ್ ಕೊಳಗಳ ನಿರ್ಮಾಣ, ಮೀನು ನೆರವುದಾಣಗಳು, ಮೊಟ್ಟೆಕೇಂದ್ರಗಳ ಅಭಿವೃದ್ಧಿ, ಆಳ ಸಮುದ್ರದ ಮೀನುಗಾರಿಕೆ ಹಡಗುಗಳನ್ನು ಸ್ವಾಧೀನಪಡಿಸಿಕೊಳ್ಳುವುದು ಇತ್ಯಾದಿ.

ಇದು ದೇಶದಾದ್ಯಂತ ಇರುವ ರೈತ ಸದಸ್ಯರಿಗೆ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು, ಅವರ ಆದಾಯವನ್ನು ಹೆಚ್ಚಿಸಲು, ಗ್ರಾಮ ಮಟ್ಟದಲ್ಲಿಯೇ ಸಾಲ ಸೌಲಭ್ಯಗಳು ಮತ್ತು ಇತರ ಸೇವೆಗಳನ್ನು ಪಡೆಯಲು ಅಗತ್ಯವಾದ ಸೇವಾ ಸಂಪರ್ಕಗಳನ್ನು ಒದಗಿಸುವುದು ಇದರ ಮುಖ್ಯ ಧ್ಯೇಯವಾಗಿದೆ. ಹಾಗೇಯೆ, ಪುನರುಜ್ಜೀವನಗೊಳ್ಳಲು ಸಾಧ್ಯವಾಗದ ಪ್ರಾಥಮಿಕ ಸಹಕಾರ ಸಂಘಗಳನ್ನು ಸಮಾಪನಗೊಳಿಸಲು ಗುರುತಿಸಲಾಗುವುದು ಮತ್ತು ಅವುಗಳ ಕಾರ್ಯಾಚರಣೆಯ ಪ್ರದೇಶದಲ್ಲಿ ಹೊಸ ಪ್ರಾಥಮಿಕ ಸಹಕಾರ ಸಂಘಗಳನ್ನು ಸ್ಥಾಪಿಸಲಾಗುವುದು.

ಇದಲ್ಲದೆ, ಹೊಸ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು/ ಡೈರಿ/ಮೀನುಗಾರಿಕಾ ಸಹಕಾರ ಸಂಘಗಳನ್ನು ಸ್ಥಾಪಿಸುವುದು ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತದೆ, ಇದು ಗ್ರಾಮೀಣ ಆರ್ಥಿಕತೆಯ ಮೇಲೆ ಗಣನೀಯ ಪರಿಣಾಮವನ್ನು ಬೀರುತ್ತದೆ. ಈ ಯೋಜನೆಯು ರೈತರು ತಮ್ಮ ಉತ್ಪನ್ನಗಳಿಗೆ ಉತ್ತಮ ಬೆಲೆಗಳನ್ನು ಕಂಡುಕೊಳ್ಳಲು, ಅವರ ಮಾರಾಟದ ಗಾತ್ರವನ್ನು ವಿಸ್ತರಿಸಲು ಮತ್ತು ಸರಬರಾಜು ಸರಪಳಿಗೆ ಕೊಂಡಿಯಂತೆ ಕೆಲಸ ನಿರ್ವಹಿಸಲು ಅನುವು ಮಾಡಿಕೊಡುತ್ತದೆ.

---

.....20ನೇ ಪುಟದಿಂದ

ಮತ್ತೆ ಅಧಿಕಾರವನ್ನು ನೀಡುವುದನ್ನು ಸಮರ್ಥಿಸುವ ಸಕಾರಣವಲ್ಲ. ವಿಧಾನಸಭೆಯನ್ನು ಅಮಾನತ್ತಿನಲ್ಲಿಟ್ಟಂತೆ ಕಾಯಿದೆಯಡಿ ನೋಂದಾವಣೆಯಾದ ಸಹಕಾರ ಸಂಸ್ಥೆಗಳಿಗೆ ನ್ಯೂನತೆ ಮಾಡಿದ ಮಂಡಳಿಗೆ ಮತ್ತೆ ಅಧಿಕಾರ ನೀಡುವುದು ವಿಮರ್ಷಾತ್ಮಕ. ಆದರೂ ಈ ಅವಕಾಶವನ್ನು ಬಹಳಷ್ಟು ಅಧಿಕಾರಿಗಳು ಉಪಯೋಗಿಸುತ್ತಿಲ್ಲ. ಸೌಹಾರ್ದ ಸಹಕಾರಿ ಕಾಯಿದೆಯಲ್ಲಿಯೂ ಇದರ ಚಲಾವಣೆ ವಿರಳ.

8. ಸಂವಿಧಾನ ತಿದ್ದುಪಡಿ ಮತ್ತು ಕರ್ನಾಟಕದ ಎರಡೂ ಕಾಯಿದೆಗೆ, ನಿಬಂಧಕರಿಗೆ ಸಲ್ಲಿಸಬೇಕಾದ ದಾಖಲೆಗಳನ್ನು ಸೆಪ್ಟೆಂಬರ್ ಅಂತ್ಯಕ್ಕೆ ಸಲ್ಲಿಸಬೇಕೆಂಬ ಕಾಲಾವಕಾಶ ಕಲ್ಪಿಸಿದರೂ, ಅದರ ಜಾರಿಯಾಗುತ್ತಿಲ್ಲ. ನಿಬಂಧಕರ ಮತ್ತು ಸಂಯುಕ್ತ ಸಹಕಾರಿ ಕಾಯಿದೆಯಲ್ಲಿ ಸಲ್ಲಿಸಿದ ಮತ್ತು ಸಲ್ಲಿಸದ ಸಹಕಾರಿ ಸಂಸ್ಥೆಗಳ ಅಂಕಿಸಂಕೆಗಳು ಲಭ್ಯವೇ ಇಲ್ಲ. ಯಾವ ಸಹಕಾರಿ ಸಂಸ್ಥೆ ತಃಖ್ತೆಗಳನ್ನು ಸಲ್ಲಿಸದಿದ್ದರೆ ಅವರಿಗೆ ಯಾವುದೇ ತರಹದ ಶಿಕ್ಷೆಯಾಗಿಲ್ಲ. ಏಕೆಂದರೆ 1959ರ ಕಾಯಿದೆ ಕಲಂ 109 ಮತ್ತು ಸೌಹಾರ್ದ ಸಹಕಾರಿ ಕಾಯಿದೆ ಕಲಂ.68(6)ರಲ್ಲಿ ರೂ. ಹತ್ತು ಸಾವಿರ ದಂಡ ಮತ್ತು 6 ತಿಂಗಳು ಜೈಲು ವಾಸ ಎಂದಿದ್ದರೂ ಈ ವರೆಗೂ ಯಾವುದೇ ಗಮನಾರ್ಹ ಪ್ರಗತಿ ಇಲ್ಲ.

ಸಂವಿಧಾನ ತಿದ್ದುಪಡಿ ನಂತರ ರಾಜ್ಯ ಕಾಯಿದೆಗಳಿಗೆ ತಿದ್ದುಪಡಿ ಮಡಿದರೂ ಅವುಗಳಲ್ಲಿ ನಿಗದಿ ಪಡಿಸಿದ ಅವಧಿಯೊಳಗೆ ಕ್ರಮ ಜರುಗಿಸುತ್ತಿಲ್ಲ. ಇದರಿಂದ ಸಹಕಾರಿ ಸಂಸ್ಥೆಗಳಲ್ಲಿ ಆಡಳಿತ ಮಂಡಳಿ ಮತ್ತು ಅಧಿಕಾರಿಗಳು ತಾವು ನಿರ್ವಹಿಸುತ್ತಿರುವ ಕೆಲಸ ಶಾಸನಾತ್ಮಕವಾಗಿ ಮಾಡದೇಇದ್ದರೂ, ಯಾವುದೇ ಕ್ರಮ ಇಲ್ಲ ಎಂದು ತಿಳಿದು ಅಧಿಕಾರಿಗಳನ್ನು ನಿಷ್ಕ್ರಿಯೆಗೊಳಿಸುತ್ತಿದ್ದಾರೆ. ಏಕೆಂದರೆ ಅಂತ ತಪ್ಪುಮಾಡಿದ ವ್ಯಕ್ತಿಗಳ ಮೇಲೆ ಕ್ರಮ ಕೈಗೊಳ್ಳಲು ಮತ್ತು ನಿಗಾ ಇಡಲು, ಅದರಲ್ಲೂ ಸಂಯುಕ್ತ ಸಹಕಾರಿಗೆ ಸಿಬ್ಬಂದಿ ಕೊರತೆಯಿಂದ ಸಾಧ್ಯವಾಗುತ್ತಿಲ್ಲ. ಆದರೆ ಈ ಕೊರತೆಯನ್ನು ಒಂದು ಅಸ್ತ್ರವಾಗಿ ಉಪಯೋಗಿಸಲಾಗದು. ಏಕೆಂದರೆ ಕಾನೂನು ಪಾಲಿಸುವುದು ಅದರ ಜವಾಬ್ದಾರಿ ಮತ್ತು ಕರ್ತವ್ಯ. ಸಂಬಂದ ಪಟ್ಟ ಅಧಿಕಾರಿಗಳ ಮೇಲೆ ಸರ್ಕಾರ ಅಥವಾ ಪ್ರಾಧಿಕಾರಗಳು ಕ್ರಮ ಜರುಗಿಸದಿದ್ದರೆ ಸಹಕಾರಿ ಬೆಳವಣಿಗೆಗೆ ತೊಂದರೆಯಾಗುತ್ತದೆ. ಏಕೆಂದರೆ ಶಾಸನ ಪಾಲಿಸುವುದು ಪ್ರತಿಯೊಂದು ಸಹಕಾರಿ ಸಂಸ್ಥೆ ಅಧಿಕಾರಿಗಳು ಮತ್ತು ಮಂಡಳಿಗಳ ಜವಾಬ್ದಾರಿ ಮತ್ತು ಕರ್ತವ್ಯ.

ಬಸವ ಜಯಂತಿ ಪ್ರಯುಕ್ತ ವಿಶೇಷ ಲೇಖನ :

# ಬಸವಣ್ಣ ನವರು ಮತ್ತು ಸಹಕಾರ ತತ್ವಗಳು

– ಶ್ರೀ ವಿಕ್ರಾಂತ ಪಾಟೀಲ, ಇಂಜಿನಿಯರ್, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.

**ದಾರ್ಶನಿಕತ್ವ :**

ಬಸವೇಶ್ವರ ಬಗ್ಗೆ ಮೇಲ್ನೋಟದ ಮಾಹಿತಿ: ಬಸವೇಶ್ವರರು ಅಂದ್ರೆ ಸಮೂಹ ಶಕ್ತಿಯ ರೂಪ, ಅವರ ವ್ಯಕ್ತಿತ್ವದಿಂದ ಧಾರ್ಮಿಕ, ಸಾಮಾಜಿಕ, ಶೋಷಿತರ ಪರವಾದ ಹಾಗೂ ಕಾಯಕದ ಸ್ವರೂಪಕ್ಕೆ ಒಂದು ಹೊಸ ಕಳೆಯನ್ನ ತಂದು ಸರ್ವ ಸಮಾಜವನ್ನು ಅಂಗೈಯಲ್ಲಿ ಹಿಡಿದು ಮೇಲೆ ಎತ್ತಿ ಬೆಳೆಸಿದ ಬಲಿಷ್ಠ ನಾಯಕತ್ವ.

ಅವರ ನಾಯಕತ್ವದ ಸೆಳೆತ ಹೇಗಿತ್ತು ಅಂದ್ರೆ ಸರ್ವ ಮನುಷ್ಯ ಕುಲವನ್ನ ನಮ್ಮವ – ನಮ್ಮ ಮನೆಯ ಮಗನೆಂಬುವ ಘಟ್ಟಿತನ, ಹರಿಹರರ ತನ್ನ ರಗಳೆಯಲ್ಲಿ ಹೇಳಿದ್ದಾನೆ "ಪಾಶಂಡಿ ಭೂಮಿಯೊಳ್ ಶಿವಭಕ್ತಿ ಆರಂಭಿಸಿ ಸರ್ವ ಫಲಂ ಸುಫಲು ಮಾಡುಲು ಬಂದಾತ ನಮ್ಮ ಸಂಗನ ಬಸವಣ್ಣ". ಈ ಕಾರಣದಿಂದಲೇ ದೂರ ದೇಶ/ ಸ್ಥಳಗಳಿಂದ ಹಲವಾರು ಸಾಧಕರು ಬಸವೇಶ್ವರರನ್ನ ಹುಡುಕಿಕೊಂಡು ಕಲ್ಯಾಣ ರಾಜ್ಯಕ್ಕೆ (ಬೀದರ್ ಬಸವಕಲ್ಯಾಣ) ಬರುತ್ತಾರೆ,

ಅನುಭವ ಮಂಟಪವೆಂಬ ಧಾರ್ಮಿಕ ಸಂಸತ್ತನ್ನ ನಟುವರರಾದ ಅನುಭಾವಿ ಅಲ್ಲಮ ಪ್ರಭುಗಳ ನೇತೃತ್ವದಲ್ಲಿ ಪ್ರಾರಂಭಿಸುತ್ತಾರೆ, ಇಲ್ಲಿ ಅರಿವಿಗೆ ಹೆಚ್ಚು ಪ್ರಾಮುಖ್ಯತೆಯನ್ನ ನೀಡಿ ಕಾಯಕ ಮತ್ತು ದಾಸೋಹದ (production and distribution) ವಿಚಾರವನ್ನು ಜಗತ್ತಿಗೆ ಸಾರುತ್ತಾರೆ, ಬಸವೇಶ್ವರರು ಉಪದೇಶಿಸಿದ ತತ್ವ ಮತ್ತು ಕಾರ್ಯವನ್ನ ದೇಶ ಅನುಷ್ಠಾನಗೊಳಿಸಿದರೆ ದೇಶವೇ ಕಲ್ಯಾಣ ದೇಶವಾಗುತ್ತದೆ.

1918 ಮೇ 17ರಂದು ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ "ಬಸವಣ್ಣನವರ ಸರಿ ಸಮಾನವಾಗಿ ಹುಟ್ಟಿ ಹಾಕುವ ತತ್ವ ಸಿದ್ಧಂತಾ ಮತ್ತು ಅವುಗಳ ಅನುಷ್ಠಾನ ಅಂದರೆ ಸ್ತ್ರೀ ಸಮಾನತೆ ಕಾಯಕ ಪ್ರವೃತ್ತಿ ಮನುಷ್ಯತ್ವದ ಮೌಲ್ಯಗಳನ್ನು, ಇನ್ನು ಇವತ್ತಿಗಾದರು ಮೀರಿಸಲು ಸಮಾಜದ ಹಲವು ನಾಯಕರು ಪ್ರಯತ್ನಪಟ್ಟರು ಅದು ಇನ್ನುವರೆಗೂ ಸಾಧ್ಯವಾಗಿಲ್ಲ" ಎಂದು ಉಲ್ಲೇಖಿಸಿದೆ.

**ಪರಿಚಯ :**

ಆಡುಮಾತಿನಲ್ಲಿ ಬಸವಣ್ಣ ಎಂದು ಕರೆಯಲ್ಪಡುವ ಬಸವೇಶ್ವರರು 12ನೇ ಶತಮಾನದ ಭಾರತೀಯ ರಾಜ ನೀತಿಜ್ಞ, ತತ್ವಜ್ಞಾನಿ, ಕವಿ, ಸಮಾಜ ಸುಧಾರಕ. ರಾಜವಂಶಗಳ ಆಳ್ವಿಕೆಯಲ್ಲಿ ಬಸವ ಸಕ್ರಿಯರಾಗಿದ್ದರು. ಆದರೆ, ಭಾರತದಲ್ಲಿ ಕರ್ನಾಟಕದಲ್ಲಿ ರಾಜ ಬಿಜ್ಜಳ II ರ ಆಳ್ವಿಕೆಯ ಸಮಯದಲ್ಲಿ ಅವರ ಪ್ರಭಾವವು ಉತ್ತುಂಗವನ್ನು ತಲುಪಿತ್ತು.

ಬಸವಣ್ಣನ ಅವರು 12ನೇ ಶತಮಾನದಲ್ಲಿ ಕರ್ನಾಟಕದ ಉತ್ತರ ಭಾಗದ ಬಸವನ ಬಾಗೇವಾಡಿ ಪಟ್ಟಣದಲ್ಲಿ ಮಾದರಸ ಮತ್ತು ಮಾದಲಾಂಬಿಕೆ ಎಂಬ ಕನ್ನಡ ಸಾಂಪ್ರದಾಯಿಕ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ಗಂಗಾಂಬಿಕೆಯನ್ನು, ನೀಲಂಬಿಕೆ ವಿವಾಹವಾದರು.

ಥಿಯೊಡೋರ್ ಎಂಬುವವರು ನಾಲ್ಕು ದಶಕಗಳ ಹಿಂದೆ ಬೆಂಗಳೂ–ರಿನಲ್ಲಿದ್ದಾಗ ಬಸವಣ್ಣನವರ ಐದು ವಚನಗಳನ್ನು ಬಸವಣ್ಣನವರ ಐದು ವಚನಗಳನ್ನು ಅನುವಾದ ಮಾಡಿ ಇಂಗ್ಲೆಂಡ್‌ನಲ್ಲಿದ್ದ ತಮ್ಮ ಗುರು ಡಬ್ಲೂ. ಎಚ್.ರಾಬರ್ಟ್‌ಸನ್ ಅವರಿಗೆ ಕಳುಹಿಸಿಕೊಟ್ಟರು. ಬಿಬಿಸಿ ಸಲಹೆಗಾರರಾಗಿದ್ದ ರಾಬರ್ಟ್‌ಸನ್ ಅವರು ಕೇವಲ ಐದು ವಚನಗಳನ್ನು ಓದಿ ಎಷ್ಟೊಂದು ಪ್ರಭಾವಕ್ಕೊಳಗಾದರೆಂದರೆ ಬಸವಣ್ಣನವರ ಜನ್ಮ ಭೂಮಿ, ವಿದ್ಯಾ ಭೂಮಿ ಮತ್ತು ಕಾಯಕ ಭೂಮಿಯನ್ನು ಹುಡುಕಿಕೊಂಡು ಬಂದೇ ಬಿಟ್ಟರು.

ಅವರು ಬಾಗೇವಾಡಿ ಮತ್ತು ಕೂಡಲಸಂಗಮಕ್ಕೆ ಭೇಟಿ ನೀಡಿದ ನಂತರ ಬಸವ ಕಲ್ಯಾಣಕ್ಕೂ ಬಂದರು. ಅವರು ತ್ರಿಪುರಾಂತ ಕೆರೆಯ ದಂಡೆಯ ಮೇಲೆ ಹೋಗುತ್ತಿರುವಾಗ, ಒಬ್ಬ ಮಹಿಳೆ ಘನಲಿಂಗ ರುದ್ರಮುನಿ ಗವಿಯ ಮುಂದಿನ ಅಂಗಳವನ್ನು ಧೂಳು ಏಳದಂತೆ ಮತ್ತು ಅಂದವಾಗಿ ಇಡಲು ಸಗಣಿ ನೀರಿನ ಚಳಿ ಹೊಡೆಯುತ್ತಿದ್ದಳು. ಹಾಗೆ ಸಗಣಿ ನೀರನ್ನು ಸಿಂಪಡಿಸುತ್ತಿರುವುವಾಗ, ಜೊತೆಗಿದ್ದ ಕಲ್ಯಾಣದ ಒಬ್ಬ ವ್ಯಕ್ತಿ She is doing her work ಎಂದು ತೋರಿಸಿದರು. ಆಗ ರಾಬರ್ಟ್‌ಸನ್ ಕೂಡಲೇ "No no she is doing her kayaka" ಎಂದು ತಿಳಿಸಿದರು. ಮಧ್ಯಾಹ್ನದ ಊಟದ ವೇಳೆ Shall we have lunch? ಎಂದು ಜೊತೆಗಿದ್ದವರು ಕೇಳಿದರು. ಆಗ ರಾಬರ್ಟ್‌ಸನ್ "No we shall have prasada" ಎಂದು ತಿಳಿಸಿದರು. Release Basaveshwara from your narrow bond ಎಂದು ರಾಬರ್ಟ್‌ಸನ್ ಅವರು ಇತರರಿಗೆ ತಿಳಿಸಿದ್ದು ಗಮನಾರ್ಹವಾಗಿದೆ.

12ನೇ ಶತಮಾನದ ವಚನ ಚಳವಳಿ ಕೇವಲ ಒಂದು ತಲೆಮಾರಿನ ಚಳವಳಿಯಾಗಿದೆ. ಸಮಾಜದ ಎಲ್ಲ ಸ್ತರಗಳ ಕಾಯಕ ಜೀವಿಗಳು ಈ ಚಳವಳಿಯಲ್ಲಿ ಭಾಗವಹಿಸಿ ವರ್ಗ, ವರ್ಣ, ಜಾತಿ ಮತ್ತು ಲಿಂಗ ಭೇದವಿಲ್ಲದ ಸಮಾಜ ವ್ಯವಸ್ಥೆಯನ್ನು ತರಲು ಅವಿಶ್ರಾಂತವಾಗಿ ಕಾರ್ಯೋನ್ಮುಖವಾಗಿದ್ದು, ವಿಶ್ವದ ಇತಿಹಾಸದಲ್ಲಿ ಅನುಪಮವಾಗಿದೆ.

ಬಸವೇಶ್ವರ ಸಿದ್ದಂತ ನಾವು ನೋಡಿದರೆ ಸೌಹಾರ್ದಯುತ ಸಮಾಜ ಹಾಗೂ ಸಹಕಾರಿ ನಿಲುವುಗಳನ್ನು ಒಳಗೊಂಡಿದೆ.

**ಬಸವಣ್ಣನವರ ವಚನಗಳು ಇದಕ್ಕೆ ಪೂರಕ ಉದಾಹರಣೆಗಳಿವೆ,**

12ನೇ ಶತಮಾನದ ಬಸವೇಶ್ವರರ ಅನುಭವ ಮಂಟಪ ಎಂಬುವದು ಒಂದು ಆಡಳಿತ ಮಂಡಳಿಯ ಹಾಗೆ, ಅದಕ್ಕೆ ಒಬ್ಬ ಅಧ್ಯಕ್ಷರಂತೆ ಅನುಭವ ಮಂಟಪದಲ್ಲಿ ಅಲ್ಲಮ ಪ್ರಭುಗಳು ಅಧ್ಯಕ್ಷರಾದರು, ನಂತರ ಚೆನ್ನಬಸವಣ್ಣ, ಸೊನ್ನಲಿಗೆ ಸಿದ್ದರಾಮ, ಹಾಗೂ ಎಡೆಯೂರು ಸಿದ್ದಲಿಂಗೇಶ್ವರರು ನಂತರ ದಿನಗಳಲ್ಲಿ ಪೀಠಾಧಿಪತಿಗಳಾದರು.

ಹಾಗೆ ಈಗಿನ ಸಹಕಾರಿಗಳ ನಿಯಂತ್ರಣಕ್ಕೆ ಆಡಳಿತ ಮಂಡಳಿ, ಅಧ್ಯಕ್ಷರು, ನಿರ್ದೇಶಕರು ಮತ್ತು ಸದಸ್ಯರು ಎಂಬುವ ರಚನೆ ಇರುವುದು ಎಲ್ಲರಿಗೂ ಗೊತ್ತಿದೆ.

**ಸಹಕಾರದ ಏಳು ತತ್ವಗಳು :**

1. ಮುಕ್ತ ಹಾಗೂ ಸ್ವಯಂ ಪ್ರೇರಿತ ಸದಸ್ಯತ್ವ 2. ಪ್ರಜಾಸತ್ತಾತ್ಮಕ ಸದಸ್ಯರ ಹತೋಟಿ 3. ಆರ್ಥಿಕ ಚಟುವಟಿಕೆಗಳ ಸದಸ್ಯರ ಪಾಲು 4. ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ 5. ಸಹಕಾರ ಶಿಕ್ಷಣ, ತರಬೇತಿ ಮತ್ತುಪ್ರಚಾರ 6. ಸಹಕಾರಿಗಳಲ್ಲಿ ಪರಸ್ಪರ ಕ್ರಿಯಾತ್ಮಕ ಸಹಕಾರ

7. ಸಾಮಾಜಿಕ ಕಳಕಳಿ

**1. ಮುಕ್ತ ಹಾಗೂ ಸ್ವಯಂ ಪ್ರೇರಿತ ಸದಸ್ಯತ್ವ**

ಇವನಾರವ ಇವನಾರವ ಇವನಾರವ ಎಂದೆನಿಸದಿರಯ್ಯಾ
ಇವನಮ್ಮವ, ಇವನಮ್ಮವ, ಇವನಮ್ಮವನೆಂದೆನಿಸಯ್ಯಾ.
ಕೂಡಲಸಂಗಮದೇವಾ ನಿಮ್ಮ ಮನೆಯ ಮಗನೆಂದೆನಿಸಯ್ಯಾ.

ಮನೆ ನೋಡಾ ಬಡವರು; ಮನ ನೋಡಾ ಘನ.
ಸೋಂಕಿನಲ್ಲಿ ಶುಚಿ; ಸರ್ವಾಂಗ ಕಲಿಗಳು.
ಪಸರಕ್ಕನುವಿಲ್ಲ; ಬಂದ ತತ್ಕಾಲಕ್ಕೆ ಉಂಟು.
ಕೂಡಲಸಂಗನ ಶರಣರು ಸ್ವತಂತ್ರಧೀರರು.

ದಾಸೀಪುತ್ರನಾಗಲಿ, ವೇಶ್ಯಾಪುತ್ರನಾಗಲಿ
ಶಿವದೀಕ್ಷೆಯಾದ ಬಳಿಕ ಸಾಕ್ಷಾತು ಶಿವನೆಂದು ವಂದಿಸಿ ಪೂಜಿಸಿ,
ಪಾದೋದಕ ಪ್ರಸಾದವ ಕೊಂಬುದೆ ಯೋಗ್ಯ.
ಹೀಗಲ್ಲದೆ ಉದಾಸೀನವ ಮಾಡಿ ಬಿಡುವವರಿಗೆ
ಪಂಚಮಹಾಪಾತಕ ನರಕ ಕಾಣಾ,
ಕೂಡಲಸಂಗಮದೇವಾ.

ಹಾಳು ಮೊರಡಿಗಳಲ್ಲಿ ಊರ ದಾರಿಗಳಲ್ಲಿ,
ಕೆರೆ ಬಾವಿ ಹೂಗಿಡು ಮರಂಗಳಲ್ಲಿ,
ಗ್ರಾಮ ಮಧ್ಯಂಗಳಲ್ಲಿ ಚೌಪಥ ಪಟ್ಟಣ ಪ್ರವೇಶದಲ್ಲಿ,
ಹಿರಿಯಾಲದ ಮರದಲ್ಲಿ ಮನೆಯ ಮಾಡಿ,
ಕರೆವೆಮ್ಮೆಯ ಹಸುಗೂಸು ಬಸುರಿ ಬಾಣತಿ,
ಕುಮಾರಿ, ಕೊಡಗೂಸು ಎಂಬುವರ ಹಿಡಿದುಂಬ, ತಿರಿದುಂಬ
ಮಾರಯ್ಯ ಬೀರಯ್ಯ ಕೇಚರಗಾವಿಲ ಅಂತರಬೆಂತರ
ಕಾಳಯ್ಯ, ಧೂಳಯ್ಯ, ಮಾಳಯ್ಯ, ಕೇತಯ್ಯಗಳೆಂಬ ನೂರು ಮಡಕೆಗೆ
ನಮ್ಮ ಕೂಡಲಸಂಗಮದೇವಂಗೆ ಶರಣೆಂಬುದೊಂದುದಡಿ ಸಾಲದೆ?

**2. ಪ್ರಜಾಸತ್ತಾತ್ಮಕ ಸದಸ್ಯರ ಹತೋಟಿ**

ವೇದಶಾಸ್ತ್ರ ಆಗಮಂಗಳನೋದಿದವರು ಹಿರಿಯರೆ?
ಕವಿ, ಗಮಕಿ, ವಾದಿ, ವಾಗ್ಮಿಗಳು ಹಿರಿಯರೆ?
ನಟಿನಿ, ಬಾಣ, ವಿಲಾಸಿ, ಸುವಿದ್ಯವ ಕಲಿತ ಡೊಂಬನೇನು ಕಿರಿಯನೆ?
ಹಿರಿಯತನವಾವುದೆಂದಡೆ ಗುಣಜ್ಞಾನ
ಆಚಾರ ಧರ್ಮ ಕೂಡಲಸಂಗನ ಶರಣರು ಸಾಧಿಸಿದ ಹಿರಿಯತನ.

**3. ಆರ್ಥಿಕ ಚಟುವಟಿಕೆಗಳಲ್ಲಿ ಸದಸ್ಯರ ಪಾಲು**

ಊರ ಮುಂದೆ ಹಾಲಹಳ್ಳ ಹರಿಯುತ್ತಿರಲು
ಓರೆಯಾವಿನ ಬೆನ್ನಲಿ ಹರಿಯಲದೇಕಯ್ಯಾ.
ಲಜ್ಜೆಗೆಡಲೇಕೆ? ನಾಣುಗೆಡಲೇಕೆ?
ಕೂಡಲಸಂಗಮ ದೇವರುಳ್ಳನ್ನಕ್ಕ
ಬಿಜ್ಜಳನ ಭಂಡಾರವೆನಗೇಕಯ್ಯಾ.

**4. ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ**

ಉಸುರಿನ ಪರಿಮಳವಿರಲು
ಕುಸುಮದ ಹಂಗೇಕಯ್ಯಾ?
ಕ್ಷಮೆದಮೆ ಶಾಂತಿ ಸೈರಣೆಯಿರಲು
ಸಮಾಧಿಯ ಹಂಗೇಕಯ್ಯಾ?
ಲೋಕವೆ ತಾನಾದ ಬಳಿಕ ಏಕಾಂತದ ಹಂಗೇಕಯ್ಯಾ
ಚೆನ್ನಮಲ್ಲಿಕಾರ್ಜುನಾ.

**5. ಸಹಕಾರ ಶಿಕ್ಷಣ, ತರಬೇತಿ ಮತ್ತು ಪ್ರಚಾರ**

ಅರಿವೆ ಗುರು, ಆಚಾರವೆ ಶಿಷ್ಯ, ಜ್ಞಾನವೆ ಲಿಂಗ,
ಪರಿಣಾಮವೆ ತಪ, ಸಮತೆಯಿಂಬುದೆ ಯೋಗದಾಗು ನೋಡಾ.
ಈಸುವನರಿಯದೆ ವೇಷವ ಧರಿಸಿ, ಲೋಚು ಬೋಳಾದಡೆ
ಮಹಾಲಿಂಗ ಕಲ್ಲೇಶ್ವರ ದೇವರು ನಗುವರು.

**6. ಸಹಕಾರಿಗಳಲ್ಲಿ ಪರಸ್ಪರ ಕ್ರಿಯಾತ್ಮಕ ಸಹಕಾರ**

ಎನ್ನಕಾಯವದಂಡಿಗೆಯ ಮಾಡಯ್ಯ,
ಎನ್ನ ಶಿರವ ಸೋರೆಯ ಮಾಡಯ್ಯ,
ಎನ್ನ ನರವತಂತಿಯ ಮಾಡಯ್ಯ,
ಎನ್ನ ಬೆರಳ ಕಡ್ಡಿಯ ಮಾಡಯ್ಯ,
ಬತ್ತೀಸರಾಗವ ಪಾಡಯ್ಯಾ, ಉರದಲೊತ್ತಿ ಬಾರಿಸು,
ಕೂಡಲಸಂಗಮದೇವಾ.

**7. ಸಾಮಾಜಿಕ ಕಳಕಳಿ**

ಕಾಲಿಲ್ಲದವಂಗೆ ಕಾಲು ಕೊಟ್ಟೆ ಬಸವಾ,
ಕಣ್ಣಿಲ್ಲದವಂಗೆ ಕಣ್ಣ ಕೊಟ್ಟೆ ಬಸವಾ,
ಎನ್ನ ಕಣ್ಣು ಕಾಲಿಂಗೆ ನೀನೆಯಯ್ಯಾ ಬಸವಾ,
ಕಪಿಲಸಿದ್ಧಮಲ್ಲಿನಾಥಯ್ಯಾ.

ಎಲ್ಲರನ್ನ ಬಸವಣ್ಣನವರು ಅಪ್ಪಿಕೊಂಡರು ಒಪ್ಪಿಕೊಂಡರು ಹಾಗೂ ಅನೇಕ ಶಿವಶರಣರು, ದಾರ್ಶನಿಕರು ತಮ್ಮ ಸಾಹಿತ್ಯದ ಮುಖೇನ ಕೊಂಡಾಡಿದ್ದಾರೆ. ಇದಕ್ಕೆ ಸಾಕ್ಷಿ ಎಂಬಂತೆ ಅಲ್ಲಮ ಪ್ರಭುಗಳ ಒಂದು ವಚನ ಇಂತಿದೆ;

ಕಲ್ಯಾಣವೆಂಬ ಪ್ರಣತೆಯಲ್ಲಿ ಭಕ್ತಿ ರಸವೆಂಬ ತೈಲವನೆರೆದು,
ಆಚಾರವೆಂಬ ಬತ್ತಿಯಲ್ಲಿ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು
ತೊಳಗಿಬೆಳಗುತ್ತಿದ್ದಿತ್ತಯ್ಯಾ ಶಿವನಪ್ರಕಾಶ !
ಆ ಬೆಳಗಿನೊಳಗೆ ಒಪ್ಪುತ್ತಿದ್ದರಯ್ಯಾ ಅಸಂಖ್ಯಾತ ಭಕ್ತಗಣಂಗಳು.
ಶಿವಭಕ್ತರಿರ್ದ ಕ್ಷೇತ್ರವೆ ಅವಿಮುಕ್ತ ಕ್ಷೇತ್ರವೆಂಬುದು ಹುಸಿಯೆ ?
ಶಿವಭಕ್ತರಿರ್ದ ದೇಶ ಪಾವನವೆಂಬುದು ಹುಸಿಯೆ ?
ಗುಹೇಶ್ವರ ಲಿಂಗದಲ್ಲಿ ಎನ್ನ ಪರಮಾರಾಧ್ಯ ಸಂಗನ ಬಸವಣ್ಣನ ಕಂಡು
ಬದುಕಿದೆನು ಕಾಣಾ ಸಿದ್ಧರಾಮಯ್ಯಾ!!

**ಉಪ ಸಂಹಾರ :**

ಸಹಕಾರ ಮಾನವನ ಹುಟ್ಟಿನಿಂದಲೇ ಬಂದಿರುವುದರಿಂದ ಅಂದಿನಿಂದ ಇಂದಿನವರೆಗೂ ನಮ್ಮ ಸಮಾಜ ಸುಧಾರಕರಲ್ಲಿ ಅಗ್ರ ಗಣ್ಯರೆನಿಸಿದ ಬಸವಣ್ಣನವರು ಹಾಗೂ ಅವರ ಸಮಕಾಲೀನ ಶಿವಶರಣರು ತಮ್ಮ ವಚನಗಳ ಮೂಲಕ ಪ್ರತಿಯೊಂದು ಕಾಯಕದಲ್ಲಿ ಸಹಕಾರ ತತ್ವಗಳು ಹಾಸು ಹೊಕ್ಕಾಗಿವೆ ಎಂಬುದನ್ನು ತಿಳಿಯಪಡಿಸಿದ್ದು, ಅದನ್ನು ಸಮಾಜವು ಅರಿಯಬೇಕು.

# ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ವಿವಿಧ ಸಮಿತಿಗಳು, ಆಯೋಗಗಳು ಹಾಗೂ ಮುಂದಿನ ದಾರಿ

– ಮೂಲ : ಆರ್. ಮುರಳೀಧರನ್, ಪುದುಚೇರಿ ನಾಗರೀಕ ಸೇವೆ (ನಿವೃತ್ತ), ನಿರ್ದೇಶಕರು, ಕ್ಯಾಟಲಿಸ್ಟ್ (ತರಬೇತಿದಾರರು)
– ಅನುವಾದ : ಶ್ರೀಮತಿ ದಿವ್ಯ ಟಿ, ಹಿರಿಯ ಸಹಾಯಕಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.

ಸಹಕಾರವು ಮಾನವ ಕುಲದಷ್ಟು ಹಳೆಯದಾಗಿದೆ ಮತ್ತು ಸಹಕಾರಿ ಚಳುವಳಿಗಿಂತ ಹಳೆಯದಾಗಿದೆ. ಸಹಕಾರ ಚಳುವಳಿಯು ಇತರರ ನಡುವೆ ಮಾನವ ಸಹಕಾರಕ್ಕೆ ಒಂದು ಉದಾಹರಣೆಯಾಗಿದೆ. ಸಹಕಾರದ ಅರ್ಥವು ಚಿಂತಕರಿಂದ ಚಿಂತಕರಿಗೆ ಮತ್ತು ಮಾನವ ಚಟುವಟಿಕೆಯ ಒಂದು ಕ್ಷೇತ್ರದಿಂದ ಇನ್ನೊಂದಕ್ಕೆ ಬದಲಾಗುತ್ತದೆ. ಸಹಕಾರ ಎಂಬ ಪದವು ಲ್ಯಾಟಿನ್ ಪದ ಕೂಪೆರಾರಿ (cooperari) ಇಂದ ಬಂದಿದೆ, ಇಲ್ಲಿ 'ಸಹ' ('co') ಪದವು 'ಜೊತೆ' ('with') ಮತ್ತು 'ಒಪೆರಾರಿ' ('operari') ಎಂದರೆ 'ಕೆಲಸ ಮಾಡುವುದು' ಎಂದರ್ಥ. ಹೀಗಾಗಿ, ಸಹಕಾರ ಎಂದರೆ ಒಟ್ಟಾಗಿ ಕೆಲಸ ಮಾಡುವುದು. ಆದ್ದರಿಂದ, ಕೆಲವು ಸಾಮಾನ್ಯ ಆರ್ಥಿಕ ಉದ್ದೇಶಗಳೊಂದಿಗೆ ಒಟ್ಟಾಗಿ ಕೆಲಸ ಮಾಡಲು ಬಯಸುವವರು 'ಸಹಕಾರಿ ಸಂಘ' ಎಂದು ಕರೆಯಲ್ಪಡುವ ಸಂಘವನ್ನು ರಚಿಸಬಹುದು. ಇದು ಸ್ವ-ಸಹಾಯ ಹಾಗೂ ಪರಸ್ಪರ ಸಹಾಯದ ತತ್ವದ ಮೇಲೆ ಕಾರ್ಯನಿರ್ವಹಿಸುತ್ತದೆ. ಇಂಟರ್ ನ್ಯಾಷನಲ್ ಕೋಆಪರೇಟಿವ್ ಅಲೈಯನ್ಸ್ (1995) ಪ್ರಕಾರ, ಸಹಕಾರಿ ಸಂಸ್ಥೆಗಳು ಸ್ವ-ಸಹಾಯ, ಸ್ವ-ಜವಾಬ್ದಾರಿ, ಪ್ರಜಾಪ್ರಭುತ್ವ, ಸಮಾನತೆ ಮತ್ತು ಐಕಮತ್ಯದ ಮೌಲ್ಯಗಳನ್ನು ಆಧರಿಸಿವೆ. ಸಹಕಾರಿ ಸದಸ್ಯರು ಪ್ರಾಮಾಣಿಕತೆ, ಮುಕ್ತತೆ, ಸಾಮಾಜಿಕ ಜವಾಬ್ದಾರಿ ಮತ್ತು ಇತರರ ಬಗ್ಗೆ ಕಾಳಜಿ ವಹಿಸುವ ನೈತಿಕ ಮೌಲ್ಯಗಳನ್ನು ನಂಬುತ್ತಾರೆ.

**ಹೊಸ ರಾಷ್ಟ್ರೀಯ ಸಹಕಾರ ನೀತಿ ಕರಡನ್ನು ರಚಿಸುವುದಕ್ಕಾಗಿ ರಾಷ್ಟ್ರ ಮಟ್ಟದ ಸಮಿತಿಯ ರಚನೆ ಪ್ರೋತ್ಸಾಹದಾಯಕ**

ಮಾಜಿ ಕೇಂದ್ರ ಸಂಪುಟ ಸಚಿವರಾದ ಶ್ರೀ ಸುರೇಶ್ ಪ್ರಭಾಕರ ಪ್ರಭು ಅವರ ಅಧ್ಯಕ್ಷತೆಯಲ್ಲಿ ಸಹಕಾರ ಕ್ಷೇತ್ರದ ತಜ್ಞರು; ರಾಷ್ಟ್ರೀಯ/ ರಾಜ್ಯ/ ಜಿಲ್ಲೆ ಮತ್ತು ಪ್ರಾಥಮಿಕ ಸಹಕಾರ ಸಂಘಗಳ ಪ್ರತಿನಿಧಿಗಳು; ರಾಜ್ಯಗಳ/ UTಗಳ ಸಹಕಾರ ಸಂಘಗಳ ಕಾರ್ಯದರ್ಶಿಗಳು (ಸಹಕಾರ) ಮತ್ತು ರಿಜಿಸ್ಟ್ರಾರ್‌ಗಳು; ಮತ್ತು ಕೇಂದ್ರ ಸಚಿವಾಲಯಗಳ/ಇಲಾಖೆಗಳ ಅಧಿಕಾರಿಗಳನ್ನೊಳಗೊಂಡಂತೆ ಹೊಸ ರಾಷ್ಟ್ರೀಯ ಸಹಕಾರ ನೀತಿಯ ಕರಡನ್ನು ಸಿದ್ಧಪಡಿಸಲು ದಿನಾಂಕ 02.9.2022ರ ಆದೇಶ ಸಂಖ್ಯೆ S-11016/14/2021-CPC (PT-1) (115688) ಮೂಲಕ ರಾಷ್ಟ್ರ ಮಟ್ಟದ ಸಮಿತಿಯನ್ನು ಸಹಕಾರ ಸಚಿವಾಲಯದಿಂದ ರಚಿಸಲಾಗಿದೆ. ಅಧ್ಯಕ್ಷರ ಜೊತೆಗೆ ಸಮಿತಿಯು 47 ಸದಸ್ಯರನ್ನು ಒಳಗೊಂಡಿತ್ತು. ನಂತರ ಸಮಿತಿಗೆ ಇನ್ನೂ 2 ಸದಸ್ಯರನ್ನು ಸೇರಿಸಲಾಯಿತು.

ದೇಶದಲ್ಲಿ ಸಹಕಾರ ಚಳುವಳಿಯನ್ನು ಬಲಪಡಿಸಲು ಮತ್ತು ಸಹಕಾರ ಆಧಾರಿತ ಆರ್ಥಿಕ ಅಭಿವೃದ್ಧಿ ಮಾದರಿಯನ್ನು ಉತ್ತೇಜಿಸಲು, 'ಸಹಕಾರದಿಂದ ಸಮೃದ್ಧಿ'ಯ ದೃಷ್ಟಿಕೋನವನ್ನು ಸಾಕಾರಗೊಳಿಸಲು ಅನುವು ಮಾಡಿಕೊಡುವ ಚೌಕಟ್ಟನ್ನು ಒದಗಿಸಲು ಸಹಕಾರಿ ತತ್ವಗಳಿಗೆ ಅನುಗುಣವಾಗಿ ಹೊಸ ರಾಷ್ಟ್ರೀಯ ಸಹಕಾರ ನೀತಿ ದಾಖಲೆಯನ್ನು ರಚಿಸುವ ಜವಾಬ್ದಾರಿಯನ್ನು ಸಮಿತಿಯು ಹೊಂದಿದೆ. VAMNICOM, ಪುಣೆ ಈ ಸಮಿತಿಗೆ ಅಗತ್ಯ ಕಾರ್ಯದರ್ಶಿ ನೆರವು, ವ್ಯವಸ್ಥಾಪನಾ ಮತ್ತು ತಾಂತ್ರಿಕ ಬೆಂಬಲವನ್ನು ನೀಡುತ್ತಿದೆ. ಸಮಿತಿಯು ಮೊದಲ ಸಭೆ ನಡೆಸಿದ ದಿನಾಂಕದಿಂದ ಮೂರು ತಿಂಗಳೊಳಗೆ ಅಂತಿಮ ಕರಡನ್ನು ಸಲ್ಲಿಸಬೇಕು. ಈ ನಿಟ್ಟಿನಲ್ಲಿ ಸಮಿತಿಯು ದಿನಾಂಕ 03.10.2022ರಂದು ಮೊದಲ ಸಭೆಯನ್ನು ಕರೆಯುವ ಮೂಲಕ ತನ್ನ ಕಾರ್ಯವನ್ನು ಪ್ರಾರಂಭಿಸಿದೆ. ಹೊಸದಾಗಿ ರಚನೆಯಾದ ಸಹಕಾರ ಸಚಿವಾಲಯದಿಂದ ಈ ಹೆಜ್ಜೆ ಸರಿಯಾದ ದಿಕ್ಕಿನಲ್ಲಿದೆ. ಎಲ್ಲಾ ಮಧ್ಯಸ್ಥಗಾರರು ಸಹ ಉತ್ಸಾಹದಿಂದ ವರದಿಯನ್ನು ಎದುರು ನೋಡುತ್ತಿದ್ದಾರೆ.

**ಸಿಂಹಾವಲೋಕನ :**

ಪ್ರೇರಣಾತ್ಮಕ ಕಾರ್ಯಕ್ರಮದ ಆಯೋಜಕರು ಭಾಗವಹಿಸಿದ ಪ್ರತಿನಿಧಿಗಳಿಗೆ ಚಿತ್ರಕಾರ ಮತ್ತು ಲಾಂಗ್ ಜಂಪರ್ ನಡುವೆ ಸಾಮಾನ್ಯವಾದದ್ದು ಏನು ಎಂದು ಕೇಳುತ್ತಾರೆ. ಹಲವಾರು ಪ್ರತಿಕ್ರಿಯೆಗಳು ಸ್ವೀಕೃತವಾದ ನಂತರ, ಇವೆರಡೂ ಸಹ ಮುಂದೆ ಸಾಗಲು ಹಿಂದಕ್ಕೆ ಹೋಗಬೇಕು ಎಂದು ಆಯೋಜಕರು ವಿವರಿಸುತ್ತಾರೆ. ಒಬ್ಬ ಚಿತ್ರಗಾರನ ಪ್ರಗತಿಯನ್ನು ನಿರ್ಣಯಿಸಲು ಹಿಂದೆ ಸರಿಯಬೇಕು ಮತ್ತು ಅವನು ಚಿತ್ರಕಲೆಯನ್ನು ಮುಂದುವರೆಸುತ್ತಾನೆ. ಉದ್ದ ಜಿಗಿತಗಾರನು ಬಹಳ ಹಿಂದೆ ಹೋಗಬೇಕು, ಇದರಿಂದ ಅವನ ಜಿಗಿತ ಹಿಗ್ಗುತ್ತದೆ. ಹಾಗೆಯೇ, ಸ್ಪಷ್ಟವಾಗಿ ಕಲಿಯುವವರು ಹಿಮ್ಮುಖವಾಗಿ ಹೋಗುವ ಮೂಲಕ ಸಹಕಾರದ ವಿವಿಧ ಸಮಿತಿಗಳು ಮತ್ತು ಆಯೋಗಗಳ ಬಗ್ಗೆ ತಿಳಿದುಕೊಳ್ಳಬೇಕು.

ಚಳುವಳಿಯಲ್ಲಿ ಏನಾದರೂ ತಪ್ಪಾಗಿದೆ ಎಂದು ಸರ್ಕಾರಕ್ಕೆ ಅನಿಸಿದಾಗ ಮತ್ತು ಕಾಲಕಾಲಕ್ಕೆ ಸಹಕಾರಿಗಳ ಅಭಿವೃದ್ಧಿಯನ್ನು ಅಧ್ಯಯನ ಮಾಡಲು ಹಾಗೂ ಸಹಕಾರಿ ಚಳುವಳಿಯ ಸುಸ್ಥಿರ ಅಭಿವೃದ್ಧಿಗೆ ಶಿಫಾರಸ್ಸುಗಳನ್ನು ಮಾಡಲು ವಿವಿಧ ತಜ್ಞರ ಸಮಿತಿಗಳನ್ನು ನೇಮಿಸಲಾಯಿತು. ಅಂತಹ ಸಮಿತಿಗಳ ಉದ್ದೇಶಗಳು ಮತ್ತು ಶಿಫಾರಸ್ಸುಗಳನ್ನು ಸಂಕ್ಷಿಪ್ತವಾಗಿ ಎತ್ತಿ ತೋರಿಸುವುದು ಈ ಲೇಖನದ ಉದ್ದೇಶವಾಗಿದೆ. ಅಂತಹ ಸಮಿತಿಗಳು

ಮತ್ತು ಆಯೋಗಗಳು ಕೈಗೊಂಡ ಪ್ರಯಾಣ ಹಾಗೂ ವರ್ಷಗಳಲ್ಲಿ ಚಳುವಳಿಯನ್ನು ಉತ್ತಮಗೊಳಿಸಲು ಹಾಗೂ ಉತ್ತಮಗೊಳಿಸಲು ಎಷ್ಟು ಪ್ರಯತ್ನಗಳನ್ನು ಮಾಡಿದೆ ಎಂಬುದು ಓದುಗರಿಗೆ ಉತ್ತೇಜನ ನೀಡುತ್ತದೆ.

ಈ ಲೇಖನವು ಅಂತಹ ಎಲ್ಲಾ ಸಮಿತಿಗಳು ಮತ್ತು ಆಯೋಗಗಳನ್ನು ಒಳಗೊಂಡಿದೆ. ಅದೇ ಸಮಯದಲ್ಲಿ, ಶಿಫಾರಸ್ಸುಗಳ ಪಕ್ಷಿನೋಟವನ್ನು ಮಾತ್ರ ಸಂಕ್ಷಿಪ್ತಗೊಳಿಸಲಾಗಿದೆ. ಓದುಗರಿಗೆ ಇದೊಂದು ಅದ್ಭುತ ಪಯಣ.

- ಫ್ರೆಡ್ರಿಕ್ ನಿಕೋಲ್ಸನ್ ಅವರ ವರದಿ (1897)
- ಮ್ಯಾಕ್ಲಗನ್ ಸಮಿತಿ ವರದಿ (1915)
- ರಾಯಲ್ ಕಮಿಷನ್ ಆಫ್ ಅಗ್ರಿಕಲ್ಚರ್ (1928)
- ಮೆಹ್ತಾ ಸಮಿತಿ (1937)
- ಗಾಡ್ಗೀಲ್ ಸಮಿತಿ (1944)
- ಸಹಕಾರಿ ಯೋಜನಾ ಸಮಿತಿ (1945)
- ರಿಜಿಸ್ಟ್ರಾರ್ ಸಮ್ಮೇಳನ (1947)
- ಆಲ್ ಇಂಡಿಯಾ ರೂರಲ್ ಕ್ರೆಡಿಟ್ ಸರ್ವೇ ಸಮಿತಿ (1954)
- ಅಖಿಲ ಭಾರತ ಸಹಕಾರಿ ಕಾಂಗ್ರೆಸ್ (1956)
- ಕಾನೂನು ಸಮಿತಿ (1956)
- ಮೆಹ್ತಾ ಸಮಿತಿ (1959)
- ಸಹಕಾರಿ ಬೇಸಾಯದಲ್ಲಿ ಕಾರ್ಯನಿರತ ಗುಂಪು (1959)
- ಸಹಕಾರಿ ತರಬೇತಿಯ ಅಧ್ಯಯನ ತಂಡದ ವರದಿ (1961)
- ಗ್ರಾಹಕರ ಸಹಕಾರಿಗಳ ಸಮಿತಿ (1961)
- ತಕ್ಕಾವಿ ಸಾಲಗಳ ಸಮಿತಿ (1962)
- ಸಹಕಾರಿ ಆಡಳಿತ ಸಮಿತಿ (1963)
- ಎಂಎಲ್ ದಂಟ್ವಾಲ ಸಮಿತಿ (1964)
- ಮಿರ್ಧಾ ಆರ್‌ಎಸ್ ಸಮಿತಿ (1964)
- ಆಲ್ ಇಂಡಿಯಾ ರೂರಲ್ ಕ್ರೆಡಿಟ್ ರಿವ್ಯೂ ಸಮಿತಿ (1966)
- ಪಿಆರ್ ದುಭಾಶಿ ಸಮಿತಿ (1972)
- ಬ್ಯಾಂಕಿಂಗ್ ಆಯೋಗದ ವರದಿ (1972)
- ಸಹಕಾರಿ ಭೂಮಿ ಅಭಿವೃದ್ಧಿ ಬ್ಯಾಂಕುಗಳ ಸಮಿತಿಯ ವರದಿ (1974)
- ಭಾರತೀಯ ರಿಸರ್ವ್ ಬ್ಯಾಂಕಿನ ಸ್ಟಡಿ ಟೀಮ್ ಆನ್ ಓವರ್ ಡ್ಯೂಸ್ (1974)
- ಸಹಕಾರಿ ಕ್ರೆಡಿಟ್ ಸಂಸ್ಥೆಗಳ ಏಕೀಕರಣ ಸಮಿತಿಯ ವರದಿ (1976)
- ರಾಷ್ಟ್ರೀಯ ಕೃಷಿ ಆಯೋಗದ ವರದಿ (1976)
- ನಗರ ಸಹಕಾರಿ ಬ್ಯಾಂಕುಗಳ ಸಮಿತಿ (1978)
- ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗಾಗಿ [ಕ್ರಾಫಿಕಾರ್ಡ್] ಸಾಂಸ್ಥಿಕ ಸಾಲದ ವ್ಯವಸ್ಥೆಗಳನ್ನು ಪರಿಶೀಲಿಸಲು ಸಮಿತಿಯ ವರದಿ (1981)
- ಅರ್ಧನಾರೀಶ್ವರನ್ ಸಮಿತಿ (1987)
- ಖುಸ್ರೋ ಸಮಿತಿ (1989)
- ಪಂತ್ ಸಮಿತಿ (1990)
- ಬ್ರಹ್ಮ ಪ್ರಕಾಶ್ ಸಮಿತಿ (1991)
- ನರಸಿಂಹಂ ಸಮಿತಿ (1991)
- ಕಾಪೋರ್ ಸಮಿತಿ (2000)
- ಗ್ರಾಮೀಣ ಸಾಲದ ತಜ್ಞರ ಸಮಿತಿ (2001)
- ಪ್ರೊ. ವೈದ್ಯನಾಥನ್ ಸಮಿತಿ (2004)
- ಸಹಕಾರದ ಮೇಲಿನ ಉನ್ನತ ಮಟ್ಟದ ಸಮಿತಿ (2009)
- ನಗರ ಸಹಕಾರಿ ಬ್ಯಾಂಕ್‌ಗಳ ಪರವಾನಿಗೆಯಲ್ಲಿ ತಜ್ಞರ ಸಮಿತಿಯ ವರದಿ (2011)

(ಈ ಸಮಿತಿ ಹಾಗೂ ಆಯೋಗಗಳ ಸಾರಾಂಶಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು)

**ಮುಂದಿನ ದಾರಿ :**

ಹೊಸ ರಾಷ್ಟ್ರ ಮಟ್ಟದ ಸಮಿತಿಯು ರಾಷ್ಟ್ರೀಯ ಸಹಕಾರ ನೀತಿ ಕರಡನ್ನು ರೂಪಿಸಲು ಸಮಗ್ರ ವರದಿಯನ್ನು ಸಿದ್ಧಪಡಿಸಲು ವಿವಿಧ ಸಮಸ್ಯೆಗಳನ್ನು ಪರಿಹರಿಸಬೇಕು:

- ಸಹಕಾರಿ ಸಂಘಗಳ ಮೇಲೆ ಸದಸ್ಯರು ಹಾಗೂ ಸಾರ್ವಜನಿಕರಲ್ಲಿ ವಿಶ್ವಾಸ ಮೂಡಿಸುವ ತುರ್ತು ಅಗತ್ಯವಿದೆ.
- ಸದಸ್ಯರ ಭಾಗವಹಿಸುವಿಕೆ ಸಕ್ರಿಯವಾಗಿರಬೇಕು, ವಾರ್ಷಿಕ ಸಾಮಾನ್ಯ ಸಭೆಯನ್ನು ನಿಯಮಿತವಾಗಿ ನಡೆಸಬೇಕು.
- ಲೆಕ್ಕಪರಿಶೋಧನೆ ಮತ್ತು ಮೇಲ್ವಿಚಾರಣೆಯಲ್ಲಿ ಭಾರಿ ಹಿನ್ನಡೆಯಾಗಿದೆ.
- ಪ್ರಹಸನ ಚುನಾವಣೆಯ ನಿದರ್ಶನಗಳಿವೆ ಮತ್ತು ಸ್ವತಂತ್ರ ಎಂದು ಕರೆಯಲ್ಪಡುವ ಸಹಕಾರಿ ಚುನಾವಣಾ ಆಯೋಗವು ಆಡಳಿತ ಪಕ್ಷದ ಕಡೆಗೆ ಪಕ್ಷಪಾತವಿದೆ ಎಂದು ಆರೋಪಿಸಲಾಗಿದೆ.

ಸ್ವಾಭಿಮಾನಿ ಸಹಕಾರಿ

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2023-2025 RNI NO. KARBIL-2004/18001/Pages 30
Licensed to post without Prepayment License No. PMG BG/WPP-384/2023-2025.

- ಲೆಕ್ಕಪರಿಶೋಧನೆ ವಿಳಂಬವಾದರೆ ಮತ್ತು ನಿಗದಿತ ಸಮಯದೊಳಗೆ ವಾರ್ಷಿಕ ಸಾಮಾನ್ಯ ಸಭೆಯನ್ನು ಕರೆಯುವಲ್ಲಿ ವಿಫಲವಾದಲ್ಲಿ ಕಛೇರಿಯಲ್ಲಿರುವ ಸಮಿತಿಯನ್ನು ಅನರ್ಹಗೊಳಿಸಬೇಕು. ನಿಗದಿತ ಸಮಯಕ್ಕೆ ಚುನಾವಣೆ ನಡೆಸಲು ವಿಫಲವಾದಲ್ಲಿ, ಸಮಿತಿಯು ಮುಂದಿನ ಅವಧಿಯಲ್ಲಿ ಸ್ಪರ್ಧಿಸಲು ಅನುಮತಿ ನೀಡಬಾರದು.
- ಒಬ್ಬರು ಅಧಿಕಾರವನ್ನು ಹೊಂದಬಹುದಾದ ಅವಧಿಗಳ ಸಂಖ್ಯೆ ಮತ್ತು ಅವರು ಸಮಿತಿಯ ಪದಾಧಿಕಾರಿ/ಸದಸ್ಯರಾಗಬಹುದಾದ ಸಂಘಗಳ ಸಂಖ್ಯೆಯ ಮೇಲೆ ಮಿತಿ ಇರಬೇಕು.
- ಸಮಿತಿಯ ಹೊರಹೋಗುವ ಸದಸ್ಯರ ಹತ್ತಿರದ ಸಂಬಂಧಿ (ಸಂಗಾತಿ, ಒಡಹುಟ್ಟಿದವರು, ಮಗ ಅಥವಾ ಮಗಳು) ಚುನಾವಣೆಗೆ ಸ್ಪರ್ಧಿಸದಂತೆ ಅಥವಾ ಸಮಿತಿಗೆ ಸಹ–ಆಯ್ಕೆಯಾಗದಂತೆ ನಿರ್ಬಂಧವನ್ನು ವಿಧಿಸಬಹುದು.
- ಒಂದು ವೇಳೆ, ಆಡಳಿತಾಧಿಕಾರಿ/ ವಿಶೇಷಾಧಿಕಾರಿಯು ಲೆಕ್ಕಪರಿಶೋಧನೆ ಮತ್ತು/ಅಥವಾ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸಲು ವಿಳಂಬ ಮಾಡಿದರೆ, ಅವರನ್ನು ಹುದ್ದೆಯಿಂದ ಬಿಡುಗಡೆ ಮಾಡಬೇಕು ಮತ್ತು ಕರ್ತವ್ಯ ಲೋಪಕ್ಕಾಗಿ ಸೇವಾ ನಿಯಮಗಳ ಅಡಿಯಲ್ಲಿ ಶಿಸ್ತು ಕ್ರಮವನ್ನು ಎದುರಿಸಬೇಕು.
- ಸಂಘಗಳನ್ನು ಸಮಾಪನೆಗೊಳಿಸುವಲ್ಲಿ ಸಹ ಅಗಾಧ ವಿಳಂಬವಿದೆ. ಈ ಬಗ್ಗೆ ಗಮನಹರಿಸಬೇಕು.
- ಸದಸ್ಯರು ಮತ್ತು ಸಾರ್ವಜನಿಕರಿಂದ ಠೇವಣಿಗಳಿಗೆ ಸಹಕಾರಿಗಳನ್ನು ಲಾಭದಾಯಕವೆಂದು ಪರಿಗಣಿಸಲಾಗುತ್ತದೆ, ಆದರೆ ಮರುಪಾವತಿಯಲ್ಲಿ ಪೂರ್ವನಿಯೋಜಿತವಾಗಿ ಆತ್ಮವಿಶ್ವಾಸವನ್ನು ಕುಗ್ಗಿಸುತ್ತದೆ.
- ಕುಂದುಕೊರತೆಗಳ ಪರಿಹಾರವು ನಿಧಾನವಾಗಿರುತ್ತದೆ, ಅಧಿಕಾರಿಗಳು ಮತ್ತು ನ್ಯಾಯಮಂಡಳಿಗಳು ಪ್ರಕರಣಗಳನ್ನು ವಿಲೇವಾರಿ ಮಾಡುವಲ್ಲಿ ಅನಗತ್ಯ ವಿಳಂಬವಾಗುತ್ತಿದೆ. ವಿಶೇಷವಾಗಿ ಚುನಾವಣಾ ವಿವಾದಗಳು. ಪ್ರಕರಣಗಳು/ವಿವಾದಗಳು ಕಾಲಮಿತಿಯೊಳಗೆ ವಿಲೇವಾರಿಯಾಗಬೇಕು. ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳನ್ನು ಅನುಪಾಲನೆ ಮಾಡುವುದಿಲ್ಲ.
- ಗ್ರಾಹಕ ಸಹಕಾರ ಕ್ಷೇತ್ರ/ ವಿಭಾಗವು ಬಹುತೇಕ ಕಣ್ಮರೆಯಾಗುತ್ತಿದೆ; ಕೃಷಿ ಸಾಲ ಸಹಕಾರ ಸಂಘಗಳ ಉಳಿವಿಗಾಗಿ ಹೊಸ ಮಾರ್ಗಗಳನ್ನು ಕಂಡುಕೊಳ್ಳಬೇಕು.
- ಸಹಕಾರಿ ಸಂಸ್ಥೆಗಳು ಪದೇ ಪದೇ ಸಾಲ ಮನ್ನಾ ಮಾಡಲು ಫಲವತ್ತಾಗಿವೆ ಮತ್ತು ಸರ್ಕಾರಗಳು ಅಂತಹ ಸಾಲ ಮನ್ನಾದಿಂದ ಉಂಟಾದ ನಷ್ಟವನ್ನು ಮರುಪಾವತಿ ಮಾಡುವುದಿಲ್ಲ.
- ಅಧಿಕಾರಿಗಳು ಮತ್ತು ಉದ್ಯೋಗಿಗಳಿಗೆ ತರಬೇತಿಯನ್ನು ನೀಡಬೇಕು, ವಿಶೇಷವಾಗಿ ಸಹಕಾರಿ ಸಂಸ್ಥೆಗಳ ನೌಕರರು ಲೆಕ್ಕಪತ್ರ ನಿರ್ವಹಣೆ, ಲೆಕ್ಕಪರಿಶೋಧನೆ ಮತ್ತು ಕಾನೂನು ಅಂಶಗಳ ಕುರಿತು ತಮ್ಮ ಕೌಶಲ್ಯ ಮತ್ತು ಜ್ಞಾನವನ್ನು ಇಂದೀಕರಿಸಬೇಕು.
- ನಷ್ಟ ಹೊಂದುತ್ತಿರುವ ಸಂಸ್ಥೆಗಳನ್ನು ಪುನರ್ವಸತಿ ಮಾಡಲು ಮತ್ತು ಪುನಶ್ಚೇತನಗೊಳಿಸಲು, ಕಾರ್ಯಸಾಧ್ಯವಾದ ಪರಿಹಾರದೊಂದಿಗೆ ಮಾರ್ಗಸೂಚಿ ಅಗತ್ಯ.
- ಗುರುತರವಾದ ಅಪರಾಧಕ್ಕೆ ಅನುಗುಣವಾದ ದಂಡನೆ ನೀಡಬೇಕು.
- ಬಹುರಾಜ್ಯ ಸಹಕಾರ ಸಂಘಗಳನ್ನು ಬಲಪಡಿಸಲು, ಸಂರಕ್ಷಿಸಲು ಮತ್ತು ಮೇಲ್ವಿಚಾರಣೆ ಮಾಡಲು ಕೇಂದ್ರೀಯ ರಿಜಿಸ್ಟ್ರಾರ್ ಕಛೇರಿಯು ಸಾಕಷ್ಟು ಸಿಬ್ಬಂದಿ ಬಲದೊಂದಿಗೆ ರಾಜ್ಯ ಮಟ್ಟದ/ ಕೇಂದ್ರಾಡಳಿತ ಪ್ರದೇಶ ಮಟ್ಟದ ಕಛೇರಿಗಳನ್ನು ಸ್ಥಾಪಿಸಬೇಕು.

ಸಮಿತಿಯು ತನ್ನ ವರದಿಯನ್ನು ನಿಗದಿತ ಸಮಯದೊಳಗೆ ಸಲ್ಲಿಸುವುದು ಮತ್ತು ಸಮಿತಿಯ ಶಿಫಾರಸ್ಸುಗಳ ಮೇಲೆ ತಕ್ಷಣದ ಅನುಸರಣಾ ಕ್ರಮವನ್ನು ಕೈಗೊಳ್ಳುವುದು ಹೆಚ್ಚು ಅವಶ್ಯಕವಾಗಿದೆ.

ಕೇಂದ್ರ ಕಛೇರಿ : "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ದೂ: 080–23449933/34
ಇ–ಸ್ಟಾಂಪಿಂಗ್ ವಿಭಾಗ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ಬೆಂಗಳೂರು ಪ್ರಾಂತೀಯ ಕಛೇರಿ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ: 080–23525546.
ಮೈಸೂರು ಪ್ರಾಂತೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299
ಬೆಳಗಾವಿ ಪ್ರಾಂತೀಯ ಕಛೇರಿ : 1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.
ಕಲಬುರಗಿ ಪಾಂತೀಯ ಕಛೇರಿ : ನಿವೇಶನ ಸಂಖ್ಯೆ 2284, ಕಾಡಾ ಕಛೇರಿ ಹತ್ತಿರ, ಧರಿಯಾಪುರ ಕೊಟನೂರ, ಜಿಡಿಎ ಬಡಾವಣೆ, ಕಲಬುರಗಿ–585102. ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., #68, 17th & 18th Cross, Margosa Road, Malleshwaram, Bengaluru-560 003